ಸಂಪುಟ ೧೨ ಸಂಚಿಕೆ ೩ ಸೆಪ್ಟೆಂಬರ್ 1991

# ಬ್ಯಾಂಕಿಂಗ್ ಪ್ರಪಂಚ



ರ್ಷಿಕ ಚಂದಾ : ರೂ. 15
ೀವ ಚಂದಾ : ರೂ. 150

## ಈ ಸಂಚಿಕೆಯಲ್ಲಿ



ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦ ೦೦೨

ಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

## ಸಂಪಾದಕೀಯ

# ಹೊಸ ಆರ್ಥಿಕ ನೀತಿ

ಪ್ರತಿಯೊಂದು ದೇಶವೂ ಆಗೊಮ್ಮೆ ಈಗೊಮ್ಮೆ ಸತ್ಯಕ್ಕೆ ಮುಖಾಮುಖಿಯಾಗಿ ನಿಲ್ಲಬೇಕಾಗುತ್ತದೆ. ಇತ್ತ ದರಿ, ಅತ್ತ ಪುಲಿ—ಎಂಬ ಪರಿಸ್ಥಿತಿಯನ್ನು ತಂದೊಡ್ಡಿಕೊಳ್ಳಬೇಕಾಗುತ್ತದೆ. ಏನು ಮಾಡಿದರೂ ಕಷ್ಟ, ಮಾಡದಿದ್ದರೂ ಅಪಾಯ ಎಂದು ತವಕಿಸಬೇಕಾಗುತ್ತದೆ. ಹೇಗಾದರೂ ಟೀಕೆ ಅನುಭವಿಸಬೇಕಾಗುತ್ತದೆ.

ನಮ್ಮ ದೇಶ ಆರ್ಥಿಕಕ್ಷೇತ್ರದಲ್ಲಿ ಈಚೆಗೆ ಈ ಬಗೆಯ ಪರಿಸ್ಥಿತಿಯನ್ನೆದುರಿಸಬೇಕಾಗಿತ್ತು. ರಾಜಕೀಯ ಅಸ್ಥಿರತೆ ಉಂಟಾಗಿತ್ತು. ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಯಾವುದೋ ಒಂದು ದಿಕ್ಕಿನಲ್ಲಿ ಸಾಗಿ, ಅದರೊಳಗಿನ ವೈರುಧ್ಯಗಳನ್ನು ಆಗಿಂದಾಗಲೇ ಗಮನಿಸದೆ ಮತ್ತು ಅವಕ್ಕೆ ಆಗಾಗಲೇ ಪರಿಹಾರಗಳನ್ನು ನಿಯೋಜಿಸದೆ ಇದ್ದುದರ ಫಲವಾಗಿ ಕೂಡಿಕೊಂಡು ಬಂದ ಸಮಸ್ಯೆ, ಅಂತರರಾಷ್ಟ್ರೀಯ ಪರಿಸ್ಥಿತಿ, ಪ್ರಗತಿಪ್ರಿಯರಿಗೆಲ್ಲ ಆದರ್ಶವೆನಿಸಿದ್ದ ಸೋವಿಯತ್ ವ್ಯವಸ್ಥೆಯೇ ಇಸ್ಪೀಟೆಲೆಗಳಿಂದ ಕಟ್ಟಿದ ಕನಸಿನ ಗೋಪುರದಂತೆ ಕುಸಿದುಬಿದ್ದುದರಿಂದ ಉಂಟಾದ ಮಾನಸಿಕ ಪರಿಣಾಮ—ಇವೆಲ್ಲದರ ಫಲವೋ ಎಂಬಂತೆ ಭಾರತದ ಅರ್ಥವ್ಯವಸ್ಥೆಯೂ ಕವಲುದಾರಿಯ ಬಳಿಗೆ ಬಂದು ನಿಂತಿತ್ತು.

ಏಳನೆಯ ಯೋಜನೆಯ ಅವಧಿಯಲ್ಲಿ ನಮ್ಮ ಅರ್ಥವ್ಯವಸ್ಥೆ 'ಹಿಂದೂ ಬೆಳವಣಿಗೆಯ ದರ'ವೆಂದು ಕುಖ್ಯಾತಿ ಗಳಿಸಿದ್ದ ಶೇ. 3.5ರ ವಾರ್ಷಿಕ ಬೆಳವಣಿಗೆ ದರದ ಸಂಕೋಲೆಯನ್ನು ಕಡಿದುಕೊಂಡು ಶೇ. 5.5ರ ಬೆಳವಣಿಗೆ ಸಾಧಿಸಿತ್ತು. ಕೃಷಿ–ಕೈಗಾರಿಕಾ ಕ್ಷೇತ್ರಗಳೆರಡರಲ್ಲೂ ಸಾಧಿಸಿದ ಬೆಳವಣಿಗೆಯಿಂದ ಆಶಾವಾದ ತಲೆಯೆತ್ತಿತ್ತು. ಮುಂದಿನ ಯೋಜನೆಯಲ್ಲಿ ಇನ್ನೂ ಮುಂದೆ ಮುಂದೆ ಸಾಗಬಹುದು ಎನಿಸುತ್ತಿತ್ತು.

ಆದರೆ ಇದರೊಂದಿಗೆ ಬೆಳೆದುಬಂದ ಕೆಲವು ಪ್ರವೃತ್ತಿಗಳು ಬೆದರಿಕೆ ಒಡ್ಡಿದ್ದುವು. ಈ ಬೆಳವಣಿಗೆಗೆ ನಾವು ತೆರಬೇಕಾಗಿ ಬಂದ ಬೆಲೆಯೇನು ಎಂಬುದನ್ನು ಕುರಿತ ಚಿಂತೆ ಬೆಳೆದಿತ್ತು. ಆಮದಿನ ಅತಿಯಾದ ಏರಿಕೆ, ಅದೇ ದರದಲ್ಲಿ ರಫ್ತು ಹೆಚ್ಚದ ಪರಿಸ್ಥಿತಿ, ಬೆಳೆಯುತ್ತಿದ್ದ ಆಂತರಿಕ ಹಾಗೂ ಬಾಹ್ಯ ಸಾಲ, ವಿದೇಶಿ ವಲಯದಲ್ಲಿದ್ದ ಅಸಮತೆಯಿಂದಾಗಿ ನಮ್ಮ ವಿದೇಶಿವಿನಿಮಯ ಶಿಲ್ಕಿನ ಇಳಿತ, ವಿದೇಶಿ ಸಾಲ ಮರುಪಾವತಿ ಹಾಗೂ ಬಡ್ಡಿ ಪಾವತಿಗಾಗಿ ನಮ್ಮ ರಫ್ತು ಸಂಪಾದನೆಯ ಗಣನೀಯ ಭಾಗದ ವಿನಿಯೋಗ, ರೂಪಾಯಿಯ ಬಾಹ್ಯ ಮೌಲ್ಯದ ದುರ್ಬಲತೆ, ಆಂತರಿಕವಾಗಿ ನಮ್ಮ ಬಜೆಟ್ ಕೊರತೆಯ ಏರಿಕೆಯಿಂದಾಗಿ ಹಾಗೂ ಆರ್ಥಿಕ ಶಿಸ್ತಿನ ಅಭಾವದಿಂದಾಗಿ ತೀವ್ರಗೊಳ್ಳುತ್ತಿದ್ದ ಹಣದುಬ್ಬರ ಹಾಗೂ ಬೆಲೆ ಏರಿಕೆ—ಇವೆಲ್ಲವೂ ಗಾಬರಿಹುಟ್ಟಿಸತೊಡಗಿದ್ದುವು. ಇದರ ಜೊತೆಜೊತೆಗೇ ಸಂಭವಿಸಿದ ಖಾರಿ ಬಿಕ್ಕಟ್ಟಿನಿಂದಾಗಿ ನಮ್ಮ ತೈಲ ಆಮದಿಗೆ ಪೆಟ್ಟು ಬಿತ್ತು; ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಯಿಂದಾಗಿ ನಮ್ಮ ವಿದೇಶಿ ವಿನಿಮಯ ಪರಿಸ್ಥಿತಿ ಇನ್ನಷ್ಟು ಕಠಿಣವಾಯಿತು. ಪಶ್ಚಿಮ ಏಷ್ಯಾ ಪ್ರದೇಶದಿಂದ ಹರಿದು ಬರುತ್ತಿದ್ದ ಅನಿವಾಸಿ ಭಾರತೀಯರ ವಿದೇಶಿ ವಿನಿಮಯದ ಧಾರೆಗೂ ಕಡಿತ ಬಿತ್ತು. ರೂಪಾಯಿಯ ಅಸ್ಥಿರತೆಯಿಂದಾಗಿಯೂ, ಭಾರತದ ವಿದೇಶಿ ಪಾವತಿ ಪರಿಸ್ಥಿತಿ ಬಲು ಸೂಕ್ಷ್ಮವಾದ್ದರಿಂದಲೂ. ಭಾರತ ತನ್ನ ವಾಗ್ದಾನಗಳನ್ನು ಪೂರೈಸಲಾರದೆಂಬ ಶಂಕೆ ಉದ್ಭವಿಸಿದ್ದರಿಂದಲೂ ಭಾರತದಲ್ಲಿ ವಿನಿಯೋಗವಾಗಿದ್ದ ವಿದೇಶಿ ಬಂಡವಾಳ ಇಲ್ಲಿಂದ ಪಲಾಯನ ಮಾಡುವ ಪ್ರವೃತ್ತಿ ತೋರಿತ್ತು. ಅನಿವಾಸಿ ಭಾರತೀಯರು ತಮ್ಮ ಹಣವನ್ನು ಇಲ್ಲಿಂದ ವಾಪಸು ಪಡೆದುಕೊಳ್ಳುವ ಮನಸ್ಸುಳ್ಳವರಾದರು. ಭಾರತದ ಸಾಲ ಮರುಪಾವತಿ ಸಾಮರ್ಥ್ಯದ ಮೇಲೆ ಕಣ್ಣಿಟ್ಟ ಪರಿಣತ ಅಂತರರಾಷ್ಟ್ರೀಯ ಸಂಸ್ಥೆಗಳು ಅಪಾಯದ ಬಾವುಟ ಹಾರಿಸಿದುವು. ಇನ್ನು ಮೇಲೆ ಭಾರತಕ್ಕೆ ಸಾಲ ನೀಡುವವರು ಎಚ್ಚರಿಕೆಯಿಂದಿರಬೇಕು, ಮುಂದೆ ನೀಡುವ ಸಾಲ ಸುಭದ್ರ ವಿನಿಯೋಜನೆಯೆನಿಸದು, ಸಟ್ಟಾ ಎನಿಸಿಕೊಂಡೀತು—ಎಂದು ಅವು ತಮ್ಮದೇ ಆದ ಪರಿಭಾಷೆಯಲ್ಲಿ ಸಾರಿದುವು; ಭಾರತದ ಋಣಪ್ರತ್ಯಯ ತೀರ ಕೆಳಮಟ್ಟಕ್ಕೆ ಜಾರುತ್ತಿದೆ ಎಂದುವು. ಮಾಮೂಲಾಗಿ ಹುಟ್ಟುತ್ತಿದ್ದ ಸಾಲವೂ ಹುಟ್ಟದ ಸ್ಥಿತಿ ಒಂದು ಕಡೆ, ಕೊಡಬೇಕಾದ ಸಾಲ ಕೊಡಲಾಗದಂಥ ಸಂಕಟ ಮತ್ತೊಂದು ಕಡೆ, ಸಾಲ ಮರುಪಾವತಿಯ ಕಂತು ತಪ್ಪಿಸಿದರೆ ಮುಂದೆ ಇನ್ನೂ ಸಂಕಷ್ಟ ಒದಗೀತೆಂಬ ಭಯ ಕಾತರ ಮಗುದೊಂದು ಕಡೆ—ಹೀಗೆ ಮೂರಾಬಟ್ಟೆಯಾಗಿ ಭಾರತ ತೊಳಲಾಡತೊಡಗಿತ್ತು.

ತತ್‌ಕ್ಷಣದಲ್ಲಿ ಮಾಡಬೇಕಾಗಿ ಬಂದ ಪಾವತಿಗಳನ್ನು ಪೂರೈಸಲೂ ಸಾಕಷ್ಟು ವಿದೇಶಿ ಹಣ ಲಭ್ಯವಿರಲಾರದೆಂಬ ಅಂಜಿಕೆ ಮೂಡಿತ್ತು, ವಾಣಿಜ್ಯ ವಲಯಗಳಿಂದಲೂ, ಅಧಿಕ ಬಡ್ಡಿ ದರಗಳಲ್ಲಿ ಕೂಡ, ಕಡ ದೊರಕದೆಂಬ ಸ್ಥಿತಿ ಉಂಟಾದಾಗ ಸದ್ಯದ ದರದು ಪೂರೈಕೆಗಾಗಿ ಸರ್ಕಾರ ತನ್ನಲ್ಲಿದ್ದ ಚಿನ್ನವನ್ನು ಪರಭಾರೆ ಮಾಡುವ ಅನಿವಾರ್ಯ ಪರಿಸ್ಥಿತಿ ಉಂಟಾಯಿತು. ಸರ್ಕಾರ ಹಿಡಿದಿಟ್ಟುಕೊಂಡ ಕಳ್ಳಸಾಗಣೆ ಚಿನ್ನದ ದಾಸ್ತಾನಿನಲ್ಲಿ ಇಪ್ಪತ್ತು ಟನ್ ಕೈಬಿಟ್ಟುಹೋಯಿತು. ಆರು ತಿಂಗಳ ಅನಂತರ ಅದೇ ಬೆಲೆಯಲ್ಲಿ ಆ ಚಿನ್ನವನ್ನು ಮತ್ತೆ ಕೊಳ್ಳಬಹುದೆಂಬ ಭರವಸೆಯ ಮೇಲೆ ಇದನ್ನು ಮಾರಲಾಯಿತು. ಅನಂತರ ಮತ್ತೆ ನಾಲ್ಕು ಕಂತುಗಳಲ್ಲಿ ಒಟ್ಟು 46.9 ಟನ್ ಚಿನ್ನ ಇಲ್ಲಿಂದ ಲಂಡನ್ನಿಗೆ ಸಾಗಿತು. ಅಲ್ಲಿ ಇದನ್ನು ಒತ್ತೆಯಾಗಿ ಇಟ್ಟು ಡಾಲರ್ ಸಾಲ ಪಡೆಯುವ ಅವಕಾಶವನ್ನು ರಿಸರ್ವ್ ಬ್ಯಾಂಕ್ ಪಡೆದುಕೊಂಡಿತು. ರಿಸರ್ವ್ ಬ್ಯಾಂಕ್ ತನ್ನ ಮೀಸಲು ಚಿನ್ನದಲ್ಲಿ ಶೇ. 15ರಷ್ಟನ್ನು ದೇಶದ ಹೊರಗಡೆ ಇಡಬಹುದೆಂಬ ಉಪಬಂಧವಿರುವುದು ನಮಗೆ ಈ ನಿಟ್ಟಿನಲ್ಲಿ ಅನುಕೂಲವಾಗಿ ಒದಗಿಬಂದಿತ್ತು.

ಇದೆಲ್ಲಾ ಬೀಸುವ ದೊಣ್ಣೆಯ ಪೆಟ್ಟು ತಪ್ಪಿಸಿಕೊಳ್ಳುವ ಪ್ರಯತ್ನ. ಏನೇ ಆಗಲಿ, ದೇಶ ತನ್ನ ಮಾತನ್ನು ಉಳಿಸಿಕೊಳ್ಳದೆ ಇರದು ಎಂಬುದನ್ನು ತೋರ್ಪಡಿಸಿಕೊಳ್ಳುವುದು ಅಗತ್ಯವಾಗಿತ್ತು. ಆದರೆ ಮುಂದಿನ ಕ್ರಮವೇನು ? ಇಂಥ ಸಂಕಟಸಮಯದಲ್ಲಿ ನೆರವಿಗೆ ಬರಲೆಂದೇ ಸ್ಥಾಪಿತವಾದ ಅಂತರರಾಷ್ಟ್ರೀಯ ಹಣ ನಿಧಿಯಿಂದ ಸಾಲ ಪಡೆಯಲು ಯತ್ನ ಮುಂದುವರಿದೇ ಇತ್ತು. ಆದರೆ ಸತತವಾಗಿ ಕೊರತೆಯಲ್ಲೇ ಇರುವ ವಿದೇಶಿ ಪಾವತಿ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳುವ ಕ್ರಮವೇನು ? ಪದೇ ಪದೇ ನಿಮ್ಮ ಮೈಮೇಲೆ ಈ ಪರಿಸ್ಥಿತಿ ಒಡ್ಡಿಕೊಳ್ಳದಂತೆ ನಿಮ್ಮ ಆರ್ಥಿಕತೆಯನ್ನು ಪುನಸ್ಸಂರಚಿಸುವ ಯತ್ನ ಮಾಡಿ—ಎಂಬುದು ಇಂಥ ಸಂದರ್ಭಗಳಲ್ಲಿ ಹಣ ನಿಧಿ ನೀಡುವ ಸಲಹೆ. ದೀರ್ಘಕಾಲದಿಂದ ಮುಂದುವರಿದ ಕೃತಕ ವ್ಯವಸ್ಥೆಗಳನ್ನೂ ಕಟ್ಟುಪಾಡುಗಳನ್ನೂ ದಿಗ್ಬಂಧನಗಳನ್ನೂ ಕಿತ್ತೊಗೆದು ಅರ್ಥವ್ಯವಸ್ಥೆ ಸಲೀಸಾಗಿ ಉಸಿರಾಡುವಂತೆ ಮಾಡಬೇಕು ಎಂಬ ಹಣ ನಿಧಿಯ ಸಲಹೆಗೆ ಮಣಿದು ಸರ್ಕಾರ ಹೀಗೆ ಮಾಡಿತೋ, ಇಲ್ಲವೇ ತಾನಾಗಿಯೇ ಮೂಡಿದ ಅರಿವಿನಿಂದ ಹೀಗೆ ಮಾಡಿತೋ—ಅಂತೂ ಅದು ಅನೇಕ ಮೂಲಭೂತ ಬದಲಾವಣೆಗಳನ್ನು ಮಾಡಲು ಮುಂದಾಯಿತು. ಮೊದಲನೆಯದಾಗಿ ಎರಡು ಹಂತಗಳಲ್ಲಿ ರೂಪಾಯಿಯ ಬಾಹ್ಯ ಮೌಲ್ಯವನ್ನು ಶೇ. 18ಕ್ಕೂ ಹೆಚ್ಚಾಗಿ ಕೊಚ್ಚಿಹಾಕಿತು. ಇದರಿಂದ ಭಾರತದ ಸರಕುಗಳು ಅನ್ಯ ದೇಶಗಳಿಗೆ ಅಗ್ಗವೆನಿಸಿ ರಫ್ತು ಹೆಚ್ಚುವುದೆಂಬುದು ತರ್ಕ. ರೂಪಾಯಿಯ ಇದಿರಿನಲ್ಲಿ ಇತರ ನಾಣ್ಯಗಳು ದುಬಾರಿ ಎನಿಸುವುದರಿಂದ ಆಮದೂ ದುಬಾರಿಯಾಗಿ ತಂತಾನೇ ಅದು ಕಡಿಮೆಯಾಗುವುದೆಂಬುದೂ ನಿರೀಕ್ಷೆ. ಆಮದಿಗೆ ಇದ್ದ ನಿರ್ಬಂಧಗಳನ್ನೂ ಕಿತ್ತು ಹಾಕಲಾಯಿತು. ರಫ್ತು ಮಾಡಿದರೆ ಆಮದಿಗೆ ಅವಕಾಶ ಎಂಬುದು ಹೊಸ ದರ್ಶನ.

ಜೊತೆಜೊತೆಗೇ ಸರ್ಕಾರ ನಮ್ಮ ಕೈಗಾರಿಕಾ ನೀತಿಯನ್ನೂ ಮೂಲಭೂತವಾಗಿ ಮಾರ್ಪಡಿಸಿದೆ. ಸರ್ಕಾರಿ ಉದ್ಯಮ ವಲಯದ ಯಜಮಾನಿಕೆ ಇರುವ ಮಿಶ್ರ ಅರ್ಥವ್ಯವಸ್ಥೆ ನಮ್ಮದಾಗಿತ್ತು. ಮೂಲ ಕೈಗಾರಿಕೆಗಳು ಸರ್ಕಾರಿ ವಲಯದಲ್ಲಿ ಬೆಳೆಯಬೇಕೆಂಬುದೂ ಆ ವಲಯಕ್ಕೆ ಮೀಸಲಾಗಿರದ ಉಳಿದವು ಖಾಸಗಿ ವಲಯದಲ್ಲಿರಬಹುದೆಂಬುದೂ ಸುಮಾರು ನಲವತ್ತು

ವರ್ಷಗಳಿಂದ ನಡೆದುಬಂದ ಕೈಗಾರಿಕಾ ನೀತಿಯ ಸಾರಭೂತ ಅಂಶ. ಯಾವ ಕೈಗಾರಿಕೆಯನ್ನು ಸ್ಥಾಪಿಸಬೇಕು, ಯಾವುದನ್ನು ಸ್ಥಾಪಿಸಬಾರದು. ಯಾವುದು ಎಷ್ಟು ಬೆಳೆಯಬೇಕು ಎಂಬ ತೀರ್ಮಾನವನ್ನು ಖಾಸಗಿಯವರಿಗೆ ಬಿಟ್ಟರೆ ದೇಶಕ್ಕೆ ಅಗತ್ಯವಾದ ಕೈಗಾರಿಕೆಗಳು ಬೆಳೆಯದೆ ಹೋಗಬಹುದು. ಖಾಸಗಿ ಒಡೆತನದ ಉದ್ಯಮಗಳು ಅಡ್ಡಾದಿಡ್ಡಿ ಬೆಳೆದು ಸಂಪತ್ತು ಕೆಲವರಲ್ಲೇ ಕೇಂದ್ರೀಕೃತವಾಗಬಹುದು, ಸಮಾಜದ ಹಿತಕ್ಕೆ ಇದರಿಂದ ಧಕ್ಕೆ ಉಂಟಾಗಬಹುದು—ಎಂಬ ಚಿಂತನೆಯೇ ಈ ಕೈಗಾರಿಕಾ ನೀತಿಗೆ ಪ್ರೇರಣೆ. ಈ ನಲವತ್ತು ವರ್ಷಗಳಲ್ಲಿ ಸರ್ಕಾರಿ ವಲಯದ ಉದ್ಯಮಗಳು ಅಗಾಧವಾಗಿ ಬೆಳೆದಿವೆ. ಆರ್ಥಿಕ ಅಧೋರಚನೆಯ ನಿರ್ಮಾಣ ಗಮನಾರ್ಹವಾಗಿ ಸಾಧ್ಯವಾಗಿದೆ.

ಆದರೆ ಯಾರು ಯಾವ ಕೈಗಾರಿಕೆ ಸ್ಥಾಪಿಸಬೇಕು, ಎಷ್ಟರವಟ್ಟಿಗೆ ಅದನ್ನು ಬೆಳೆಯಗೊಡಬೇಕು, ಉತ್ಪಾದನೆ ಎಷ್ಟಾಗಬೇಕು, ಬಂಡವಾಳ ಯಾವ ಮಿತಿಗೆ ಒಳಪಟ್ಟಿರಬೇಕು ಎಂಬುದನ್ನೆಲ್ಲ ನಿರ್ಣಯಿಸುವ ಸರ್ಕಾರದ ವ್ಯವಸ್ಥೆ ದಕ್ಷವೂ ನಿರ್ದುಷ್ಟವೂ ನಿಷ್ಪಕ್ಷಪಾತಿಯೂ ಆಗಿದ್ದಲ್ಲಿ ಮಾತ್ರ, ಅದರ ತೀರ್ಮಾನಗಳು ವೈಜ್ಞಾನಿಕವಾಗಿದ್ದಾಗ ಮಾತ್ರ, ಇದೆಲ್ಲ ಯಶಸ್ವಿಯಾಗುವುದು ಸಾಧ್ಯ. ಪರವಾನೆ–ಅನುಮತಿಗಳ ಆಡಳಿತದಿಂದ ಅನೈತಿಕ ಬೆಳವಣಿಗೆಗಳಾದುವು. ಸ್ಪರ್ಧಾತ್ಮಕವಾಗಿ ಕೈಗಾರಿಕೆ ಬೆಳೆಯಲಾರದೆ ಹೋಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಕೈಗಾರಿಕೆಗಳು ಸ್ಪರ್ಧಿಸಲಾರವಾದುವು. ಡಿನೋಸಾರುಗಳಂತೆ ಬೆಳೆದ ಸರ್ಕಾರಿ ವಲಯದ ಉದ್ಯಮಗಳೆಲ್ಲ ಲಾಭಪ್ರದವಾಗಲಿಲ್ಲ. ಈ ಕೈಗಾರಿಕೆಗಳೆಲ್ಲ ಲಾಭದೃಷ್ಟಿಯನ್ನೇ ತಳೆದಿರಬೇಕಾಗಿಲ್ಲವಾದರೂ, ಇವುಗಳ ದಕ್ಷತೆಯನ್ನಳೆಯಲು ಸರಿಯಾದ ಮಾನಗಳು (ನಾರ್ಮ್ಸ್) ಇಲ್ಲದ್ದರಿಂದಾಗಿ ಇವು ಸರ್ಕಾರಕ್ಕೆ ಹೊರೆಯಾದುವು. ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಆಂತರಿಕವಾಗಿ ಸಂಪಾದಿಸಿಕೊಳ್ಳಲಾರದ ಈ ಉದ್ಯಮಗಳು ಸರಕಾರದ ಬಜೆಟ್ ಕೊರತೆ ಹೆಚ್ಚಲು ಕಾರಣವಾದುವು.

ಈಗಿನ ಸರ್ಕಾರದ ಹೊಸ ಕೈಗಾರಿಕಾ ನೀತಿ ಒಮ್ಮಿಂದೊಮ್ಮೆಲೇ ಈ ಎಲ್ಲ ಕಟ್ಟುಪಾಡುಗಳನ್ನೂ ಸಡಿಲಿಸಿದೆ. ಬಹುತೇಕ ಕೈಗಾರಿಕೆಗಳ ಸ್ಥಾಪನೆ ವಿಸ್ತರಣೆಗಳಿಗೆ ಲೈಸೆನ್ಸ್ ಇನ್ನುಮುಂದೆ ಅಗತ್ಯವಿಲ್ಲ. ಏಕಸ್ವಾಮ್ಯ ಮತ್ತು ನಿರ್ಬಂಧಕ ವ್ಯಾಪ್ಯಾರ ಪದ್ಧತಿಗಳ ಅಧಿನಿಯಮದ ವಿಧಿನಿಯಮಗಳೂ ಸಡಿಲವಾಗಿವೆ. ಗುಣಮಟ್ಟಕ್ಕೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಹಲವು ಉದ್ಯಮಗಳಲ್ಲಿ ವಿದೇಶಿ ಬಂಡವಾಳವನ್ನು ಶೇ 51ರ ವರೆಗೂ ಬರಮಾಡಿಕೊಳ್ಳಬಹುದು. ರಫ್ತಿಗಾಗಿಯೇ ಸ್ಥಾಪಿತವಾದ ಉದ್ಯಮಗಳಲ್ಲಿ ಶೇ ನೂರಕ್ಕೆ ನೂರರಷ್ಟೇ ವಿದೇಶಿ ಬಂಡವಾಳವಿದ್ದರೂ ಚಿಂತೆಯಿಲ್ಲ ಎಂಬ ಭಾವನೆ ವ್ಯಕ್ತವಾಗಿದೆ. ಬಂಡವಾಳ ಸರಕು, ತಂತ್ರಜ್ಞಾನ ಮತ್ತು ಕಚ್ಚಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬೇಕಾದರೆ ವಿದೇಶಿ ವಿನಿಮಯ ಬೇಕು. ಆದರೆ ವಿದೇಶಿ ಬಂಡವಾಳವೇ ಬಂದರೆ ಅದರ ಒಡೆಯರು ತಾವಾಗಿಯೇ ಯಂತ್ರತಂತ್ರ ಸಾಮಗ್ರಿಗಳನ್ನು ತರುತ್ತಾರೆ. ಪರೋಕ್ಷವಾಗಿ ಇದು ವಿದೇಶಿ ವಿನಿಮಯದ ಕೊರತೆಯ ಪರಿಹಾರಕ್ಕೆ ಒಂದು ಉಪಾಯ ಎಂದು ಸರ್ಕಾರ ಭಾವಿಸಿದೆ. ಇದರಿಂದ ನಮ್ಮ ಉದ್ಯಮಗಳು ಪಾಶ್ಚಾತ್ಯ ಹಿತಗಳಿಗೆ ಅಧೀನವಾಗುವುವೆಂಬಂದಾಗಿ ಸರ್ಕಾರ ಭಾವಿಸುವುದಿಲ್ಲ. ಅರ್ಥವ್ಯವಸ್ಥೆಯ ಬೆಳವಣಿಗೆ ಸಾಧ್ಯವಾಗುವುದರಿಂದ ಅಂತಿಮವಾಗಿ ನಮಗೆ ಲಾಭ ಎಂಬ ಸರಳ ನಂಬಿಕೆ ಸರ್ಕಾರದ್ದು. ಸೋವಿಯತ್ ದೇಶವೇ ಈಗ ವಿದೇಶಿ ಹಿತಗಳನ್ನು ಕೈಬೀಸಿ ಕರೆಯುವಾಗ ನಮಗೇನೂ ಅಪಾಯವಿಲ್ಲ ಎಂದೇ ಸರ್ಕಾರ ಭಾವಿಸಿರುವಂತಿದೆ.

ಸರ್ಕಾರಿ ಉದ್ಯಮಗಳನ್ನು ಖಾಸಗೀಕರಣಗೊಳಿಸಲು ಸರ್ಕಾರ ಹಿಂದೆಗೆಯದು. ಹೇಗೆ ಮತ್ತು ಯಾವ ಉದ್ಯಮಗಳನ್ನು–ಎಂಬುದರ ಬಗ್ಗೆ ಚಿಂತನೆಯಿನ್ನೂ ಹೆಪ್ಪುಗಟ್ಟಬೇಕಾಗಿದೆ. ಅಂತೂ ತಾನು ಹೊತ್ತುಕೊಂಡ ಅಪಾರ ಭಾರವನ್ನು ಇಳಿಸಿ ಹಾಯಾಗಬೇಕೆಂಬ ಕಾತರ, ಸರ್ಕಾರಕ್ಕೆ. ಆ ಉದ್ಯಮಗಳು ಹೆಚ್ಚು ಸಂಪನ್ಮೂಲ ಒದಗಿಸಿಕೊಂಡು ವಿಕಾಸ ಹೊಂದಲು ಇದರಿಂದ ನೆರವಾದೀತೆಂದು ನಂಬಿಕೆ. ಸರ್ಕಾರಿ ವಲಯದಲ್ಲಿರುವ ಬ್ಯಾಂಕುಗಳ ಪ್ರಶ್ನೆಯೂ ಇದರಲ್ಲಿ ಅಡಕವಾಗಿದೆಯೆಂಬುದು ನಿರ್ವಿವಾದ.

ಸರ್ಕಾರಿ ವಲಯದ ಯಾವುದೇ ಉದ್ಯಮದ ಖಾಸಗೀಕರಣ ಎಂದೊಡನೆ ಮುಖ್ಯವಾಗಿ ಎದ್ದುನಿಲ್ಲುವ ಸಮಸ್ಯೆಗಳು ಹಲವಾರು. ಅದರಲ್ಲಿರುವ ಉದ್ಯೋಗಿಗಳ ಭವಿಷ್ಯ ಕುರಿತದ್ದು ಒಂದು ಮುಖ್ಯ ಸಮಸ್ಯೆ. ಸರ್ಕಾರಿ ವಲಯದ ಬ್ಯಾಂಕುಗಳು ರಾಷ್ಟ್ರೀಕರಣದ ಅನಂತರದ ಈ ಎರಡು ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಗಾತ್ರದಲ್ಲಿ ಅಗಾಧವಾಗಿ ಬೆಳೆದಿದ್ದರೂ ಅವುಗಳ ದಕ್ಷತೆ, ಉತ್ಪಾದಕತೆ, ಲಾಭಪ್ರದತೆ, ಸೇವಾತತ್ಪರತೆ, ಸ್ಪರ್ಧಾತ್ಮಕತೆಗಳು ಅಷ್ಟೇನೂ ಹೇಳಿಕೊಳ್ಳುವಂತಿಲ್ಲ ಎಂಬುದು ಸರ್ವವಿದಿತ. ಅವು ಇಂದು ವ್ಯಾಧಿಗ್ರಸ್ತವಾಗಿವೆ. ಸರ್ಕಾರ ನೇರವಾಗಿ ಅವುಗಳ ವ್ಯವಹಾರದಲ್ಲಿ ಕೈಹಾಕುತ್ತಿರುವುದೂ, ಅವಕ್ಕೆ ಸ್ವಾಯತ್ತೆ ನೀಡದಿರುವುದೂ ಇದಕ್ಕೆ ಕಾರಣವೆನ್ನಬೇಕು. ಬ್ಯಾಂಕ್ ಶಾಖೆಗಳ ಸಂಖ್ಯೆ ಅಗಾಧವಾಗಿ ಬೆಳೆದಿದೆ. ಹಲವಾರು ಶಾಖೆಗಳು ಅನಾರ್ಥಿಕವೆನಿಸಬಹುದು. ಬ್ಯಾಂಕಿಂಗ್ ಸಂರಚನೆಯನ್ನೇ ಸುಧಾರಿಸುವ ಅಗತ್ಯವೂ ಇದೆ. ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಿದರೆ ಹೊಸ ಆಡಳಿತ ವ್ಯವಸ್ಥೆ ಅವುಗಳ ಬೊಜ್ಜು ಕರಗಿಸುವ ಕ್ರಮ ತೆಗೆದುಕೊಳ್ಳಬಹುದು. ಸೇವಾಭದ್ರತೆಗೆ ಪೆಟ್ಟು ಬೀಳಬಹುದು. ಸರ್ಕಾರದ ಅತಿಯಾದ ನಿಯಂತ್ರಣವುಳ್ಳ ಸರ್ಕಾರಿ ವಲಯ ಒಂದು ತುದಿಯಾದರೆ, ಲಾಭವೊಂದೇ ಗುರಿಯಾಗಿ ಉಳ್ಳ, ಉಳಿದದ್ದೆಲ್ಲವನ್ನೂ ಇದಕ್ಕೆ ಅಧೀನಗೊಳಿಸುವ, ಖಾಸಗಿ ಒಡೆತನದ ವ್ಯವಸ್ಥೆ ಇನ್ನೊಂದು ತುದಿ. ಒಂದು ತುದಿಯಿಂದ ಇನ್ನೊಂದು ತುದಿಗೆ ನೆಗೆದಮಾತ್ರಕ್ಕೆ ಸ್ವರ್ಗವೇ ಕೈಗೆ ಎಟುಕೀತೆಂಬ ಭ್ರಮೆಯ ಪರಿಣಾಮ ನೆಟ್ಟಗಾಗದು.

ಬ್ಯಾಂಕಿಂಗ್ ವ್ಯವಸ್ಥೆಯನ್ನು ಪುನರ್ರೂಪಿಸಬೇಕೆಂಬುದಂತೂ ನಿರ್ವಿವಾದ. ಅದನ್ನು ಖಾಸಗೀಕರಿಸುವುದಿಲ್ಲವೆಂದು ಪ್ರಧಾನಿ ಹೇಳಿದ್ದಾರೆ. ಆದರೆ ಮುಂದೆ ಅದು ಹೇಗೆ ರೂಪುಗೊಳ್ಳಬೇಕು ? ಇತರ ಹಣಕಾಸು ಸಂಸ್ಥೆಗಳ ಸ್ವರೂಪ ಹೇಗಿರಬೇಕು? ಅವುಗಳ ದಕ್ಷತೆ ಮತ್ತು ಪರಿಣಾಮಕತೆಯನ್ನು ಸುಧಾರಿಸಲೂ, ಅವುಗಳ ಉತ್ತರವಾದಿತ್ವವನ್ನೂ ಲಾಭಪ್ರದತೆಯನ್ನೂ ಹೆಚ್ಚಿಸಲೂ ಏನು ಮಾಡಬೇಕು ? ಬ್ಯಾಂಕುಗಳ ಆಧುನಿಕೀಕರಣ, ಸ್ಪರ್ಧಾತ್ಮಕತೆಯ ಸುಧಾರಣೆ, ಬಂಡವಾಳದ ಪೂರೈಕೆ, ವಿವಿಧ ಹಣಕಾಸು ಸಂಸ್ಥೆಗಳ ಪಾತ್ರ—ಮುಂತಾದವನ್ನು ಕುರಿತು ಶಿಫಾರಸು ಮಾಡಲು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಎಂ. ನರಸಿಂಹನ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸರ್ಕಾರ ನೇಮಕ ಮಾಡಿದೆ. ಈ ಸಮಿತಿಯ ವರದಿ ಹೇಗಿದ್ದೀತೆಂಬುದನ್ನು ಈಗಲೇ ಹೇಳಲಾಗದು.

ಅಂತೂ ಸರ್ಕಾರದ ಹೊಸ ಆರ್ಥಿಕ ನೀತಿಯ ಪರಿಣಾಮವೇನೆಂಬುದು ದೊಡ್ಡ ಪ್ರಶ್ನೆ. ರೂಪಾಯಿಯ ಮೌಲ್ಯಭೇದನದಿಂದ ರಫ್ತು ಎಷ್ಟು ಹೆಚ್ಚುತ್ತದೆಂಬುದು ಪ್ರಶ್ನಾರ್ಹ. ಈಗಾಗಲೇ ಮತ್ತೆ ರೂಪಾಯಿಯ ಮೌಲ್ಯ ವಾಸ್ತವವಾಗಿ ಇನ್ನಷ್ಟು ಇಳಿದಿದೆಯೆಂಬ ಸುದ್ದಿಯಿದೆ, ಆಮದುಗಳನ್ನು ಅವಲಂಬಿಸಿದ ಕೈಗಾರಿಕೆಗಳ ಉತ್ಪಾದನ ವೆಚ್ಚ ಹೆಚ್ಚಿದೆ. ಕೈಗಾರಿಕೆಯಲ್ಲಿ ವಿದೇಶಿ ಸಹೋದ್ಯಮಪ್ರವೃತ್ತಿ ಇನ್ನುಮುಂದೆ ಬೆಳೆಯಬೇಕು. ಹಣದ ಅತಿಯಾದ ಹರಿವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳು ಬ್ಯಾಂಕಿನ ಮೇಲೂ ಪರಿಣಾಮ ಬೀರಿವೆ. ಅಧಿಕ ಬಡ್ಡಿ ದರದಿಂದ ಬ್ಯಾಂಕುಗಳು ಹೆಚ್ಚು ಠೇವಣಿ ಆಕರ್ಷಿಸಬಹುದಾದರೂ, ಇತರ ಸಂಸ್ಥೆಗಳು ಈ ಮೇಲಾಟದಲ್ಲಿ ಬ್ಯಾಂಕಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಭವಿಷ್ಯದ ವ್ಯವಸ್ಥೆ ಹೇಗಿದ್ದೀತೋ ಎಂಬ ಪ್ರಶ್ನೆಯಂತೂ ಇದ್ದೇ ಇದೆ.

ಸರ್ಕಾರವಂತೂ ಧೈರ್ಯದಿಂದ ಹೊಸ ನೀತಿ ಘೋಷಿಸಿದೆ. ಎಲ್ಲವೂ ಸರಿಯಾದರೆ ಇನ್ನು ಎರಡು ಮೂರು ವರ್ಷಗಳಲ್ಲಿ ಅಸಮತೋಲ ತೊಲಗಿ ಅರ್ಥವ್ಯವಸ್ಥೆಯ ಪುನಃಸಂಘಟನೆ ಸಾಧಿಸುವುದೆಂಬುದು ಸರ್ಕಾರದ ಆಶಾವಾದ. ಅದರೊಂದಿಗೇ ಬ್ಯಾಂಕುಗಳೂ ತೇಲಿ ದಡ ಸೇರಬೇಕಾಗಿದೆ. ●

# ಬಿ.ಸಿ.ಸಿ.ಐ. ಹಗರಣ

**ಕೆಟ್ಟ ವ್ಯವಹಾರ ಮಾಡುವ ಸಂಸ್ಥೆ ನಾಯಿಕೊಡೆಯಂತೆ ಬೇಗ ಬೆಳೆಯುತ್ತದೆ. ನ್ಯಾಯ ನೀತಿ ನಿಯಮಗಳನ್ನು ಪಾಲಿಸಬೇಕಾದ ಹೊಣೆ ಅದಕ್ಕಿಲ್ಲ. ವ್ಯಾಪಕವಾಗಿ ಹಬ್ಬಿ ಒಳ್ಳೆಯವರನ್ನೂ ಕೆಟ್ಟವರನ್ನೂ ವಂಚಕರನ್ನೂ ಪ್ರಾಮಾಣಿಕರನ್ನೂ ತನ್ನ ತೆಕ್ಕೆಯೊಳಕ್ಕೆ ತೆಗೆದುಕೊಳ್ಳುತ್ತದೆ. ಶೀಘ್ರ ಲಾಭದ ಆಸೆಯುಳ್ಳವರನ್ನೆಲ್ಲ ಸೇರಿಸಿಕೊಂಡ ಈ ಸಂಸ್ಥೆ ಹಠಾತ್ತನೆ ಕುಸಿದಾಗ ಸುತ್ತೆಲ್ಲ ಹಾಹಾಕಾರ; ನಂಬಿಕೆಗೇ ಸಂಚಕಾರ. ಯಾರು ಯಾರು ಇದರಲ್ಲಿ ಸೇರಿದ್ದರೆಂಬುದು ಬೆಳಕಿಗೆ ಬಂದಾಗ ಆಶ್ಚರ್ಯ.**

**ಸಿ. ಗೋವಿಂದಾಚಾರ್**
ವಾಣಿಜ್ಯಶಾಸ್ತ್ರ ಪ್ರವಾಚಕರು
ಆಚಾರ್ಯ ಪಾಠಶಾಲಾ ಕಾಲೇಜ್
ಎನ್. ಆರ್. ಕಾಲೊನಿ
ಬೆಂಗಳೂರು 19

ಸಮಗ್ರ ಹಣಕಾಸಿನ ವ್ಯವಸ್ಥೆಯಲ್ಲಿ ವಾಣಿಜ್ಯ ಬ್ಯಾಂಕುಗಳ ಪಾತ್ರ ಹಿರಿದಾದ್ದು. ಸಮಾಜದ ಹಣ ನಿಧಿಯ ಪ್ರವಿಸ್ತರಣೆ ಮಾಡಿ ಉಳಿತಾಯ ಮಾಡುವವರಿಗೂ ದೇಶದ ಅಭಿವೃದ್ಧಿಗೂ ನೆರವಾಗುವುದೇ ಬ್ಯಾಂಕುಗಳ ನೈತಿಕ ಹೊಣೆಯಾಗಿದೆ. ಆದರೆ ಲಾಭದಾಸೆಗಾಗಿ ಕಾನೂನುಬಾಹಿರವಾಗಿಯು ಗ್ರಾಹಕಕೋಟಿಯ ಹಾಗೂ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿಯೂ ಬ್ಯಾಂಕುಗಳು ನಡೆದುಕೊಂಡಾಗ 'ಇದು ನೀತಿಗೆಟ್ಟ ಸಂಸ್ಥೆ' ಎಂದು ಜನರು ಇವುಗಳ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುವರು. ಈಗ ಅಂತರರಾಷ್ಟ್ರೀಯ ಉದರಿ ಹಾಗೂ ವಾಣಿಜ್ಯ ಬ್ಯಾಂಕಿಗೆ (ಬಿಸಿಸಿಐ) ಈ ದುರ್ಗತಿ ಒದಗಿದೆ.

ಈ ಬ್ಯಾಂಕಿನ ಹಗರಣದ ದೃಷ್ಟಾಂತವನ್ನು ಸ್ಥೂಲವಾಗಿ ಪರೀಕ್ಷಿಸುವ ಮುನ್ನ ಕೆಲವು ಅಂಶಗಳನ್ನು ಗಮನದಲ್ಲಿಡಬೇಕಾಗಿದೆ :

1 ಇಸ್ಲಾಂ ಮತಧರ್ಮದ ಪ್ರಕಾರ ಬಡ್ಡಿಗೆ ಹಣ ಕೊಡುವ ಬ್ಯಾಂಕಿಂಗ್ ವ್ಯವಹಾರ ನಿಷಿದ್ಧ.

2 ಬ್ಯಾಂಕಿನ ಮೋಸದ ಪ್ರಕರಣಗಳು ಕಾನನ್ ಡಾಯಲ್ ಅಗಾಥಾ ಕ್ರಿಸ್ಟಿಗಳು ರುದ್ರಭೂಮಿಯಿಂದ ಎದ್ದುಬರುವಂತೆ ಅತ್ಯಂತ ನಯನಾಜೂಕಾದ ಕುತಂತ್ರಕೃತ್ರಿಮಗಳಿಂದ ಕೂಡಿದ್ದು.

3 ಗೊಂದಲ ಉಂಟುಮಾಡುವ ಹಾಗೂ ಅರ್ಥವಾಗದ ಸಂಘಟನೆಯ ಗೋಜಲು.

4 ಬಿಸಿಸಿಐನ ಜೀವನಚಕ್ರದಲ್ಲಿ 1990 ಅತ್ಯಂತ ಕರಾಳ ವರ್ಷ.

5 ಮೂಲವೇ ಸಿಗದ ಈ ಬ್ಯಾಂಕಿನ ಮೋಸಗಳಿಗೆ ಕಾರಣ ನಾನಲ್ಲ ತಾನಲ್ಲ ಎಂದು ಹೇಳಿ ಅಧಿಕಾರಿಗಳು ಜಾರಿಕೊಂಡಿದ್ದಾರೆ.

6 ಅರಬ್ ಸುಲ್ತಾನರಿಗೆ ಬ್ಯಾಂಕಿನ ಹಣ ಲಯವಾಗಿರುವುದು ಖಡ್ಗಮೃಗಕ್ಕೆ ಇರುವೆ ಕಚ್ಚಿದಂತೆ.

7 ಬಿಸಿಸಿಐ ಔದ್ಯಮಿಕ ಸಾಹಸದ ಪ್ರತೀಕ ಎಂಬುದು ನಿರ್ವಿವಾದ. ಆದರೂ ಅದು ಬ್ಯಾಂಕಿಂಗ್ ಚೌಕಟ್ಟಿನಲ್ಲಿಯ ನೈತಿಕ ಮೌಲ್ಯವನ್ನು ಮುರಿದು ವಿಶ್ವಾಸಘಾತಕ ಸಂಸ್ಥೆಯಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ.

## ಔದ್ಯಮಿಕ ಸಾಹಸ

'ವಿತ್ತಮಾಂತ್ರಿಕ', 'ಬ್ಯಾಂಕಿಂಗ್ ಕ್ಷೇತ್ರದ ನೆಪೋಲಿಯನ್', 'ಧರ್ಮಧುರೀಣ' ಮುಂತಾದ ಬಿರುದುಗಳಿಂದ ಪ್ರಸಿದ್ಧನಾದ ಪಾಕಿಸ್ತಾನದ ಆಗಾ ಹಸನ್ ಅಬಿದಿ ಬಿಸಿಸಿಐನ ಕರ್ತೃ. ಸೌದಿ ಅರೇಬಿಯಾದ ಹೆಸರಾಂತ ಸಿರಿವಂತ ಗೈತ್ ಫೆರಾನ್ ಹಾಗೂ ಕೆಲವು ಅರಬ್ ಕುಬೇರರ ಸಹಾಯದಿಂದ ಸ್ವಿಸ್ ಬ್ಯಾಂಕಿನಂತೆ ಗೋಪ್ಯತೆಗೆ ಪ್ರಸಿದ್ಧಿಯಾದ ಕೇಮಾನ್ ದ್ವೀಪದಲ್ಲಿ 1972ರಲ್ಲಿ 25 ಲಕ್ಷ ಡಾಲರ್ ಬಂಡವಾಳವನ್ನು ಹೂಡಿ ಅಬಿದಿ ಬಿಸಿಸಿಐಯನ್ನು ಸ್ಥಾಪಿಸಿದರು. ರಾಷ್ಟ್ರೀಕರಣದ ಬೆದರಿಕೆಯಿಂದ ಇದನ್ನು ಆದಷ್ಟು ಬೇಗ ಬಹುರಾಷ್ಟ್ರೀಯ ಬ್ಯಾಂಕಾಗಿ ಮಾಡಲು ಶ್ರಮಪಟ್ಟರು. 1973ರ ವಿಶ್ವ ತೈಲೋತ್ಪಾದನೆಯ ಉನ್ನತಿ ಲಕ್ಷಾಂತರ ಪೆಟ್ರೋಡಾಲರ್‌ಗಳನ್ನು ಬ್ಯಾಂಕಿಗೆ ತಂದುಕೊಟ್ಟಿತು. ಬ್ಯಾಂಕಿನ ದೈನಂದಿನ ವ್ಯವಹಾರಗಳನ್ನು ಆಕರ್ಷಕವಾಗಿ ಮಾಡಲಾಗಿತ್ತು. ಖಾತೆಯಿಂದ ಹಣ ಪಡೆಯಲು ಇತಿಮಿತಿಗಳಾವುವೂ ಇರಲಿಲ್ಲ, ಸಾಲ ಸಿಗುವ ಕ್ರಮ ಸುಲಭವಾಗಿತ್ತು. ಬಹುಮುಖ್ಯ ಗ್ರಾಹಕನಾಗಲಿ ಸಾಮಾನ್ಯ ಗ್ರಾಹಕನಾಗಲಿ ಇಬ್ಬರಿಗೂ ಒಂದೇ ತರಹದ ಸ್ವಾಗತ ಮತ್ತು ನಯವಿನಯಗಳಿಂದ ಕೂಡಿದ ನಡೆನುಡಿಗಳು ಇದ್ದುವು. ರಾಷ್ಟ್ರಾಧ್ಯಕ್ಷರಿಂದ ನಿರ್ಮಿತವಾದ ಧರ್ಮದತ್ತಿಸಂಸ್ಥೆಗಳಿಗೆ ಬ್ಯಾಂಕಿನಿಂದ ನೆರವು ದೊರೆಯುತ್ತಿತ್ತು. ಇದರಲ್ಲಿ ಕೆಲವು ಗ್ರಾಹಕರ ಹಾಗೂ ಸಿಬ್ಬಂದಿ ವರ್ಗದವರ ಪಾಲಿತ್ತು. ದುರ್ಬಲ ವರ್ಗದ ಗ್ರಾಹಕರಿಗೆ ಎಲ್ಲ ರೀತಿಯ ಸಹಾಯ ದೊರೆಯುತ್ತಿತ್ತು. ಉಗಾಂಡಾದ ಇಡಿ ಅಮೀನರಿಂದ ಬಹಿಷ್ಕರಿಸಲ್ಪಟ್ಟ ಅನೇಕ ಏಷಿಯನ್ನರು ಬ್ಯಾಂಕಿನಿಂದ ಕೇವಲ ಮಾತಿನ ಗ್ಯಾರಂಟಿಯಿಂದ ಸಾಲಗಳನ್ನು ಪಡೆದು ಚೇತರಿಸಿಕೊಂಡಿದ್ದಾರೆ. ಭುಟ್ಟೋ–ಹಕ್ಕರ ಕಾಲದಲ್ಲಿ ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿ ತೀರ ಹದಗೆಟ್ಟಾಗ ಬಿಸಿಸಿಐನ ಸಹಾಯ ಆರ್ಥಿಕ ಮುಗ್ಗಟ್ಟನ್ನು ನಿವಾರಿಸಲು ಒತ್ತುಕೊಟ್ಟಿತು. ಸಿರಿವಂತ ರಾಷ್ಟ್ರಗಳ ನಡುವೆ ಹಾಗೂ ದಕ್ಷಿಣಾರ್ಧ ಗೋಳದಲ್ಲಿರುವ ರಾಷ್ಟ್ರಗಳ ನಡುವೆ ಹಣರವಾನೆ ಸೌಲಭ್ಯವನ್ನು ಬಿಸಿಸಿಐ ಒದಗಿಸಿತ್ತು.

ಧೀಮಂತ ಗ್ರಾಹಕರನ್ನು ಬ್ಯಾಂಕಿನ ಬಲೆಗೆ ಬೀಳಿಸುವ ಅಬಿದಿಯ ಚತುರೋಪಾಯಗಳು ಶ್ಲಾಘನೀಯವಾದವು. (1) ನಿವೃತ್ತ ಸರ್ಕಾರಿ ಅಧಿಕಾರಿಗಳನ್ನು ನೇಮಿಸಿಕೊಂಡು ರಾಜನೀತಿನಿಪುಣರನ್ನು, ರಾಜಕಾರಣಿಕಗಳನ್ನು, ಅವರ ಸಂಬಂಧವಿರುವ ಸಿರಿವಂತರನ್ನು ಮತ್ತು ಅವರ ಪುತ್ರಪೌತ್ರರನ್ನು ಬ್ಯಾಂಕಿನ ಗ್ರಾಹಕರನ್ನಾಗಿ ಮಾಡಿಕೊಳ್ಳುತ್ತಿದ್ದರು. (2) ಲಾಹೋರ್ ಮತ್ತು ಹೈದರಾಬಾದ್ ಸುಂದರಿಯರನ್ನು ಮುಂದೆ ಬಿಟ್ಟು ಅರಬ್‌ದೊರೆಗಳನ್ನು ಮತ್ತು ಧನವಂತರನ್ನು ಬಲೆಗೆ ಹಾಕಿಕೊಳ್ಳುತ್ತಿದ್ದರು. ಲಂಡನ್ ಶಾಖೆಯ ವಿಶೇಷ ವೈಯಕ್ತಿಕ ಬ್ಯಾಂಕಿಂಗ್ ಸೇವಾ ವಿಭಾಗದ ವತಿಯಿಂದ ಭಾರಿ ಗ್ರಾಹಕರನ್ನು ಪ್ಯಾರಿಸ್ ಸುಂದರಿಯರ ಜೊತೆಯಲ್ಲಿ ವಿಮಾನ ನಿಲ್ದಾಣದಿಂದಲೇ ರೋಲ್ಸ್ ರಾಯ್ಸ್ ಕಾರಿನಲ್ಲಿ ಪಂಚತಾರಾ ಹೋಟೆಲ್‌ಗಳಿಗೆ ಬರಮಾಡಿಕೊಂಡು ರಾತ್ರಿಕ್ಲಬ್ ಭೋಜನಕೂಟಗಳನ್ನೇರ್ಪಡಿಸಿ ವಿಶೇಷ ಉದರಿಕಾರ್ಡಿನಿಂದ ಕೊಳ್ಳುವಿಕೆ ವ್ಯವಸ್ಥೆ ಮುಂತಾದ ಆತ್ಯಾಕರ್ಷಣೆಗಳಿಂದ ಅವರುಗಳನ್ನು ಗ್ರಾಹಕಜಾಲಕ್ಕೆ ಎಳೆಯಲಾಗಿದೆ. (3) ಬ್ಯಾಂಕ್ ಹುದ್ದೆ ಅಪೇಕ್ಷಿಸುವ ಅಭ್ಯರ್ಥಿಗೆ ರಾಷ್ಟ್ರಾಧ್ಯಕ್ಷರೋ, ಪ್ರಧಾನಮಂತ್ರಿಗಳೋ, ಮಿಲಿಟರಿ ಮಹಾ ದಂಡನಾಯಕರೋ ತಿಳಿದಿದ್ದಲ್ಲಿ, ಅಥವಾ ಅವರುಗಳ ಬಗ್ಗೆ ಮಾಹಿತಿ ಕೊಟ್ಟಲ್ಲಿ ಕೆಲಸ ಖಾಯಂ. ಹೀಗಾಗಿ ಅನೇಕ ದೇಶಗಳ ಸರ್ಕಾರಿ ಠೇವಣಿಗಳು ಹಾಗೂ ವಿಶ್ವಸಂಸ್ಥೆಯ ಕೆಲವು ಉಪಸಂಸ್ಥೆಗಳ ಠೇವಣಿಗಳು ಬ್ಯಾಂಕಿಗೆ ದಕ್ಕಿದುವು.

1990ರ ಪ್ರಾರಂಭಕ್ಕೆ ಬಿಸಿಸಿಐನ ವಹಿವಾಟುಗಳು ಬೃಹತ್ ಪ್ರಮಾಣಕ್ಕೇರಿದುವು. ಆಸ್ತಿಗಳ ಮೌಲ್ಯ 1972ರಲ್ಲಿ 1 ಕೋಟಿ ಡಾಲರುಗಳಿಂದ 1990ರಲ್ಲಿ 2 ಕೋಟಿ ಡಾಲರುಗಳಿಗೇರಿತು. 70 ದೇಶಗಳಲ್ಲಿ 400 ಶಾಖೆಗಳ ವ್ಯಾಪ್ತಿ, ಐರೋಪ್ಯ ಹಾಗೂ ಅಮೆರಿಕಾ ಹಣ ಪೇಟೆಯಲ್ಲಿ ಅಗ್ರಸ್ಥಾನ,

ಪೈಪೋಟಿಯಲ್ಲಿ ಮುನ್ನಡೆ ಇತ್ಯಾದಿಗಳಿಂದ ಬಿಸಿಸಿಐ ವಿಶ್ವದ 7ನೆಯ ಅತಿ ದೊಡ್ಡ ಖಾಸಗಿ ಬ್ಯಾಂಕಾಯಿತು. ಬೇರಾವ ಖಾಸಗಿ ಬ್ಯಾಂಕೂ ಇಷ್ಟು ಶೀಘ್ರದಲ್ಲಿ ಹಿಮಾಲಯ ಶಿಖರಕ್ಕೇರಿಲ್ಲ. ಸಂಯುಕ್ತ ಅರಬ್ ಎಮಿರೇಟ್ಸ್‌ನ 3 ಲಕ್ಷ ಪಾಕಿಸ್ತಾನಿಗಳಿಗೆ ಇದು ನೆಚ್ಚಿನ ಬ್ಯಾಂಕ್. ಬ್ಯಾಂಕಿನ ಸಿಬ್ಬಂದಿ ವರ್ಗದವರು, ಅದರಲ್ಲೂ ಉಚ್ಚ ನಿರ್ವಹಣೆಯಲ್ಲಿದ್ದವರು ಇವರೇ. ವಿದೇಶಿ ಶಾಖೆಗಳ ನಿರ್ವಹಣೆಯನ್ನು ಆಯಾ ಕೇಂದ್ರ ಬ್ಯಾಂಕುಗಳಿಗೆ (ವಿನಿಯಮನಕಾರರು)ಬಿಡಲಾಗಿತ್ತು. ಬ್ಯಾಂಕಿನ ವಿಶ್ವಾದ್ಯಂತ ನಿರ್ವಹಣೆ ಮತ್ತು ನಿಯಂತ್ರಣೆ ಲಗ್ಸೆಂಬರ್ಗ್ ದೇಶದಿಂದ ನಡೆಯುತ್ತಿತ್ತು. ಮೇಲ್ವಿಚಾರಣೆಯನ್ನು ಅಬಿದಿಯೇ ವಹಿಸಿಕೊಂಡಿದ್ದರು. ಬಿಸಿಸಿಐ ಪ್ರತಿನಿಧಿ ಬ್ಯಾಂಕುಗಳನ್ನು ಬಳಸುತ್ತಿತ್ತು.

## ಕರಾಳ ವರ್ಷ

ಕಾಲಚಕ್ರ ಉರುಳಿತು. ಅನಾರೋಗ್ಯದ ಕಾರಣ ಅಬಿದಿ ಬ್ಯಾಂಕನ್ನು ವಿಕ್ರಯಿಸಲು ನಿರ್ಧರಿಸಿದರು. 1990ರಲ್ಲಿ ಅಬು ದಾಬಿಯ ಸುಲ್ತಾನ್ ಹಾಗೂ ಅರಬ್ ಎಮಿರೇಟ್ಸ್‌ನ ಅಧ್ಯಕ್ಷ ಶೇಖ್ ಜಯಿದ್ ಬಿಸಿಸಿಐಯನ್ನು 50 ಕೋಟಿ ಡಾಲರುಗಳಿಗೆ ಕೊಂಡು ಶೇ. 77ರಷ್ಟು ಸ್ವಾಮಿತ್ವವನ್ನು ಹೊಂದಿದರು. ಬಿಸಿಸಿಐ ಒಂದು ಅಬು ದಾಬಿ ಸರ್ಕಾರಿ ಸಂಸ್ಥೆಯಾಯಿತು. ಅದರ ಸಂಘಟನೆಯ ರಚನೆಯಲ್ಲಿಯೂ ಬದಲಾವಣೆ ಕಂಡುಬಂದಿತು. ಸುಲ್ತಾನರ ಸ್ವಾಮಿತ್ವದಲ್ಲಿ ಬಿಸಿಸಿಐ ಹೋಲ್ಡಿಂಗ್ಸ್ ಎಸ್‌ಎ ಎಂಬ ಒಂದು ಸೂತ್ರಧಾರಿ ಸಂಸ್ಥೆಯೂ, ಲಗ್ಸೆಂಬರ್, ಸ್ವಿಟ್ಜರ್‌ಲೆಂಡ್ ಮತ್ತು ಕೇಮಾನ್ ದ್ವೀಪಗಳಲ್ಲಿ ತಲಾ ಒಂದೊಂದು ಸಹವರ್ತಿ ಸಂಸ್ಥೆಗಳೂ, ಉಳಿದ ಭಾಗದಲ್ಲಿ ಹಾಲೆಂಡಿನ 2 ಸಂಸ್ಥೆಗಳು ಹಾಗೂ 2 ಅಮೆರಿಕನ್ ಸಹವರ್ತಿ ಸಂಸ್ಥೆಗಳೂ ಇದ್ದುವು. ರಾಷ್ಟ್ರೀಕರಣದ ಅನಂತರ ಕೇಂದ್ರಾಡಳಿತ ಕಛೇರಿಯನ್ನು ಲಗ್ಸೆಂಬರ್ಗ್‌ನಿಂದ ಅಬು ದಾಬಿಗೆ ವರ್ಗಾಯಿಸಲಾಯಿತು. ಆ ವರ್ಷದಲ್ಲಿ ಸುಲ್ತಾನರು 70 ಕೋಟಿ ಡಾಲರುಗಳನ್ನು ಹಾಕಿ ಬ್ಯಾಂಕಿನ ಬಂಡವಾಳದ ಬುಡವನ್ನು ಭದ್ರಗೊಳಿಸಿದರು. ಆದರೆ ವಿಪತ್ತು ಕಾದಿತ್ತು. ದಿನಗಳುರುಳಿದುವು, ಬ್ಯಾಂಕಿನ ಅಧಿಕೃತ ಲೆಕ್ಕಪರಿಶೋಧನ ಸಂಸ್ಥೆಯಾದ ಪ್ರೈಸ್ ಮತ್ತು ವಾಟರ್‌ಹೌಸ್ ಬ್ಯಾಂಕಿನ ವಂಚನೆಯ ಜಾಲವನ್ನು ತನ್ನ ವರದಿಯಲ್ಲಿ ಬಹಿರಂಗಪಡಿಸಿತು. ವಿಶ್ವಾದ್ಯಂತ ಮಾಡಿದ್ದ ಅಕ್ರಮ ವ್ಯವಹಾರಗಳು ಒಂದೊಂದಾಗಿ ಸಾಬೀತಾದುವು. ಇವುಗಳ ಹಿನ್ನೆಲೆಯಲ್ಲಿದ್ದದ್ದು ಬ್ಯಾಂಕಿನ ವಿಶೇಷ ಸೇವಾ ವಿಭಾಗ. ಇದು ತೋರಿಕೆಯಲ್ಲಿ ಒಳ್ಳೆಯ ಇಲಾಖೆ. ಆದರೆ ಚರ್ಯೆಯಲ್ಲಿ ಬ್ಯಾಂಕಿನೊಳಗೇ ಒಂದು ಕಳ್ಳಕೂಟ. ಲಗ್ಸೆಂಬರ್ಗ್ ಕೇಂದ್ರಬ್ಯಾಂಕು ಇದನ್ನು 'ಬ್ಯಾಂಕಿನಲ್ಲಿ ಹಾವು' ಎಂದು ಎಚ್ಚರಿಸಿದೆ. ಇದರಲ್ಲಿ ಎರಡು ವಿಭಾಗಗಳಿವೆ: (1) ಕಪ್ಪುಜಾಲ—ಸುಳ್ಳು ದಸ್ತಾವೇಜುಗಳನ್ನು ಸೃಷ್ಟಿಸುವುದು, ಸುಳ್ಳು ಖಾತೆಯನ್ನು ಆರಂಭಿಸುವುದು ಮುಂತಾದ ಅವ್ಯವಹಾರಗಳನ್ನು ಮಾಡುವುದು ಇದರ ಕೆಲಸ. (2) ಕಪ್ಪು ದಳ—ಗೋಪ್ಯವಾದ ಅವ್ಯವಹಾರಗಳನ್ನು ಬಹಿರಂಗಪಡಿಸುವವರನ್ನು ಮುಗಿಸುವುದೇ ಇದರ ಕೆಲಸ. ಲೆಕ್ಕಪರಿಶೋಧಕರನ್ನೇ ಕತ್ತಲಲ್ಲಿರಿಸಿದ ಕೂಟಗಳಿವು. ಜುಲೈ ತಿಂಗಳಿನಿಂದ ಪ್ರತಿದಿನವೂ ಒಂದಲ್ಲ ಒಂದು ಮೋಸಪ್ರಕರಣ ಪ್ರಚಾರವಾಗುತ್ತಿದೆ. ಈ ಮೋಸಗಳ ವ್ಯೂಹದಲ್ಲಿ ಏನೇನಿದೆ ?

1 ಬ್ಯಾಂಕಿನ ಸರಿಯಾದ ಒಂದು ವಿಳಾಸವಿಲ್ಲ. ಅನುಕೂಲಕ್ಕೆ ತಕ್ಕಂತೆ ವಿಳಾಸಗಳಿವೆ. ಕೆಲವು ಕಾಲ್ಪನಿಕ. ನೊಂದವರು ಯಾರ ಮೇಲೆ ಎಲ್ಲಿ ಕ್ರಮ ಕೈಗೊಳ್ಳಬೇಕು ಎಂಬುದು ತಿಳಿದಿಲ್ಲ. ಹಾಗೆಯೇ ವಹಿವಾಟುಗಳು ಜರುಗಿದ ತಾರೀಖು, ಅವುಗಳ ಮೌಲ್ಯ, ಅಂಕಿಅಂಶಗಳು ಸರಿಯಾಗಿ ತಿಳಿಯವು.

2 ಅತಿ ಹೆಚ್ಚಿನ ಬಡ್ಡಿದರದಿಂದ ಠೇವಣಿಗಳನ್ನು ಆಕರ್ಷಿಸಿ ಅವುಗಳಿಂದ ಬ್ಯಾಂಕಿನ ಸಂಶಯಾತ್ಮಕವಾದ ವ್ಯವಹಾರಗಳನ್ನು ಮುಚ್ಚುವುದು. ಸುಮಾರು 60 ಕೋಟಿ ಡಾಲರುಗಳ ಠೇವಣಿ ಸ್ವೀಕರಿಸಿದ್ದಕ್ಕೆ ಪುಸ್ತಕಗಳಲ್ಲಿ ನಮೂದಿಲ್ಲ.

3 ಕಾಲ್ಪನಿಕವಾದ ಆಸ್ತಿಗಳನ್ನು ಸೃಷ್ಟಿಸಿ ಆಶ್ಚರ್ಯಕರವಾದ ರೀತಿಯಲ್ಲಿ ಹಣನಿಧಿಗಳ ಪ್ರವಿಸ್ತರಣೆ ಮಾಡುವುದು. ಬ್ಯಾಂಕಿಗೆ ಬೇಕಾದ ಗ್ರಾಹಕರಿಗೋ ಉನ್ನತ ಅಧಿಕಾರಿಗಳಿಗೋ ಅವರಿಂದ ನಾಮಿತವಾದ ವ್ಯಕ್ತಿಗೋ ಭಾರಿ ಸಾಲ ಮಂಜೂರು ಮಾಡಿ, ಆ ಹಣದಿಂದ ಅವರು ಬ್ಯಾಂಕಿನ ಶೇರುಗಳನ್ನು ಕೊಂಡು, "ನೋಡಿ, ಬ್ಯಾಂಕಿನ ಬಂಡವಾಳ ಭದ್ರವಾಗಿದೆ" ಎಂದು ಎತ್ತಿ ತೋರಿಸುವುದು, ಲಾಭಾಂಶವನ್ನು ಉಬ್ಬಿದಂತೆ ತೋರಿಸುವುದು, ನಷ್ಟವನ್ನು ಮರೆಮಾಡುವುದು ಇತ್ಯಾದಿ. ಈ ವ್ಯವಹಾರಗಳಿಗೆ ಕೇಂದ್ರಸ್ಥಾನ ಕೇಮಾನ್ ದ್ವೀಪ.

4 ಸಾಲದ ಮರುಪಾವತಿ ಇಲ್ಲ. ಗೋಕಲ್ಸ್ ಎಂಬ ಹಡಗಿನ ಸಂಸ್ಥೆಗೆ 70 ಕೋಟಿ ಡಾಲರ್ ಸಾಲ ಕೊಟ್ಟಿತ್ತು. ಈ ಸಂಸ್ಥೆಯ ಮಾಲೀಕರು ಅಬಿದಿಗೆ ತುಂಬಾ ಬೇಕಾದವರು. ಹಾಗೆಯೇ ಯಾವ ಒಪ್ಪಂದವೂ ಇಲ್ಲದೆ ಎ. ಆರ್. ಖಲೀಲ್ ಎಂಬ ಕಾಲ್ಪನಿಕ ವ್ಯಕ್ತಿಗೆ 15 ಕೋಟಿ ಡಾಲರ್ ಸಾಲ ಮಂಜೂರಾಗಿತ್ತು. ಗ್ರಾಹಕರ ಹೆಸರಿನಲ್ಲಿ ಅವರಿಗೇ ಗೊತ್ತಾಗದಂತೆ ಸಾಲ ಕೊಟ್ಟ ಹಾಗೆ ಮಾಡಿ ಆ ಹಣವನ್ನು ಗೌಪ್ಯ ಹಾಗೂ ರಕ್ಷಿತ ವ್ಯವಹಾರಗಳಿಗೆ ಉಪಯೋಗಿಸಲಾಗಿದೆ. ಇಂಥ 'ಭೂತಖಾತೆ'ಗಳು ಬೇಕಾದಷ್ಟಿವೆ.

5 ಬ್ಯಾಂಕ್ ಆಫ್ ಇಂಗ್ಲೆಂಡ್‌ಗೆ ಪರೋಕ್ಷವಾದ ಸಂಬಂಧವಿರುವ ಹಲವಾರು ಸಂಸ್ಥೆಗಳಿಗೆ ಆಧಾರರಹಿತವಾದ ಸಾಲಗಳನ್ನು, 1989ರಲ್ಲಿ 330 ಕೋಟಿ ಡಾಲರ್ ಸಾಲಗಳನ್ನು, ಕೇವಲ 22 ಬಹು ಮುಖ್ಯ ಗ್ರಾಹಕರಿಗೆ ಖಾತರಿಪಡೆಯದೆ ಕೊಡಲಾಗಿತ್ತು. 1987ರಿಂದ ಸುಮಾರು 300 ಕೋಟಿ ಡಾಲರ್ ನಗದು ಹಣ ನಾಪತ್ತೆಯಾಗಿದೆ. ಈ ಹಣವೆಲ್ಲ ಎಲ್ಲಿ ಹೋಯಿತು ?

"ನೀವು 'ಕಪ್ಪುಜಾಲದ' ಯಾರೊಬ್ಬನ ಖಾತೆ ತೆರೆದು ನೋಡಿ. ಅದರಲ್ಲಿ ಪಾಕಿಸ್ತಾನ, ಲಿಬಿಯ ಮತ್ತು ಅರ್ಜಂಟೀನಾಗಳ ಪರಮಾಣು ಯೋಜನೆಗೋ ಶಸ್ತ್ರಾಸ್ತ್ರಗಳ ವ್ಯವಹಾರಕ್ಕೋ, ಲ್ಯಾಟಿನ್ ಅಮೆರಿಕದ ಮಾದಕಶಿರೋಮಣಿಗಳಿಗೋ, ಅರಬ್–ಪಾಕಿಸ್ತಾನದ ಉಗ್ರಗಾಮಿಗಳಿಗೋ ಹಣ ಹೋಗಿರುವುದು ಸ್ಪಷ್ಟವಾಗಿ ಎದ್ದುಕಾಣುವುದು" ಎಂದು ಟೈಮ್ಸ್ ಪತ್ರಿಕೆ ಟೀಕೆಮಾಡಿದೆ. ಈ ಕಳ್ಳಕೂಟದಲ್ಲಿ 1,500 ಪರಿಣಿತರೂ 3,000 ವಂಚಕ ಪ್ರವೃತ್ತಿಯುಳ್ಳವರೂ ಅದ ಗ್ರಾಹಕರಿದ್ದಾರೆ. ವಿದೇಶಗಳಿಂದ ಅಕ್ರಮವಾಗಿ ಬಂದಿರುವ ಕಪ್ಪುಹಣವೇ ಈ ಹಣಕ್ಕೆ ಮೂಲ ಎಂದು ಪತ್ತೇದಾರಿ ಸಂಸ್ಥೆಗಳು ಹೇಳಿವೆ.

1988–89ರಲ್ಲಿ ಬಿಸಿಸಿಐನ ಕರ್ಮಕಾಂಡದ ಮೊದಲ ಸ್ಫೋಟವಾಯಿತು. ಕೊಲಂಬಿಯಾ ವಿಶ್ವದ ಮಾದಕವಸ್ತುಗಳ ರಾಜಧಾನಿ ಎಂದು ಪ್ರಸಿದ್ಧಿ. ಇದರ ಜೊತೆಗೆ ಪೆರು ಮತ್ತು ಪನಾಮಾ ದೇಶಗಳು ಸೇರಿ ಮಾದಕದ್ರವ್ಯ ಸೇರಿಸಿರುವ ದ್ರಾಕ್ಷಿ ಮತ್ತು ಬಾಳೇಹಣ್ಣುಗಳನ್ನು ಅಮೆರಿಕಾಕ್ಕೆ ರವಾನಿಸುತ್ತಿದ್ದುವು. ಫ್ಲಾರಿಡಾ ಪೊಲೀಸರು ಸಂಶಯಗೊಂಡು ತನಿಖೆ ಮಾಡಿ ನೋಡಿದಾಗ ಜಾಲ ಪತ್ತೆ ಆಯಿತು. ಈ ಅವ್ಯವಹಾರದ ಹಿನ್ನೆಲೆಯಲ್ಲಿ ಪನಾಮಾದ ನೊರಿಯೇಗಾ ಮತ್ತು ಪೆರುವಿನ ಆಲನ್ ಗಾರ್ಸಿಯ ಸೇರಿ ಒಟ್ಟು 90 ಮಂದಿ ಮಹಾನ್‌ಗಳಿದ್ದರು. ಇವರೆಲ್ಲರೂ ಬಿಸಿಸಿಐನ ಗ್ರಾಹಕರು. ಇಬ್ಬರ ಸರ್ಕಾರವೂ ಉರುಳಿತು. ಹೆರೊಯಿನ್ ಮಾರಿ ಬಂದ 3.6 ಕೋಟಿ ಡಾಲರ್ ಹಣಕ್ಕೆ ಗುಪ್ತಸ್ಥಳ ಪಾಕಿಸ್ತಾನದ ಶಾಖೆಗಳು.

"ಇದು ಎಂಥಾ ಬ್ಯಾಂಕ್ ಎಂದರೆ ಅಂತರರಾಷ್ಟ್ರೀಯ ಹುಚ್ಚರ ಹಾಗೂ ಕೊಕೇನ್ ಬ್ಯಾಂಕ್" ಎಂದು ಲಂಡನ್ ವ್ಯಾಪಾರ ಸಮುದಾಯ ಗೇಲಿ ಮಾಡಿದೆ.

ಜಮೇಕಾ ದೇಶದ ಋಣಭಾರವನ್ನು ತಗ್ಗಿಸಿ ಅಂತರರಾಷ್ಟ್ರೀಯ ಹಣನಿಧಿಯಿಂದ ಸಾಲ ಕೊಡಿಸುವ ಉದ್ದೇಶದಿಂದ ಅಧ್ಯಕ್ಷ ಎಡ್ವರ್ಡ್ ಸೆಗಾಗೆ ಬಿಸಿಸಿಐನಿಂದ 480 ಲಕ್ಷ ಡಾಲರುಗಳ ಸಾಲ ಮಂಜೂರಾಗಿತ್ತು. ಕ್ರಮೇಣ ಜಮೇಕಾ ಕೇಂದ್ರ ಬ್ಯಾಂಕಿನಿಂದ ಭವಿಷ್ಯ ಪ್ರತಿಫಲಗಳನ್ನು ಪಡೆಯುವುದೇ ಈ ವಹಿವಾಟಿನ ತಂತ್ರ. ಬಾಂಗ್ಲಾದೇಶದ ಮಾಜಿ ಅಧ್ಯಕ್ಷ ಎರ್ಷಾದ್ ಗೋಪ್ಯವಾಗಿ ಸ್ವಿಸ್ ಬ್ಯಾಂಕಿಗೆ 10 ಕೋಟಿ ಡಾಲರ್ ಹಣವನ್ನು ರವಾನಿಸಿದ್ದು ಸರ್ಕಾರ ಉರುಳಿದ ಮೇಲೆ ತಿಳಿಯಿತು. ಹೀಗೆಯೇ ಹವಾಯಿಯಲ್ಲಿ ನೆಲೆಸಿದ್ದ ಫಿಲಿಫೀನ್ಸ್‌ನ ಮಾಜಿ ಅಧ್ಯಕ್ಷ ಮಾರ್ಕೊಸ್ . ಬಿಸಿಸಿಐನ ಫಲಾನುಭವಿಗಳ ಪಟ್ಟಿಯಲ್ಲಿ ಜಿಮ್ಮಿ ಕಾರ್ಟರ್, ಜೇಮ್ಸ್ ಕ್ಯಾಲಹನ್, ಜಿಯಾ ಉಲ್ ಹಕ್ ಮುಂತಾದ ಗಣ್ಯರಿದ್ದರು. ಮಾತೃಸ್ಥಾನ ಗಳಿಸಿರುವ ಹೆಸರಾಂತ ಬ್ಯಾಂಕ್ ಆಫ್ ಇಂಗ್ಲೆಂಡ್ ಕೂಡ ಅವಹೇಳನಕ್ಕೆ ಗುರಿಯಾಗಿದೆ. ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ

ನಿಂತ ಅಭ್ಯರ್ಥಿಗಳಿಗೆ ಚುನಾವಣಾ ಪ್ರಚಾರಕ್ಕಾಗಿ ಭಾರಿ ಉಡುಗೊರೆ ಹಾಗೂ ಲಕ್ಷಾಂತರ ಡಾಲರುಗಳು ಬಿಸಿಸಿಐನಿಂದ ಬರುತ್ತಿತ್ತು.

ಭಾರತದ ಪರಮಾಣು ಯೋಜನೆಯ ಪ್ರಗತಿಯನ್ನು ಕಂಡ ಪಾಕಿಸ್ತಾನ ಹೇಗಾದರೂ ಮಾಡಿ ಇಸ್ಲಾಂ ಬಾಂಬ್ ತಯಾರಿಸಲೇಬೇಕು ಎಂದು ನಿರ್ಧರಿಸಿತು. ಈ ಕ್ರಿಯೆಯಲ್ಲಿ ಶ್ರಮಿಸುವವರಿಗೆ ಬಿಸಿಸಿಐನಿಂದ ಬೆಂಬಲವಿತ್ತು. ಇದೊಂದು ಅಪಾಯಕಾರಿ ಯೋಜನೆ ಎಂದು ಪಾಶ್ಚಾತ್ಯ ದೇಶಗಳು ಆಕ್ಷೇಪಿಸಿದ್ದುವು. ಇನಾಮುಲ್ ಹಕ್ ಮತ್ತು ಅರ್ಷಾದ್ ಪರ್‌ವೇಜ್ ಎಂಬ ಇಬ್ಬರು ಪಾಕಿಸ್ತಾನಿಗಳು ಅಮೆರಿಕಾ ಮತ್ತು ಕೆನಡಾ ಸೀಮಾಶುಲ್ಕ-ತೆರಿಗೆ ಇಲಾಖೆಯ ಕಣ್ಣು ತಪ್ಪಿಸಿ ಪರಮಾಣು ಅಸ್ತ್ರಗಳಿಗೆ ಬೇಕಾಗುವ ಮೂಲ ಹಾಗೂ ಸೂಕ್ಷ್ಮ ವಸ್ತುಗಳನ್ನು ರವಾನಿಸುತ್ತಿದ್ದಾಗ ಫ್ರಾಂಕ್‌ಫರ್ಟ್‌ನಲ್ಲಿ ಖೋಟಾ ಪಾಸ್‌ಪೋರ್ಟ್ ಸಮೇತ ಸಿಕ್ಕಿಬಿದ್ದರು. $3\frac{1}{2}$ ಲಕ್ಷ ಡಾಲರ್ ಮೊತ್ತದ ಈ ವಹಿವಾಟುಗಳನ್ನು ಬಿಸಿಸಿಐನ ಲಂಡನ್ ಮತ್ತು ಟೊರಾಂಟೊ ಶಾಖೆಗಳ ಮೂಲಕ ಮಾಡಲಾಗಿತ್ತು. ಸಿಐಎ, ಅಮೆರಿಕಾದ ರಕ್ಷಣಾ ಇಲಾಖೆ ಮತ್ತು ಬ್ರಿಟನ್ನಿನ ಎಂ-15 ಎಂಬ ಗೂಢಚಾರ ಸಂಸ್ಥೆಗಳು ರಹಸ್ಯ ವ್ಯವಹಾರಗಳನ್ನು ಮಾಡಲು ಬಿಸಿಸಿಐಯನ್ನು ಸಾಧನವಾಗಿ ಉಪಯೋಗಿಸುತ್ತಿದ್ದುವು. ಬ್ರಿಟನ್ನಿನ ಶಸ್ತ್ರಾಸ್ತ್ರಗಳ ವಿಕ್ರಯದ ಬಗ್ಗೆ ಮಾಹಿತಿ ಸಂಗ್ರಹಿಸಲು 500 ಗೂಢಚಾರರನ್ನು ಬಿಸಿಸಿಐ ಸಾಕುತ್ತಿತ್ತು. ಭಾರತದಲ್ಲಿ ಕೂಡ ರಿಲೈಯನ್ಸ್ ಸಂಸ್ಥೆ ಔದ್ಯಮಿಕ ಹಾಗೂ ತಾಂತ್ರಿಕ ವಿಚಾರ ವಿನಿಮಯದ ವ್ಯವಹಾರಗಳನ್ನು ಮಾಡಿದೆ ಎಂದು ಆಕ್ಷೇಪಣೆ ಇದೆ.

ಪ್ಯಾಲಸ್ತೀನಿನ ಹೆಸರಾಂತ ಉಗ್ರಗಾಮಿ ಬಿಸಿಸಿಐನ ಗಿರಾಕಿ. ಇವನು 1987ರಲ್ಲಿ ಕುವೈತ್‌ನಿಂದ ಲೂಟಿ ಹೊಡೆದ 60 ಕೋಟಿ ಡಾಲರುಗಳನ್ನು ತನ್ನ ಖಾತೆಗೆ ಹಾಕಿಕೊಂಡ. ಸುಳ್ಳು ಮೊಕ್ಕಾಮುನಾಮೆ ಮೂಲಕ ಲಕ್ಷಾಂತರ ಡಾಲರುಗಳಿರುವ ಖಾತೆಯನ್ನು ನಿರ್ವಹಿಸುತ್ತಿದ್ದ. ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿ ದೇಶಗಳಲ್ಲಿ ಶಸ್ತ್ರಾಸ್ತ್ರ ತಯಾರಿಕಾ ಸಂಸ್ಥೆಗಳಿಗೂ ಸಿಐಎಯಿಂದ ಪ್ರೇರಿತರಾದ ಅರಬ್ ಮತ್ತು ನಿಕರಾಗುವಾ ದಾಳಿಕಾರರಿಗೂ ಈ ಖಾತೆಗಳಿಂದ ಹಣ ಹೋಗುತ್ತಿತ್ತು. ಸದ್ದಾಮ್ ಹುಸೇನರಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದವರೆಲ್ಲರೂ ಬಿಸಿಸಿಐಗ್ರಾಹಕರೇ. ಪಾಕಿಸ್ತಾನ ಹಾಗೂ ಕಾಶ್ಮೀರದ ಉಗ್ರಗಾಮಿಗಳಿಗೆ ಭಾರತದ ಸಂಸತ್ ವ್ಯವಸ್ಥೆಯನ್ನು ನಾಶಮಾಡಲು ಬಿಸಿಸಿಐನಿಂದ ಬೆಂಬಲ ಹಾಗೂ ಪ್ರೇರಣೆ ಎರಡೂ ಇತ್ತು ಎಂದು ರಾಜಕೀಯ ಪಕ್ಷಗಳು ಆರ್ಭಟಿಸಿವೆ.

ಈ ಮೋಸಪ್ರಕರಣಗಳು 1990ರ ವರೆಗೆ ಗೋಪ್ಯವಾಗಿದ್ದದ್ದೇಕೆ? ಇದಕ್ಕೆಹಲವಾರು ಕಾರಣಗಳಿವೆ.

1 ಲಂಚಾವತಾರ: ಇದರಲ್ಲಿ ಸಿಐಎ, ಅಮೆರಿಕಾದ ರಕ್ಷಣಾ ಹಾಗೂ ನ್ಯಾಯಾಂಗ ಇಲಾಖೆ ರಾಷ್ಟ್ರಾಧ್ಯಕ್ಷರ ಖಾಸಾಗಳು—ರಾಜಕಾರಣಿಗಳು ಬಿಸಿಸಿಐನಿಂದ 'ಮಾಮೂಲು' ಪಡೆಯುತ್ತಿದ್ದರು. ಮೀರ್ ಸಾದಕ್‌ನಂತೆ, ಸಿಐಎ ಒಂದು ಕಡೆ ಬಿಸಿಸಿಐ ಮೂಲಕ ದಾಳಿಕಾರರನ್ನು ಬೆಂಬಲಿಸುತ್ತಿತ್ತು' ಮತ್ತೊಂದು ಕಡೆ ಸರ್ಕಾರಕ್ಕೆ ವರದಿಮಾಡಿ'ಭೇಷ್; ಎಂದೆನಿಸಿಕೊಳ್ಳುತ್ತಿತ್ತು. ಅಮೇರಿಕಾ ರಕ್ಷಣಾ ಇಲಾಖೆಯ ಮಾಜಿ ಕಾರ್ಯದರ್ಶಿ ಕ್ಲಿಫರ್ಡ್ I ಅಮೆರಿಕನ್ ಬ್ಯಾಂಕ್ ಶೇರ್ಸ್ ಎಂಬ ಸಂಸ್ಥೆಯನ್ನು ಬಿಸಿಸಿಐ ಅಧೀನಕ್ಕೆ ತರಲು ಬಹಳ ಶ್ರಮಿಸಿದ್ದ. ಇದರ ಪ್ರತಿಫಲವಾಗಿ ಈತನನ್ನು ಬ್ಯಾಂಕಿನ ಅಧ್ಯಕ್ಷನನ್ನಾಗಿ ಮಾಡಲಾಯಿತು. ಈ ಸ್ವಾಧೀನ ವ್ಯವಹಾರವನ್ನು ಉನ್ನತ ಅಧಿಕಾರಿಗಳು ಒಂದು ದಶಕದ ವರೆಗೆ (1980–90) ಅಮೆರಿಕಾದ ಕೇಂದ್ರ ಬ್ಯಾಂಕಿಗೆ ತಿಳಿಸದೆ ರಹಸ್ಯವಾಗಿಟ್ಟಿದ್ದರು. ಅಮೆರಿಕಾದ ಸೀಮಾಶುಲ್ಕ ತೆರಿಗೆ ಇಲಾಖೆಯನ್ನು ಬಿಸಿಸಿಐ ಖರೀದಿಸಿದೆ ಎಂದೇ ಹೇಳಬೇಕು. ಅಮೆರಿಕಾದ ಕೇಂದ್ರ ಬ್ಯಾಂಕಿಂಗ್ ವ್ಯವಸ್ಥೆಯ ಮುಖ್ಯಸ್ಥ ಪಾಲ್ ವೋಲ್ಕರರ ಕೈಯನ್ನು ಬೆಚ್ಚಗೆ ಮಾಡುವ ಯತ್ನ ಫಲಿಸಲಿಲ್ಲ. ಈ ಲಂಚಾವತಾರದಲ್ಲಿರುವವರನ್ನೆಲ್ಲಾ ಪತ್ತೇದಾರಿ ಸಂಸ್ಥೆಗಳು ಛೀಮಾರಿ ಮಾಡಿವೆ. ಸಿಐಎಯ ವರದಿಯ ಮೇರೆಗೆ ಅಮೆರಿಕದ ಕೇಂದ್ರ ಬ್ಯಾಂಕಿಂಗ್ ವ್ಯವಸ್ಥೆ ಬಿಸಿಸಿಐಗೆ 20 ಕೋಟಿ ಡಾಲರ್ ದಂಡವನ್ನು ವಿಧಿಸಿ ವ್ಯವಹಾರಗಳನ್ನು ಮುಂದುವರಿಸಕೂಡದು ಎಂದು ಸುಗ್ರೀವಾಜ್ಞೆ ಹೊರಡಿಸಿ ಬ್ಯಾಂಕಿನ ಉನ್ನತ ಅಧಿಕಾರಿಗಳನ್ನು ವಜಾಮಾಡಿತು. ಇದರಲ್ಲಿ ಅಬಿದಿ ಗೈತ್‌ಫರಾನರೂ ಸೇರಿದ್ದರು. ಅಬಿದಿಯಿಂದ ರಾಜೀನಾಮೆ ಪತ್ರ ಬಂತು. ಮಿಕ್ಕವರು ಬೇರೆಬೇರೆ ಶಾಖೆಗಳಲ್ಲಿ ಸಲಹಾಗಾರರಾಗಿ ಮರಳಿಬಂದರು.

2 ಕಪ್ಪುದಳದ 'ಹತ್ಯೆ'ಯ ಹೆದರಿಕೆ ಗೌಪ್ಯತೆಗೆ ಮತ್ತೊಂದು ಕಾರಣವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ 3 ಜನ ಸಾವಿಗೀಡಾಗಿದ್ದಾರೆ. "ನನ್ನೊಡನೆಯಾವ ಅಧಿಕಾರಿಗಳೂ ಸಮಾಲೋಚನೆ ಮಾಡಲಿಲ್ಲ" ಎಂದು ವಿಷಾದಿಸಿ "ಬ್ಯಾಂಕಿನ ಇಂದಿನ ಸ್ಥಿತಿಗೆ ವಂಚನೆಯೇ ಕಾರಣ. ನಷ್ಟವಲ್ಲ'' ಎಂದು ಸ್ಪಷ್ಟಪಡಿಸಿ ಈ ಅವ್ಯವಹಾರಗಳು ರಾಷ್ಟ್ರೀಕರಣಕ್ಕೆ ಮುಂಚೆಯೇ ಜರುಗಿವೆ ಎಂದು ಸುಲ್ತಾನರು ನುಡಿದರು.

## ಅಸ್ತಮಾನ

ಲೆಕ್ಕಪರಿಶೋಧಕರು ಅಂತಿಮ ವರದಿಯನ್ನು ಕೊಡುವ ಸಮಯಕ್ಕೆ ಬಿಸಿಸಿಐನ ಗ್ರಾಹಕ ಸಮುದಾಯವು ಸುಮಾರು 500 ಕೋಟಿ ಡಾಲರುಗಳ ನಷ್ಟವನ್ನು ಅನುಭವಿಸಿದೆ.

"ಜಟಿಲವಾದ ಹಾಗೂ ಅಸಾಧಾರಣವಾದ ಈ ವಂಚನೆಗಳು ಈ ಶತಮಾನದಲ್ಲಿ ಹಾಗೂ ಬ್ಯಾಂಕಿಂಗ್ ಚರಿತ್ರೆಯಲ್ಲೇ ಕಂಡುಬರುವುದಿಲ್ಲ. ಈ ಶ್ರೀಮಂತ ಅಪರಾಧದಿಂದ ಬಿಸಿಸಿಐ ಒಂದು ಅವಿಶ್ವಾಸ ಸಂಸ್ಥೆಯಾಗಿದೆ" ಎಂದು ಪ್ರೈಸ್-ವಾಟರ್‌ಹೌಸ್ ಹೇಳಿದೆ. ಅನಂತರ ಒಂದರ ಮೇಲೊಂದು ಚುಚ್ಚು ಮಾತುಗಳು ಮತ್ತುವ್ಯಂಗ್ಯ ಟೀಕೆಗಳು ಎರಗಿದುವು.

1 ಅಂತರರಾಷ್ಟ್ರೀಯ ಕುಟಿಲ ಜನ ಹಾಗೂ ವಂಚಕರ ಬ್ಯಾಂಕ್ ಎಂದಿತು ಪಾಶ್ಚಾತ್ಯ ಪತ್ರಿಕಾ ಮಾಧ್ಯಮ.

2 "ವಂಚಿಸುವುದೇ ಇದರ ಸಂಸ್ಕೃತಿ" ಎಂದರು ಬ್ಯಾಂಕ್ ಆಫ್ ಇಂಗ್ಲೆಂಡಿನ ಗವರ್ನರ್ ಪೆಂಬರ್‌ಟನ್.

3 "ನಿಜಕ್ಕೂ ಇದೊಂದು ಭಾರಿ ಹಣಕಾಸಿನ ಸಂಚು" ಎಂದಿತು ವಾಷಿಂಗ್‌ಟನ್ ಪೋಸ್ಟ್.

4 "ಇಂಥ ಟೀಕೆ ಚಪ್ಪರಗಳಿಂದ ಬ್ಯಾಂಕಿನ ನಿಜವಾದ ಹೆಸರೇ ಜ್ಞಾಪಕಕ್ಕೆ ಬರುವುದಿಲ್ಲವಲ್ಲ" ಎಂದು ಲುಕ್ಸೆಂಬರ್ಗ್ ಕೇಂದ್ರ ಬ್ಯಾಂಕ್ ಗೇಲಿ ಮಾಡಿದೆ.

ಬಿಸಿಸಿಐಯನ್ನು ಸಮಾಪ್ತಗೊಳಿಸಲು ಬ್ಯಾಂಕ್ ಆಫ್ ಇಂಗ್ಲೆಂಡ್ ಟಚ್ ಮತ್ತು ರಾಸ್ ಎಂಬ ಸಂಸ್ಥೆಯನ್ನು ಅಧಿಕೃತ ಸಮಾಪಕರನ್ನಾಗಿ ನೇಮಿಸಿತು. ಲಕ್ಸೆಂಬರ್ಗ್, ದಕ್ಷಿಣ ಕೊರಿಯ, ಹಾಲೆಂಡ್, ಫಿಲಿಫೀನ್ಸ್ ಮತ್ತು ಚೀನಾ ಶಾಖೆಗಳು ಮುಚ್ಚಲ್ಪಟ್ಟವು. ಸಿಯರಾಲಿಯನ್ ಮತ್ತು ಕ್ಯಾಮರೂನ್‌ಗಳಲ್ಲಿರುವ ವಿಶ್ವಸಂಸ್ಥೆಯ ಖಾತೆಗಳನ್ನು ಸ್ಥಗಿತಗೊಳಿಸಲಾಯಿತು. ಸಮಾಪ್ತೀಕರಣ ಎಲ್ಲೆಲ್ಲೂ ಕಾಳ್ಗಿಚ್ಚಿನಂತೆ ವ್ಯಾಪಿಸಿ ಠೇವಣಿದಾರರು ಎಚ್ಚರಗೊಂಡರು. ಭಾರತ ಮತ್ತು ಪಾಕಿಸ್ತಾನವೂ ಸೇರಿ ಒಟ್ಟು 15 ದೇಶಗಳಲ್ಲಿ ಬಿಸಿಸಿಐ ಚೆನ್ನಾಗಿಯೇ ಕೆಲಸ ಮಾಡುತ್ತಿತ್ತು ಎಂದು ಅದು ಹೇಳಿಕೊಂಡಿದೆ.

ಇಸ್ಪೀಟ್ ಎಲೆಗಳಿಂದ ಕಟ್ಟಿದ ಮನೆಯಂತೆ ಬಿಸಿಸಿಐ ಕುಸಿಯಿತು. ಗ್ರಾಹಕರ ಕಾರ್ಪಣ್ಯದ ಗೋಳು ಹೇಳತೀರದು. ಉದರಿ ಸೌಲಭ್ಯ ಇಂದೋ ನಾಳೆಯೋ ಸಿಗಬಹುದೆಂಬ ನಿರೀಕ್ಷೆಯಿಂದ ನಿದ್ದೆ ಮಾಡದಿದ್ದವರಿದ್ದರು. ಆಮದು ವ್ಯಾಪಾರ ಮತ್ತು ಹಡಗಿನ ಮೂಲಕ ರವಾನಿಸಬೇಕಾದ ಸರಕುಗಳು ಅಲ್ಲಲ್ಲೇ ನಿಂತವು. ಬಿಸಿಸಿಐನ ಮೂಲಕ ವ್ಯವಹಾರ ಎಂದೊಡನೆ ಇತರ ಬ್ಯಾಂಕುಗಳು ಉದರಿ ಪತ್ರದ ಸೌಲಭ್ಯವನ್ನು ನಿರಾಕರಿಸಿದುವು. ನೌಕರರಿಗೆ ಸಂಬಳ ಕೊಡಲು ಹಣವಿಲ್ಲ. ಹೋಟೆಲ್ ಮಾಲೀಕರಿಗೆ ಪದಾರ್ಥಗಳನ್ನು ಕೊಳ್ಳಲು ಹಣವಿಲ್ಲ. ವಿದೇಶಿ ಹುಂಡಿಗಳಿಂದ ಬರಬೇಕಾದ ಹಣ ಗಾಳಿಮಾತಾಯಿತು. ಬ್ಯಾಂಕಿನ 14,000 ನೌಕರರ ಪೈಕಿ ಸುಮಾರು 10,000 ಜನ ಕೆಲಸ ಕಳೆದುಕೊಂಡರು. 2,000ಕ್ಕೂ ಹೆಚ್ಚು ನೌಕರರು ಜೂನ್-ಜುಲೈ ಸಂಬಳವನ್ನು ತೆಗೆದುಕೊಂಡಿಲ್ಲ. ಭೋಜನಕ್ಕೆಂದು ಹೋಗಿ ಮರಳಿಬಂದ ನೌಕರರಿಗೆ 'ಮುಚ್ಚಲಾಗಿದೆ' ಎಂಬ ಫಲಕ ನೋಡಿ ಆಶ್ಚರ್ಯವಾಯಿತು. ವಿಶ್ವದ ಶೇರು ಪೇಟೆಗಳಲ್ಲಿ ಬಿಸಿಸಿಐ ಶೇರುಗಳ ವಹಿವಾಟು ನಿಂತಿತು. ಅನೇಕ ಕ್ರೀಡಾಪಟುಗಳು ತಮ್ಮ ಆಜೀವ ಉಳಿತಾಯವನ್ನು ಕಳೆದುಕೊಂಡರು.

ಇಂಗ್ಲೆಂಡಿನ 1,20,000 ಗ್ರಾಹಕರ ಪೈಕಿ ಏಷಿಯನ್ನರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಗೃಹ

ನಿರ್ಮಾಣ, ಹಣಕಾಸು ಸಂಸ್ಥೆಗಳು, ಪುರಸಭೆಗಳು ಕಹಿ ಅನುಭವಿಸಿದುವು. ಇಲ್ಲಿಯವರೆಗೆ ನಡೆದ ಮೋಸ ಪ್ರಕರಣಗಳು ಗೊತ್ತಿದ್ದೂ ಕೇಂದ್ರ ಬ್ಯಾಂಕ್ ಮೌನವಾಗಿದ್ದದ್ದೇಕೆ ಎಂಬ ಯಕ್ಷಪ್ರಶ್ನೆಗೆ ಬ್ಯಾಂಕ್ ಆಫ್ ಇಂಗ್ಲೆಂಡ್ ಸರಿಯಾದ ಉತ್ತರ ಕೊಡದೆ ಜಾರಿಕೊಂಡಿದೆ. ಎರಡೂ ಬ್ಯಾಂಕುಗಳನ್ನು ಕೋರ್ಟಿಗೆಳೆಯಲು ಕೆಲವು ಗ್ರಾಹಕರು ಹವಣಿಸುತ್ತಿದ್ದಾರೆ. ಸಂಸತ್ ಭವನದ ಮುಂದೆ ನಿತ್ಯ ಪ್ರದರ್ಶನ ಹಾಗೂ ಪ್ರತಿಭಟನೆ ನಡೆಯುತ್ತಿದೆ. ಅಮೇರಿಕಾದಲ್ಲಿ ನಿವೃತ್ತರ ಠೇವಣಿ,ಸಣ್ಣ ಉಳಿತಾಯ ಹಾಗೂ ಸಾಲ ಸಂಸ್ಥೆಗಳು ಮುಳುಗಿದುವು. ಟೋಕಿಯೋದಲ್ಲಿ ಬಿಸಿಸಿಐ ಆಸ್ತಿಯನ್ನು ಗ್ರಾಹಕರಿಗೆ ಹಂಚಲು ಮುಡುಪಾಗಿಡಲಾಗಿದೆ.ಪಾಕಿಸ್ತಾನದ ಬಿಸಿಸಿಐ ಮಹಾನ್‌ಗಳು ಈಗ ಸಹಕಾರಿ ರಂಗಕ್ಕೆ ಜಾರಿದ್ದಾರೆ.

ಬೊಂಬಾಯಿಯ ಶಾಖೆ 1983ರಲ್ಲಿ ಆರಂಭವಾಯಿತು. 1986ರಲ್ಲಿ ಇದರ ಅವ್ಯವಹಾರಗಳನ್ನು ಅಂದಿನ ಜಾರಿಪಾಲನ ನಿರ್ದೇಶಕರಾದ ಭುರೆಲಾಲರು ಬಹಿರಂಗಪಡಿಸಿ ಬಿಸಿಸಿಐನ ಲೈಸನ್ಸ್ ಅನ್ನು ರದ್ದುಗೊಳಿಸಲು ಕೇಂದ್ರಸರ್ಕಾರಕ್ಕೆ ಶಿಫಾರ್ಸು ಮಾಡಿದ್ದರು. ಆರ್‌ಬಿಐ ಇದಕ್ಕೆ ಕಿವಿಗೊಡಲಿಲ್ಲ. ಬಿಸಿಸಿಐ ಸಂಬಂಧವಿರುವ ರಿಲೈಯನ್ಸ್ ಸಂಸ್ಥೆಯಿಂದ ಎಫ್‌ಇಆರ್‌ಎ ಮತ್ತು ವರಮಾನ ತೆರಿಗೆ ಕಾಯ್ದೆಯ ಉಲ್ಲಂಘನೆ ಆಗಿದೆ ಎಂದು ಆಪಾದನೆ ಇದೆ. 6–7–91ರಂದು ಬೊಂಬಾಯಿ ಶಾಖೆಯನ್ನು ಮುಚ್ಚಲಾಯಿತು. ಒಟ್ಟು 7,000 ಗ್ರಾಹಕರ ಪೈಕಿ 4,000 ಭಾರತೀಯ ಅನಿವಾಸಿಗಳು (ಎಫ್ ಸಿ ಎನ್ ಆರ್ ಠೇವಣಿ) ಇದ್ದಾರೆ.

### ಮುಂದೇನು ?

ಎಲ್ಲೆಲ್ಲೂ ವಿಚಾರಣಾ ಸಮಿತಿಗಳು, ಸಮಾಧಾನಕರವಾದ ಮಾತುಗಳು, ಭರವಸೆಗಳು ಈಗ ಉದ್ಭವಿಸಿವೆ. ಹೊಸ ಬ್ಯಾಂಕು ಅಥವಾ ಬಿಸಿಸಿಐನಂತೆ ಒಂದು ಬದಲಿ ಸಂಸ್ಥೆಯನ್ನು ಸ್ಥಾಪಿಸಲು ಸಲಹೆಗಳು ಬರುತ್ತಿವೆ. ಕಾಲುಭಾಗಕ್ಕೂ ಹೆಚ್ಚು ವಿದೇಶಿ ಠೇವಣಿಗಳು ಫೆರಾ ಉಲ್ಲಂಘನೆಯ ಕಾರಣದಿಂದ ಬಿಸಿಸಿಐ ಗ್ರಾಹಕರಿಗೆ ದಕ್ಕುವುದಿಲ್ಲ ಎಂದು ವಕೀಲ ಸಲಹೆಗಾರರು ಹೇಳಿಕೆಯನ್ನಿತ್ತಿದ್ದಾರೆ. ಈ ಗ್ರಾಹಕರಿಗೆ ಕಳ್ಳನಿಗೆ ಚೇಳು ಕುಟುಕಿದಂತಾಗಿದೆ. ಬಿಸಿಸಿಐನ ವಿನಿಯಮನದಾರರು ಹಾಗೂ ಅಬು ದಾಬಿಯ ಪ್ರತಿನಿಧಿಗಳು ಸೂಕ್ತ ಪರಿಹಾರಕ್ಕಾಗಿ ಚಡಪಡಿಸುತ್ತಿದ್ದಾರೆ. "ನಾನು ಯಾವ ತ್ಯಾಗಕ್ಕೂ ಸಿದ್ಧನಾಗಿದ್ದೇನೆ ಬಿಸಿಸಿಐನ ಪುನರ್ನಿರ್ಮಾಣಕ್ಕೆಂದು ಎಷ್ಟು ಹಣ ಬೇಕಾದರೂ ಹಾಕುತ್ತೇನೆ"ಎಂದು ಸುಲ್ತಾನರು ಸಾರಿಸಾರಿ ಹೇಳಿದ್ದಾರೆ. ಚೆನ್ನಾಗಿ ನಡೆಯುತ್ತಿರುವ 15 ಶಾಖೆಗಳನ್ನು ಕೊಳ್ಳಲು ಬಿಸಿಸಿಐನ ಸಹವರ್ತಿ ಸಂಸ್ಥೆಗಳು ಮುಂದೆ ಬಂದಿವೆ. ಎಲ್ಲರ ದೃಷ್ಟಿ ವಿನಿಯಮನದಾರರ ಮೇಲೆ ಹಾಗೂ ಸುಲ್ತಾನರ ಪುನರ್ನಿರ್ಮಾಣದ ಯೋಜನೆಯ ಮೇಲಿದೆ. ಅದು ವಿಫಲವಾದರೆ ಯಾರಿಗೂ ಏನೂ ಸಿಗದು. 2,000 ಕೋಟಿ ಡಾಲರ್‌ಗಳ ಆಸ್ತಿಯಲ್ಲಿ ಎಷ್ಟು ಪ್ರಾಪ್ತವಾಗಬಹುದು ಎಂಬುದು ಖಚಿತವಾಗಿ ತಿಳಿದಿಲ್ಲ. ಇವೆಲ್ಲಾ ಕಾರ್ಯರೂಪಕ್ಕೆ ಬರುವುದು ವಿಳಂಬವಾಗಬಹುದು.

ಅತಿ ಆಸೆ ಪಡದೆ ದೊಡ್ಡವರ ಸಹವಾಸದಿಂದ ದೂರವಿರುವ ನೀತಿಯನ್ನನುಸರಿಸಿ ಮುನ್ನಡೆಯುವುದೇ ಗ್ರಾಹಕ ಸಮುದಾಯಕ್ಕಿರುವ ಸರಿಯಾದ ಮಾರ್ಗ. ●

# ಬದಲಾದ ಸಣ್ಣ ಕೈಗಾರಿಕಾ ನೀತಿ

ಅಲ್ಪ ಮತದ ಆಧಾರದ ಮೇಲೆ ಬಂದಿರುವ ಹೊಸ ಸರ್ಕಾರ ಬಹು ದೊಡ್ಡ ಆರ್ಥಿಕ ಬದಲಾವಣೆಗಳ ನೀತಿಗಳನ್ನು ಘೋಷಿಸುತ್ತಿದೆ. ಒಂದರ ಹಿಂದೊಂದರಂತೆ ಬಾರಿಸುತ್ತಿರುವ ಈ ಹೊಸ ಅಲೆಗಳಲ್ಲಿ ಸಣ್ಣ ಕೈಗಾರಿಕಾ ನೀತಿಯೂ ಒಂದು. ಇದರ ವಿವರ, ವಿವೇಚನೆ ಇಲ್ಲಿದೆ.

ಬಿ. ಎಸ್. ಚಂದ್ರಶೇಖರ
**ಭಾರತೀಯ ಸ್ಟೇಟ್ ಬ್ಯಾಂಕ್**
**ನಗರಶಾಖೆ. ಬೆಂಗಳೂರು 2**

ಕೇಂದ್ರ ಸರಕಾರ ಪ್ರಕಟಿಸಿರುವ ಹೊಸ ಸಣ್ಣ ಕೈಗಾರಿಕಾನೀತಿ ಹಲವು ದೃಷ್ಟಿಗಳಿಂದ ಸ್ವಾಗತಾರ್ಹ. ಬಂಡವಾಳದ ಕೊರತೆ, ಹುಂಡಿಗಳ ಪಾವತಿಯಲ್ಲಿ ವಿಳಂಬ, ವಿವಿಧ ರೀತಿಯ ಕಾನೂನಿಕ ನಿರ್ಬಂಧಗಳು, ಗುಣಮಟ್ಟದ ಕೊರತೆಯೇ ಮುಂತಾದ ಅನೇಕ ಬಾಧೆಗಳಿಂದ ಪೀಡಿತವಾಗಿರುವ ಸಣ್ಣ ಕೈಗಾರಿಕಾ ಕ್ಷೇತ್ರ ಈ ಹೊಸ ನೀತಿಯಿಂದ ಭರವಸೆ ತಳೆದಿದೆ.

ಸೂಕ್ಷ್ಮ ವಿವರಗಳನ್ನು ಚರ್ಚಿಸುವ ಮೊದಲು ಹೊಸ ಕೈಗಾರಿಕಾ ನೀತಿಯನ್ನು ಸ್ಥೂಲವಾಗಿ ಗಮನಿಸಬಹುದು. ಪುಟ್ಟ ಕೈಗಾರಿಕಾ ವಲಯ (ಟೈನಿ ಸೆಕ್ಟರ್), ಕೈಮಗ್ಗ ಹಾಗೂ ಕರಕುಶಲ ವಿಭಾಗ ಕುರಿತ ನೀತಿಯೂ ಈ ಹೊಸ ನೀತಿಗಳಲ್ಲಿ ಅಂತರ್ಗತವಾಗಿದೆ. ಸಣ್ಣ ಕೈಗಾರಿಕಾ ಕ್ಷೇತ್ರದ ಬಂಡವಾಳ ಹಾಗೂ ಉದರಿ ಕೊರತೆಯನ್ನು ನಿವಾರಿಸಲು ಆದ್ಯತೆ ನೀಡಲಾಗಿದೆಯೆಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಸಣ್ಣ ಕೈಗಾರಿಕೆಗಳಲ್ಲಿ ಶೇ. 24 ರಷ್ಟು ಸಾಮ್ಯ ಬಂಡವಾಳದೊಂದಿಗೆ ಭಾಗವಹಿಸಲು ವಿದೇಶೀ ಕಂಪನಿಗಳೂ ಸೇರಿದಂತೆ ಇತರ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಿರುವುದು ; ಹೊಸ ಅಥವಾ ನಿಷ್ಕ್ರಿಯ (ನಾನ್ ಆಕ್ಟೀವ್') ಪಾಲುದಾರರ ಹೊಣೆಯನ್ನು ಅವರು ಹೂಡಿದ ಬಂಡವಾಳಕ್ಕೆ ಸೀಮಿತಗೊಳಿಸಲು 'ಪರಿಮಿತ ಪಾಲುದಾರಿಕೆ ಅಧಿನಿಯಮ' ರಚಿಸುವ ನಿರ್ಧಾರ ; ಹುಂಡಿಗಳು ಸಕಾಲದಲ್ಲಿ ಪಾವತಿಯಾಗುವಂತೆ ಶಾಸನ ; ಸಣ್ಣ ಕೈಗಾರಿಕೆಗಳ ಉದರಿ ಬೇಡಿಕೆಯನ್ನು ಸಂಪೂರ್ಣವಾಗಿ ಈಡೇರಿಸುವ ಘೋಷಣೆ ; ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನಿಂದ ಅಭಿಕರಣ ಸೇವೆಗಳ ಆರಂಭ ; 20 ಲಕ್ಷ ರೂ. ವರೆಗೆ ಬ್ಯಾಂಕುಗಳಿಂದ ಸಂಘಟಿತ ಸಾಲ (ಕಾಂಪೊಸಿಟ್ ಲೋನ್) ನೀಡಿಕೆ ; ರಾಷ್ಟ್ರೀಯ ಬಂಡವಾಳ ಯೋಜನೆಯ ವ್ಯಾಪ್ತಿಯ ವಿಸ್ತರಣೆ ಮುಂತಾದ ಅಂಶಗಳು ಗಮನ ಸೆಳೆಯುತ್ತವೆ.

ಕೈಗಾರಿಕೆಗೆ ಸಂಬಂಧಿಸಿದ ಸೇವಾಘಟಕಗಳನ್ನು ಪುಟ್ಟ ಕೈಗಾರಿಕೆ ಎಂದು ಗುರುತಿಸುವ ನಿರ್ಧಾರ, ಪುಟ್ಟ ಕೈಗಾರಿಕೆಗೆ ವಿಧಿಸಲಾಗಿದ್ದ ಬಂಡವಾಳಮಿತಿಯನ್ನು 5 ಲಕ್ಷ ರೂ.ಗೆ ಏರಿಸಿರುವುದು, ಪುಟ್ಟ ಕೈಗಾರಿಕೆಗೆ ಹೆಚ್ಚಿನ ಬೆಂಬಲ—ಇವು ಪುಟ್ಟ ಕೈಗಾರಿಕಾ ವಲಯಕ್ಕೆ ಸಂಬಂಧಿಸಿದ ಮುಖ್ಯ ನಿಲುವುಗಳು.

### ಕಟ್ಟುಪಾಡುಗಳ ಸಡಿಲಿಕೆ, ಹೊಸ ದೃಷ್ಟಿ

ಸ್ಥಳೀಯ ಕಚ್ಚಾ ಸರಕನ್ನು ಒದಗಿಸುವಲ್ಲಿ ಸಣ್ಣ ಹಾಗೂ ಪುಟ್ಟ ಕೈಗಾರಿಕೆಗಳಿಗೆ ಆದ್ಯತೆ, ಸರ್ಕಾರಿ ವಲಯದ ಘಟಕಗಳು ಮತ್ತು ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ—ಇವುಗಳ ಸಹಭಾಗಿತ್ವದಿಂದ ಉತ್ಪನ್ನಗಳ ದೇಶೀಯ ಮತ್ತು ಅಂತರ್ದೇಶೀಯ ಮಾರಾಟಗಾರಿಕೆಗೆ ನೆರವು, ಕೈಮಗ್ಗ ಹಾಗೂ ಕರಕುಶಲ ವಿಭಾಗಗಳಿಗೆ ವಿಶೇಷ ಯೋಜನೆ—ಇವು ಇನ್ನೊಂದು ಗುಂಪಿಗೆ ಸೇರುವ ನೀತಿಗಳು, ಇದಲ್ಲದೆ ರಾಷ್ಟ್ರೀಯ ಕರಕುಶಲ ಅಭಿವೃದ್ಧಿ ನಿಗಮ, ಸಣ್ಣ ಕೈಗಾರಿಕಾ ನಿಗಮಗಳ ಪಾತ್ರ ಹೆಚ್ಚಿಸುವ ಹಾಗೂ ಕಟ್ಟುಪಾಡುಗಳನ್ನು ಸಡಿಲಿಸಿ ಸಣ್ಣ ಕೈಗಾರಿಕಾ ಕ್ಷೇತ್ರವನ್ನು ಸರಕಾರಿ ಅಧಿಕಾರ ವರ್ಗದ ಅತಿನಿಯಂತ್ರಣದಿಂದ

ಪಾರುಮಾಡುವ ಆಶ್ವಾಸನೆಗಳನ್ನು ನೀಡಲಾಗಿದೆ.

ಉತ್ಪನ್ನಗಳ ಗುಣಮಟ್ಟವನ್ನು ಏರಿಸುವ ಮತ್ತು ಆಧುನಿಕೀಕರಣದ ದೃಷ್ಟಿಯೂ ಪ್ರಾಮುಖ್ಯ ಪಡೆದಿರುವಂತೆ ತೋರುತ್ತದೆ. ಕೇವಲ ಸಹಾಯ ಧನ, ರಿಯಾಯಿತಿಗಳಿಗೆ ಒತ್ತು ನೀಡುವ ಈಗಿನ ನಿಲುವು ಬದಲಾಗಿ ಬಳಕೆದಾರರು ಬಯಸುವ ಉತ್ಪನ್ನಗಳ ತಯಾರಿಕೆಗೆ ಆದ್ಯತೆ ನೀಡುವ ಆಲೋಚನೆ ಬಂದಿದೆ. ಈಗಿರುವ ಜನತಾ ವಸ್ತ್ರ ಯೋಜನೆಗೆ ಬದಲು ಕೈಮಗ್ಗಗಳ ಆಧುನಿಕೀಕರಣಕ್ಕೆ ಹಣಕಾಸು ನಿಧಿ ಒದಗಿಸುವ ಒಂದು ಹೊಸ ಯೋಜನೆಯ ಸೂಚನೆ; ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನಿಂದ ಆಧುನಿಕೀಕರಣಕ್ಕೆ ಹಣಕಾಸು ನೆರವು ನೀಡಲು ಘಟಕಗಳ ಗುಚ್ಛವನ್ನು ಗುರುತಿಸುವುದು ; ಆಧುನಿಕೀಕರಣ ಮತ್ತು ತಂತ್ರಜ್ಞಾನದ ದರ್ಜೆ ಏರಿಕೆಗೆ ಶೀಘ್ರದಲ್ಲೇ ಒಂದು ಪ್ರತ್ಯೇಕವಾದ ಯೋಜನೆ—ಇವೇ ಮುಂತಾದವು ಸಣ್ಣ ಕೈಗಾರಿಕಾ ನೀತಿಯಲ್ಲಿ ಹೊಸ ದೃಷ್ಟಿಯನ್ನು ಸೂಚಿಸುವ ಅಂಶಗಳು.

## ಅಗ್ಗವಾದ ಉದರಿಯಲ್ಲ, ಸಾಕಷ್ಟು ಮತ್ತು ಸಕಾಲಿಕ ಉದರಿ

ಈ ವರೆಗೆ ಸಣ್ಣ ಕೈಗಾರಿಕೆಗೆ ನೀಡುವ ಉದರಿ ನೀತಿಯು ಸಣ್ಣ ಕೈಗಾರಿಕೆಯು ಉದರಿ ಅಗ್ಗವಾಗಿದ್ದು ಹಣಕಾಸು ಸಂಸ್ಥೆಗಳ ಲಾಭಪ್ರದತೆಗೆ ಧಕ್ಕೆಯಾಗುವ ಸಂಭವವಿತ್ತು. ಬದಲಾದ ನೀತಿಯಲ್ಲಿ ಉದರಿಯ ಪ್ರಮಾಣ ಮತ್ತು ಸಕಾಲಕ್ಕೆ ಅದನ್ನು ನೀಡುವುದಕ್ಕೆ ಒತ್ತು ದೊರೆತಿದೆ. ರಾಜ್ಯ ಹಣಕಾಸು ಸಂಸ್ಥೆಗಳು ನೀಡುತ್ತಿದ್ದ ರೀತಿಯ ಸಂಘಟಿತ ಸಾಲಗಳು ಇನ್ನು ಮುಂದೆ ಬ್ಯಾಂಕುಗಳ ಮೂಲಕವೂ ದೊರೆಯಲಿರುವುದರಿಂದ ಉದ್ಯಮಿಗಳಿಗೆ ಅನುಕೂಲ. ಇಂಥ ಸಾಲಗಳು 20 ಲಕ್ಷ ರೂ ನ ಗರಿಷ್ಠ ಮಿತಿಗೊಳಪಟ್ಟಿರುವುದಲ್ಲದೆ ಅಂತರ್ಗತವಾದ ಬಂಡವಾಳ ಉದರಿಯನ್ನು 10 ಲಕ್ಷ ರೂ.ಗಳಿಗೆ ಮಿತಿಗೊಳಿಸಲಾಗಿದೆ. ಒಂದೇ ಕಡೆ ಸಾಲ ಸಿಗುವುದರಿಂದ ಹೊಸ ಘಟಕಗಳಿಗೆ ಇಲ್ಲಿ ಹೆಚ್ಚಿನ ಅನುಕೂಲವಿರುತ್ತದೆ.

ಮೊಟ್ಟಮೊದಲಬಾರಿಗೆ ಕೇಂದ್ರದ ಉದರಿ ಬೇಡಿಕೆಯನ್ನು ಶೇ. 100ರಷ್ಟು ಪೂರೈಸುವುದಾಗಿ ಘೋಷಿಸಿದೆ. ಇದರಿಂದ ಉದರಿಗೆ ಬೇಡಿಕೆ ಬರಲಿದ್ದು ಈಗಿರುವ ಸ್ಥಿತಿಯಲ್ಲಿ ಬ್ಯಾಂಕುಗಳು ಇಂಥ ಬೇಡಿಕೆಯನ್ನು ಈಡೇರಿಸಲು ಸಾಧ್ಯವೆಂದು ನಂಬುವಂತಿಲ್ಲ. ಹಾಗಾದರೆ ಶೇ. 100ರಷ್ಟು ಉದರಿ ಪೂರೈಸುವ ಘೋಷಣೆ ಹುಸಿಯಾದೀತೇ ?

ಹಾಗಾಗಬೇಕೆಂದಿಲ್ಲ. ದೊಡ್ಡ ಕೈಗಾರಿಕೆಗಳಿಂದ ಮತ್ತು ವಿದೇಶೀ ಮೂಲಗಳಿಂದ ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಬಂಡವಾಳವ ಹರಿವಿಗೆ ಸಾಕಷ್ಟು ಅವಕಾಶವಿರುವುದರಿಂದ ಬಂಡವಾಳದ ಬುನಾದಿ ಭದ್ರವಾಗುವ ಆಶೆಯಿದೆ. ಅಲ್ಲದೆ ಇಷ್ಟರಲ್ಲೇ ಬರಲಿರುವ ಪರಿಮಿತ ಪಾಲುದಾರಿಕೆ ಅಧಿನಿಯಮದಂತೆ ನಿಷ್ಕ್ರಿಯ ಪಾಲುದಾರಿಕೆ ಹೊಣೆ ಸೀಮಿತಗೊಳ್ಳುವುದರಿಂದ ಮತ್ತಷ್ಟು ಬಂಡವಾಳ ಲಭ್ಯವಾಗುವುದೆಂದು ನಿರೀಕ್ಷಿಸಬಹುದು. ಅಧಿನಿಯಮ ಸೃಷ್ಟಿ, ಅದರ ವ್ಯಾಖ್ಯಾನ ಸ್ಪಷ್ಟೀಕರಣಗಳು ಸಮಯ ತೆಗೆದುಕೊಳ್ಳುವುವೆಂದು ಸಹಜವಾಗಿಯೇ ನಿರೀಕ್ಷಿಸಬಹುದಾದ್ದರಿಂದ ಸದ್ಯಕ್ಕಂತೂ ಈ ನಿಟ್ಟಿನಲ್ಲಿ ಬದಲಾವಣೆಯಾಗದು.

ರಾಷ್ಟ್ರೀಯ ಬಂಡವಾಳ ನಿಧಿ ಯೋಜನೆ ಆರಂಭವಾಗಿ ಅನೇಕ ವರ್ಷಗಳಾದರೂ ಅದು ಹೆಸರಿಗೆ ಮಾತ್ರ ಇದ್ದಂತಿದೆ. ಅದರ ವ್ಯಾಪ್ತಿಯನ್ನು ಹೆಚ್ಚಿಸುವ ಆಲೋಚನೆ ಒಳ್ಳೆಯದೇ. ಈ ಯೋಜನೆಗೆ ಇನ್ನಷ್ಟು ಪ್ರಚಾರ ದೊರೆತು ಅದರ ಲಾಭ ಹೊಸ ಉದ್ಯಮಶೀಲರಿಗೆ ದೊರೆಯುವಂತಾಗಬೇಕು.

ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ದೊಡ್ಡ ಕೈಗಾರಿಕೆಗಳಿಂದ ಬಂಡವಾಳ ಹರಿದು ಬರುವ ಬಗ್ಗೆ ಕೆಲವು ಆಕ್ಷೇಪಣೆಗಳಿವೆ. ದೇಶೀಯ ಮತ್ತು ವಿದೇಶೀಯ ಕಂಪನಿಗಳು ನಮ್ಮ ಸಣ್ಣಕೈಗಾರಿಕೆಯಲ್ಲಿ ಶೇ. 24ರ ವರೆಗೆ ಬಂಡವಾಳ ಹೂಡಿ ಭಾಗವಹಿಸಬಹುದು. ಇದರಿಂದ ಸ್ಪರ್ಧೆ ಮತ್ತು ಆಧುನಿಕೀಕರಣ ಸಾಧ್ಯವಾಗುವುದೆಂಬುದೇನೋ ನಿಜ. ಸಣ್ಣ ಕೈಗಾರಿಕೆಗೆ ಮೀಸಲಾಗಿರುವ ಕೆಲವು ಉತ್ಪನ್ನಗಳನ್ನು ದೊಡ್ಡ ಕೈಗಾರಿಕೆಗಳೂ ತಯಾರಿಸಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಉಪಗುತ್ತಿಗೆ ಮತ್ತು ಗೌಣ ಕೈಗಾರಿಕೆಗಳಿಗೆ ಬೆಂಬಲ ಸಿಗುವುದು ನಿಜ. ಅಲ್ಲದೆ ಕಾರ್ಮಿಕಪ್ರಧಾನ ಉತ್ಪಾದನ ತಂತ್ರಗಳ ವ್ಯಾಪಕ ಬಳಕೆ ಹಾಗೂ ಉದ್ಯಮಶೀಲತೆಯ ವಿಕಾಸವೂ ಸಾಧ್ಯವಾದೀತು. ಆದರೆ ಸಣ್ಣ ಕೈಗಾರಿಕೆಗಳ ಮೇಲೆ ದೊಡ್ಡ ಕೈಗಾರಿಕೆಯ ಪರೋಕ್ಷ ಒಡೆತನವೂ ಹೆಚ್ಚುವ ಭಯವಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಇಂಥ ಒಡೆತನಕ್ಕೆ ಅಧಿಕೃತ ಮುದ್ರೆಯೂ ದೊರೆತಂತಾಗುತ್ತದೆ. ದೊಡ್ಡ ಕೈಗಾರಿಕೆಗಳ ಉಪಾಂಗಗಳಾಗಿ ಕೆಲಸ ಮಾಡುತ್ತ ಸಣ್ಣ ಕೈಗಾರಿಕೆಗೆ ಲಭ್ಯವಾಗುವ ಎಲ್ಲ ಸವಲತ್ತುಗಳನ್ನೂ ಪಡೆಯಲು ನೆರವಾಗುವ ಈ ಕ್ರಮದಿಂದ ಲಾಭ ದೊಡ್ಡ ಕೈಗಾರಿಕೆಗೋ ? ಸಣ್ಣ ಕೈಗಾರಿಕೆಗೋ ?

ನಿಷ್ಕ್ರಿಯ ಪಾಲುದಾರರ ಹೊಣೆಯನ್ನು ಅವರು ತೊಡಗಿಸಿದ ಬಂಡವಾಳಕ್ಕೆ ಮಿತಿಗೊಳಿಸುವ ಆಲೋಚನೆ ಸಣ್ಣ ಕೈಗಾರಿಕೆಗೆ ಬಂಡವಾಳ ಆಕರ್ಷಿಸಬಹುದು. ಈಗಿರುವ ವ್ಯವಸ್ಥೆಯಲ್ಲಿ ಪಾಲುದಾರರ ಹೊಣೆ ಕೇವಲ ಅವರು ತೊಡಗಿಸಿದ ಬಂಡವಾಳಕ್ಕೆ ಮಿತಿಗೊಳ್ಳದೆ ಸಂಸ್ಥೆಯ ಎಲ್ಲಾ ಸಾಲ, ನಷ್ಟಗಳಿಗೂ ಅದು ವಿಸ್ತರಿಸುತ್ತದೆ. 'ಸೀಮಿತ ಪಾಲುದಾರಿಕೆ'ಯ ಪರಿಕಲ್ಪನೆ ಹೊಸದು. ಅದು ನಮ್ಮ ವ್ಯವಸ್ಥೆಯಲ್ಲಿ ಹೇಗೆ ನೆಲೆಗೊಳ್ಳುವುದೆಂದು ಕಾದು ನೋಡಬೇಕಾಗಿದೆ. ಇದಕ್ಕೆ ಸಂಬಂಧಿಸಿದ ಕಾಯಿದೆಯನ್ನು ಮಾಡಬೇಕಾಗಿದೆ. ಈ ದೀರ್ಘಕಾಲಿಕ ಕ್ರಮದಿಂದ ಕೈಗಾರಿಕೆಯ ಬಂಡವಾಳ ಕೊರತೆ ನೀಗುವುದೆಂದು ಆಶಿಸಬಹುದು. ಹೀಗಾದಾಗ ಹಣಕಾಸು ಸಂಸ್ಥೆಗಳ ಉದರಿಗೆ ಬೇಡಿಕೆ ಈಗಿರುವಷ್ಟು ಇರಲಾರದು.

## ಋಣಾಭಿಕರಣ ; ಹುಂಡಿಗಳ ಸಕಾಲಿಕ ಪಾವತಿಗೆ ಶಾಸನ

ಮಾರಾಟ ಹುಂಡಿಗಳು ಸಕಾಲಕ್ಕೆ ಪಾವತಿಯಾಗದೆ ಸಣ್ಣ ಕೈಗಾರಿಕೆಗಳ ಉತ್ಪಾದನ ಚಕ್ರದ ಚಲನೆ ಮಂದಗೊಂಡಿದೆ. ಹುಂಡಿಗಳ ವಸೂಲಾತಿಯ ಹೊಣೆ ನಿವಾರಿಸುವಲ್ಲಿ ಋಣಾಭಿಕರಣ (ಫ್ಯಾಕ್ಟರಿಂಗ್) ಸೇವೆ ಮಹತ್ವದ ಪಾತ್ರ ವಹಿಸಬಹುದು. ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಆರಂಭಿಸಿರುವ ಫ್ಯಾಕ್ಟರಿಂಗ್ ಸೇವೆ ಸಣ್ಣ ಕೈಗಾರಿಕೆಗೆ ಆಶಾಕಿರಣ. ಋಣಾಭಿಕರಣಕ್ಕಾಗಿ ಈ ಸಂಸ್ಥೆ ವಾಣಿಜ್ಯ ಬ್ಯಾಂಕುಗಳ ಶಾಖಾಜಾಲ ಬಳಸಿಕೊಳ್ಳುವುದರ ಜತೆಗೆ ದೇಶಾದ್ಯಂತ ಅನೇಕ ಕಛೇರಿಗಳನ್ನು ತೆರೆಯಬೇಕಾಗಬಹುದು. ಇದೀಗ ಭಾರತೀಯ ಸ್ಟೇಟ್ ಬ್ಯಾಂಕ್ ಋಣಾಭಿಕರಣಕ್ಕಾಗಿ ಒಂದು ಪ್ರತ್ಯೇಕ ಸಹಾಯಕ ಸಂಸ್ಥೆಯನ್ನು ಹುಟ್ಟು ಹಾಕಿದೆ. ನಮ್ಮ ಹಣಕಾಸು ವ್ಯವಸ್ಥೆಯಲ್ಲಿ ಋಣಾಭಿಕರಣ ಸೇವೆಯೂ ಹೊಸದು. ಈ ಸೇವೆ ಯಶಸ್ವಿಯಾಗಿ ನೆಲೆಗೊಂಡರೆ ಮಾತ್ರ ಕೈಗಾರಿಕೆಗೆ ಗಮನಾರ್ಹ ನೆರವು ದೊರಕೀತು.

ಋಣಾಭಿಕರಣ ಸೇವೆ ಎಲ್ಲ ಕೈಗಾರಿಕಾ ಘಟಕಗಳಿಗೂ ದೊರೆಯುವ ಭರವಸೆ ಇಲ್ಲ. ಸಣ್ಣ ಕೈಗಾರಿಕೆಗಳಲ್ಲಿ ಮಧ್ಯಮ ಮತ್ತು ದೊಡ್ಡ ಗಾತ್ರದವುಗಳಿಗೆ ಈ ಸೇವೆ ಸೀಮಿತವಾಗಬಹುದು. ಇಲ್ಲದಿದ್ದರೆ ಋಣಾಭಿಕರಣ ಸಂಸ್ಥೆಯ ವ್ಯವಹಾರ ಕಾರ್ಯಸಾಧ್ಯವಾಗದೆ ಹೋಗಬಹುದು. ಆದ್ದರಿಂದ ಸಣ್ಣ ಕೈಗಾರಿಕಾ ಹುಂಡಿಗಳ ಸಕಾಲಿಕ ಪಾವತಿಗೆ ಶಾಸನದ ಅಗತ್ಯ ಇದೆ. ಇಂಥ ಶಾಸನವೊಂದರ ಸೂಚನೆ ಹೊಸ ಕೈಗಾರಿಕಾ ನೀತಿಯಲ್ಲಿದೆ.

## ಪುಟ್ಟ ಕೈಗಾರಿಕೆ (ಟೈನಿ ಇಂಡಸ್ಟ್ರಿ)

ಭೂಮಿ ಮತ್ತು ಪಟ್ಟಡಿ(ಷೆಡ್)ಗಳು, ವಿದ್ಯುತ್ ಸಂಪರ್ಕ, ಕುಶಲ ಹಾಗೂ ತಂತ್ರಜ್ಞಾನ ಅಭಿವೃದ್ಧಿಗೆ ನೆರವು ಮುಂತಾದುವನ್ನು ನೀಡುವಲ್ಲಿ ಸಣ್ಣ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಪುಟ್ಟ ಕೈಗಾರಿಕೆಗಳಿಗೆ ಈ ಸೌಲಭ್ಯಗಳ ಜತೆಗೆ ಇನ್ನಷ್ಟು ಬೆಂಬಲವೂ ದೊರೆಯಲಿದೆ. ನಿರಂತರ ಸಾಂಸ್ಥಿಕ ಹಣಕಾಸು ಬೆಂಬಲ, ಸರಕಾರಿ ಖರೀದಿ ಯೋಜನೆಯಲ್ಲಿ ಉತ್ಪನ್ನಗಳಿಗೆ ಆದ್ಯತೆ ಹಾಗೂ ಕೆಲವು ಕಾರ್ಮಿಕ ಶಾಸನಗಳಿಂದ ವಿನಾಯಿತಿ—ಈ ಕ್ರಮಗಳು ಪುಟ್ಟ ಕೈಗಾರಿಕೆಗಳನ್ನು ಬಲಗೊಳಿಸಲು ನೆರವಾಗುತ್ತವೆ. ಪುಟ್ಟ ಕೈಗಾರಿಕೆಗೆ ಇರುವ ಬಂಡವಾಳ ಹೂಡಿಕೆಯ ಮಿತಿಯನ್ನು ಎರಡು ಲಕ್ಷ ರೂ.ಗಳಿಂದ ಐದು ಲಕ್ಷ ರೂ.ಗಳಿಗೆ ಏರಿಸಲಾಗಿದೆ. ಕೈಗಾರಿಕಾ ಸಂಬಂಧಿ ಸೇವೆಗಳಲ್ಲಿ ತೊಡಗಿರುವ ಸೇವಾ ಘಟಕಗಳನ್ನು (ಸರ್ವಿಸ್ ಯೂನಿಟ್ಸ್) – ಬಂಡವಾಳ ಮಿತಿಯಲ್ಲಿದ್ದರೆ—ಪುಟ್ಟ ಕೈಗಾರಿಕೆ ಎಂದೇ ಪರಿಗಣಿಸಲಾಗುವುದು.

ಕೈಮಗ್ಗ ಯೋಜನೆಗಳನ್ನು ಪುನರ್ವಿಮರ್ಶಿಸಿ ಸ್ಥಳೀಯ ಹಾಗೂ ಪ್ರಾದೇಶಿಕ ಅಗತ್ಯಗಳಿಗೆ ತಕ್ಕಂತೆ

ಅವನ್ನು ರೂಪಿಸಲು ಯೋಚಿಸಲಾಗಿದೆ. ಇದರಿಂದ ಕಂಪನಿ ಮತ್ತು ಸಹಕಾರಿ ವಲಯದ ವ್ಯಾಪ್ತಿಯಲ್ಲಿ ಬಾರದಿರುವ ಬಹುತೇಕ ಕೈಮಗ್ಗದಾರರಿಗೂ ಯೋಜನೆಗಳ ಲಾಭ ದೊರೆಯಬಹುದು. ನೂಲು, ಬಣ್ಣ ಮತ್ತು ರಾಸಾಯನಿಕಗಳ ಪೂರೈಕೆಗೆ ಇನ್ನು ಮುಂದೆ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮವು ಕೇಂದ್ರ ಅಭಿಕರಣವಾಗಲಿದೆ.

ಕರಕುಶಲ ವಸ್ತುಗಳ ತಯಾರಿಕೆಗೆ ಪುಷ್ಟಿ ನೀಡುವ ಯೋಜನೆಯಲ್ಲಿ ಸಾಂಪ್ರದಾಯಿಕ ಕಲಾವಂತಿಕೆಯ ಶ್ರೀಮಂತಿಕೆಯನ್ನು ಉಳಿಸಿಕೊಳ್ಳುವುದರ ಜತೆಗೆ ಅದನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಬಳಸಿಕೊಳ್ಳುವತ್ತ ಗಮನಹರಿಸಲಾಗುವುದು. ಸಣ್ಣ ಕೈಗಾರಿಕೆಗಳಿಗೆ ನೆರವಾಗುವಂಥ ಅನೇಕ ಯೋಜನೆಗಳು ಈಗಾಗಲೇ ನಮ್ಮ ವ್ಯವಸ್ಥೆಯಲ್ಲಿವೆ. ಈ ಈ ವ್ಯವಸ್ಥೆಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂಬುದು ತಿಳಿದ ವಿಷಯ. ಕಿಲುಬುಗಟ್ಟಿದ ಯಂತ್ರಕ್ಕೆ ಎಣ್ಣೆ ಹಾಕುವ ಆಲೋಚನೆ ಸರಿಯೇ. ರಾಷ್ಟ್ರೀಯ ಬಂಡವಾಳ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸುವುದು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಚಟುವಟಿಕೆಗಳನ್ನು ಚುರುಕುಗೊಳಿಸುವುದು ಇವು ಅಂಥ ಕೆಲವು ಕ್ರಮಗಳು.

ಈಗಿರುವ ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಹಾಗೂ ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಗಳು ಅವುಗಳಿಂದ ನಿರೀಕ್ಷಿಸಲಾಗಿದ್ದ ಸೇವೆ ನೀಡುವಲ್ಲಿ ಯಶಸ್ವಿಯಾಗಿಲ್ಲ. ಇದೀಗ ಆರಂಭಿಸಲಾಗಿರುವ ಸಮಗ್ರ ಅಧೋರಚನಾಭಿವೃದ್ಧಿ ಯೋಜನೆ ಹಾಗೂ ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ವಿಭಾಗಗಳಾಗಿ ಸ್ಥಾಪಿತವಾಗಲಿರುವ 'ತಾಂತ್ರಿಕ ಅಭಿವೃದ್ಧಿ ಕೋಶ' ಹಾಗೂ 'ರಫ್ತು ಅಭಿವೃದ್ಧಿ ಕೇಂದ್ರ'ಗಳಿಂದ ನಿರೀಕ್ಷಿತ ಫಲ ದೊರೆಯಬೇಕಾದರೆ ಹೆಚ್ಚಿನ ಕಾರ್ಯಕ್ಷಮತೆ ಅಗತ್ಯ. ಸಣ್ಣ ಕೈಗಾರಿಕೆಯಲ್ಲಿ ಉತ್ಪಾದನೆ ಮತ್ತು ಸ್ಪರ್ಧೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ತಾಂತ್ರಿಕ ಬೆಂಬಲ ನೀಡಲು ಹಾಗೂ ರಫ್ತುಗಳಿಗೆ ಮತ್ತಷ್ಟು ಬೆಂಬಲ ನೀಡಲು ಇಂಥ ವಿಭಾಗಗಳ ಅಗತ್ಯ ಇದ್ದೇ ಇದೆ. ದೇಶದ ರಫ್ತು ವ್ಯಾಪಾರದ ಶೇ. 40ರಷ್ಟು ಭಾಗ ಸಣ್ಣ ಕೈಗಾರಿಕೆಗಳಿಂದ ಒದಗಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

### ಗುಣಮಟ್ಟ, ಆಧುನಿಕೀಕರಣಗಳಿಗೆ ಆದ್ಯತೆ

ಈ ಕೈಗಾರಿಕಾ ನೀತಿಯಲ್ಲಿ ಅತ್ಯಂತ ಗಮನ ಸೆಳೆಯುವ ಅಂಶವೆಂದರೆ ಉತ್ಪನ್ನಗಳ ಗುಣಮಟ್ಟ ಹೆಚ್ಚಿಸಲು ನೀಡಿರುವ ಒತ್ತು. ತಂತ್ರಜ್ಞಾನ ಆಧುನೀಕರಣ ಮತ್ತು ಬಳಕೆದಾರರ ಹಿತರಕ್ಷಣೆಯ ದೃಷ್ಟಿಯ ಕೆಲ ಅಂಶಗಳು ಗಮನಾರ್ಹ. ಬಳಕೆದಾರರ ಅಗತ್ಯಗಳಿಗೆ ತಕ್ಕಂತೆ ಉತ್ಪನ್ನಗಳ ತಯಾರಿಕೆಗೆ ಆದ್ಯತೆ ನೀಡುವ ಆಲೋಚನೆ ಅವುಗಳಲ್ಲಿ ಒಂದು. ಕೆಲವು ಅಗತ್ಯ ವಸ್ತುಗಳು ಮಾರುಕಟ್ಟೆ

7ನೇ ಪುಟ ನೋಡಿ]

# ಅನಾದರಿತ ಚೆಕ್ಕುಗಳು– ಕಾನೂನು ಕ್ರಮ

**ಬ್ಯಾಂಕಿಂಗ್, ಸಾರ್ವಜನಿಕ ಹಣಕಾಸು ಸಂಸ್ಥೆಗಳ ಮತ್ತು ಪರಕ್ರಾಮ್ಯ ಸಂಲೇಖಗಳ ಕಾನೂನುಗಳ ತಿದ್ದುಪಡಿ ವಿಧೇಯಕ 1988 ಸೆಪ್ಟೆಂಬರ್ 5, 1988ರಂದು ಲೋಕಸಭೆಯಲ್ಲಿ ಮಂಡಿಸಲ್ಪಟ್ಟಿತ್ತು. ಈ ವಿಧೇಯಕದ ಮೂಲಕ ಪರಕ್ರಾಮ್ಯ ಸಂಲೇಖಗಳ ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿಗಳು ವ್ಯಾಪಕ ಚರ್ಚೆಗೆ ಒಳಗಾದವು. ಈ ತಿದ್ದುಪಡಿಯ ಮೂಲಕ ಚೆಕ್ಕುಗಳ ಅನಾದರಣೆಯನ್ನು ದಂಡಾರ್ಹ ಅಪರಾಧ(ಕ್ರಿಮಿನಲ್ ಅಫೆನ್ಸ್) ಎಂದು ಪರಿಗಣಿಸಲಾಗುವುದೆಂಬುದೇ ಇದಕ್ಕೆ ಮೂಲ ಕಾರಣ.**

**ಟಿ. ಕೆ. ರಂಗನಾಥ**
ವ್ಯವಸ್ಥಾಪಕರು
ಭಾರತೀಯ ಸ್ಟೇಟ್ ಬ್ಯಾಂಕ್
ಚಿಕ್ಕಮಗಳೂರು

### ಹಿನ್ನೆಲೆ

ಭಾರತದಲ್ಲಿ ಈವರೆಗೆ ಚೆಕ್ಕುಗಳ ಅನಾದರಣೆ ದಂಡಾರ್ಹಅಪರಾಧವಾಗಿರದೆಕೇವಲ ಕರಾರುಭಂಗ (ಬ್ರೀಚ್ ಆಫ್ ಕಾಂಟ್ರ್ಯಾಕ್ಟ್) ಎಂದು ಪರಿಗಣಿಸಲಾಗುತ್ತಿತ್ತು. ಹಾಗಾಗಿ ಅನಾದರಿತ ಚೆಕ್ಕಿನ ಪ್ರಾಪ್ತಿಕರ್ತ ಅಥವಾ ಕ್ರಮಪ್ರಾಪ್ತಧಾರಕ ತನಗೆ ಬರಬೇಕಾದ ಹಣ ಹಾಗೂ ಅದರ ಮೇಲಣ ಬಡ್ಡಿ ಹಾಗೂ ಇತರ ವೆಚ್ಚಗಳ ವಸೂಲಿಗಾಗಿ ಮತ್ತೊಂದು ಹುಂಡಿಯನ್ನು ರಚಿಸುವ ಅಧಿಕಾರ ಹೊಂದಿದ್ದು ಅದರ ಆಧಾರದ ಮೇಲೆ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆಯೊಂದನ್ನು ಹೂಡಲು ಮಾತ್ರ ಹಕ್ಕು ಹೊಂದಿದ್ದ. ಮುಂದುವರಿದ ದೇಶಗಳಲ್ಲಿ ಚೆಕ್ಕುಗಳ ಅನಾದರಣೆ ಬಹಳ ಹಿಂದಿನಿಂದ ದಂಡಾರ್ಹ ಅಪರಾಧವೆಂದು ಪರಿಗಣಿಸಲ್ಪಟ್ಟಿದೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಈ ಅಪರಾಧಕ್ಕೆ 15 ವರ್ಷಗಳಷ್ಟು ಸಜೆ ವಿಧಿಸಲು ಅವಕಾಶ ಇದ್ದರೆ, ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಸಜೆಯ ಗರಿಷ್ಠ ಅವಧಿ 5 ವರ್ಷಗಳು. ಫ್ರಾನ್ಸ್ ಹಾಗೂ ಇಂಡೊನೇಶಿಯಾಗಳಲ್ಲಿ ಮರಣದಂಡನೆ ನೀಡಲು ಅವಕಾಶ ಇದೆ. ಭಾರತದ ಅಪರಾಧ ದಂಡ ಸಂಹಿತೆಯ ಪ್ರಕರಣ 415ರ ಅನ್ವಯ ಕ್ರಮ ತೆಗೆದುಕೊಳ್ಳಬಹುದಾದರೂ, ಚೆಕ್‌ನ ರಚಕನ "ಅಪ್ರಾಮಾಣಿಕ ಆಶಯ" (dishonest Intention") ವನ್ನು ಸಾಧಾರವಾಗಿ ನಿರೂಪಿಸುವುದು ಅಗತ್ಯವಾಗಿತ್ತು. ಈ ತತ್ವವನ್ನು ರಘುನಾಥ್ V ಬಾಲಸುಬ್ರಮಣ್ಯಂ 1967 ಕೇರಳ ಎಲ್. ಜಿ. 232, ಪಿ.ವಿ.ಎಲ್.ಎನ್ ಚಾರಿ V ಎನ್. ವಿ. ಮಾರ್ಟಿನ್ ಕೇರಳ ಸಿ ಆರ್ ಜೆ 106, ಅಸದ್ ಆಲಿ V ಅನತೀ ಆಲಿ 1959 ತ್ರಿಪುರ. ಮನೋರಂಜನ್ V ಮೆಕ್‌ಪ್ಯಾಟ್ ಇಂಜಿನಿಯರಿಂಗ್ 1987 ಸಿ. ಎಲ್. ಜೆ. 1265 ಮೊಕದ್ದಮೆಗಳಲ್ಲಿ ಎತ್ತಿಹಿಡಿಯಲಾಗಿದೆ. ಈ ಕಾರಣದಿಂದಾಗಿ ಚೆಕ್ಕುಗಳ ಅನಾದರಣೆಗೆ ಯಾವುದೇ ಶಿಕ್ಷೆ ಇಲ್ಲದಾಗಿ ಚೆಕ್ಕುಗಳ ಅನಾದರಣೆ ಹೆಚ್ಚಾಗಿ ಸಾರ್ವಜನಿಕರು ಚೆಕ್ಕುಗಳನ್ನು ಸ್ವೀಕರಿಸಲು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಪರಕ್ರಾಮ್ಯ ಸಂಲೇಖಗಳ ಅಧಿನಿಯಮವನ್ನು ಪರಿಷ್ಕರಿಸಲು 1972ರಲ್ಲಿ ಜಸ್ಟಿಸ್ ಪಿ. ವಿ. ರಾಜಮನ್ನಾರ್ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿಂಗ್ ಕಾನೂನು ಸಮಿತಿಯೊಂದನ್ನು ಸರಕಾರ ನೇಮಿಸಿತ್ತು. ಚೆಕ್ಕುಗಳ ಅನಾದರಣೆಯ ಬಗ್ಗೆ ಅಧ್ಯಯನ ನಡೆಸಿದ ಸಮಿತಿ ಅನಾದರಣೆಗೊಂಡ ಚೆಕ್ಕುಗಳಲ್ಲಿ ಶೇ 53ರಷ್ಟು ಚೆಕ್ಕುಗಳು ಖಾತೆಯಲ್ಲಿ ಹಣವಿಲ್ಲವೆಂಬ ಕಾರಣಕ್ಕಾಗಿ ಅನಾದರಣೆಗೊಂಡವು ಎಂಬುದು ತಿಳಿದುಬಂತು. ಚೆಕ್ಕುಗಳನ್ನು ಜನಪ್ರಿಯಗೊಳಿಸಲು ಹಾಗೂ ಅವುಗಳ ಅನಾದರಣೆಗೆ ಕಡಿವಾಣ ಹಾಕುವುದರ ಮೂಲಕ ಚೆಕ್ಕುಗಳ ಸ್ವೀಕಾರಾರ್ಹತೆಯನ್ನು ಹೆಚ್ಚಿಸಲು ತನ್ನ ಖಾತೆಯಲ್ಲಿ ಸಾಕಷ್ಟು ಶಿಲ್ಕು ಇಡದೆ ಚೆಕ್ ನೀಡುವ ರಚಕರಿಗೆ ದಂಡನೆ ನೀಡಲು ಕಾನೂನನ್ನು ತಿದ್ದುಪಡಿ ಮಾಡುವಂತೆ 1975ರಲ್ಲಿ ನೀಡಿದ ತನ್ನ ವರದಿಯಲ್ಲಿ ಶಿಫಾರಸು ಮಾಡಿತು. ಈ ವರದಿ ಸಲ್ಲಿಸಿದ 13 ವರುಷಗಳ ಅನಂತರ ಪರಕ್ರಾಮ್ಯ ಸಂಲೇಖಗಳ

ಅಧಿನಿಯಮಕ್ಕೆ ತಿದ್ದುಪಡಿ ಮಾಡುವುದರ ಮೂಲಕ ಈ ಶಿಫಾರಸನ್ನು ಜಾರಿಗೆ ತಂದಂತಾಗಿದೆ. ಈ ತಿದ್ದುಪಡಿ 1-4-1989ರಿಂದ ಜಾರಿಗೆ ಬಂದಿದೆ.

## ತಿದ್ದುಪಡಿಯ ಸ್ವರೂಪ

ಬ್ಯಾಂಕಿಂಗ್, ಸಾರ್ವಜನಿಕ ಹಣಕಾಸು ಸಂಸ್ಥೆಗಳ ಮತ್ತು ಪರಕ್ರಾಮ್ಯ ಸಂಲೇಖಗಳ ಕಾನೂನುಗಳ (ತಿದ್ದುಪಡಿ) ಅಧಿನಿಯಮ 1988 (1988ರ 66ನೇ ಅಧಿನಿಯಮ) ಪರಕ್ರಾಮ್ಯ ಸಂಲೇಖಗಳ ಅಧಿನಿಯಮ 1881ಕ್ಕೆ 5 ಪ್ರಕರಣಗಳುಳ್ಳ 16ನೇ ಅಧ್ಯಾಯವನ್ನು ಸೇರಿಸಿದೆ. ಪ್ರಾಮಾಣಿಕ ರಚಕರಿಗೆ ಕಿರುಕುಳ ಉಂಟಾಗದಂತೆ ಸಾಕಷ್ಟು ಸಂರಕ್ಷಣೆಗಳನ್ನು ಒಳಗೊಂಡು "ಸಾಕಷ್ಟು ಹಣವಿಲ್ಲ" ಅಥವಾ "ಚೆಕ್‌ನ ಪಾವತಿಗಾಗಿ ಮಾಡಿರುವ ವ್ಯವಸ್ಥೆ" ಮೀರಿದೆ ಎಂಬ ಕಾರಣಕ್ಕಾಗಿ ಅನಾದರಣೆಗೊಳ್ಳುವ ಹೊಣೆಗಳ ಇತ್ಯರ್ಥ ಅಥವಾ ಸಾಲದ ಮರುಪಾವತಿಗಾಗಿ ನೀಡಿರುವ ಚೆಕ್‌ನ ರಚಕರನ್ನು ದಂಡನೆಗೆ ಗುರಿಪಡಿಸುವುದರ ಮೂಲಕ ಚೆಕ್ಕುಗಳ ಸ್ವೀಕಾರಾರ್ಹತೆಯನ್ನು ಹೆಚ್ಚಿಸುವುದು ಈ ತಿದ್ದುಪಡಿಯ ಉದ್ದೇಶ ಎಂದು ವಿವರಣೆ ನೀಡಲಾಗಿದೆ. ಈ ಪ್ರಕರಣಗಳಿಗೆ 130ರಿಂದ 142ರ ವರೆಗಿನ ಸಂಖ್ಯೆ ನೀಡಲಾಗಿದೆ.

ಯಾವ ಸಂದರ್ಭದಲ್ಲಿ ಅಪರಾಧ ಸಂಭವಿಸಿದೆ ಎಂದು ಪರಿಗಣಿಸಲಾಗುತ್ತದೆ; ಹಾಗೂ ಅಪರಾಧಕ್ಕೆ ವಿಧಿಸಲಾಗುವ ಶಿಕ್ಷೆಯನ್ನೂ, ಅಪರಾಧಿಗೆ ಶಿಕ್ಷೆ ವಿಧಿಸುವುದಕ್ಕೆ ಮುಂಚೆ ಅನುಸರಿಸಬೇಕಾದ ಕ್ರಮಗಳನ್ನೂ ಪ್ರಕರಣ 138 ತಿಳಿಸುತ್ತದೆ. ಅವು ಗಳೆಂದರೆ—

(ಅ) ರಚಕ ಹೊಂದಿದ ಬ್ಯಾಂಕ್ ಖಾತೆಯ ಮೇಲೆ ಚೆಕ್ ರಚಿತವಾಗಿರಬೇಕು.

(ಆ) ಪಡೆದ ಸಾಲ ಅಥವಾ ತನ್ನ ಹೊಣೆಯ ಪ್ರಕಾರ ಅಥವಾ ಭಾಗಶಃ ವಿಮೋಚನೆಗೆ ಚೆಕ್ಕನ್ನು ನೀಡಿರಬೇಕು.

(ಇ) ಬ್ಯಾಂಕಿನಿಂದ "ಖಾತೆಯಲ್ಲಿ ಸಾಕಷ್ಟು ಶಿಲ್ಕು ಇಲ್ಲ" ಅಥವಾ ಬ್ಯಾಂಕಿನೊಡನೆ ರಚಕನು ಮಾಡಿಕೊಂಡ ಒಪ್ಪಂದದ ಅನ್ವಯ ನೀಡುವ ಮೊತ್ತ ಮೀರಿದ್ದು" ಎಂಬ ಕಾರಣಕ್ಕೆ ಚೆಕ್ಕು ಅನಾದರಣಗೊಳ್ಳಬೇಕು.

ಈ ಮೂರೂ ನಿಯಮಗಳು ಪಾಲಿಸಲ್ಪಟ್ಟಿದ್ದರೆ ಅಂತಹ ಚೆಕ್ಕಿನ ರಚಕನು ಈ ಪ್ರಕರಣದಡಿ ಅಪರಾಧಿಯೆಂದು ಪರಿಗಣಿಸಲ್ಪಡುತ್ತಾನೆ. ಈ ಅಪರಾಧಕ್ಕೆ ಈ ಅಧಿನಿಯಮದ ಇತರ ಯಾವುದೇ ಉಪಬಂಧಕ್ಕೆ ಹಾನಿಯಾಗದಂತೆ ಒಂದು ವರುಷದ ವರೆಗೆ ವಿಸ್ತರಿಸಬಹುದಾದ ಸಜೆ ಅಥವಾ ಚೆಕ್ಕಿನ ಮೊತ್ತದ ಎರಡರಷ್ಟಕ್ಕೆ ವಿಸ್ತರಿಸಬಹುದಾದ ದಂಡ ಅಥವಾ ಇವೆರಡನ್ನೂ ವಿಧಿಸಬಹುದು. ಆದರೆ ದಂಡ ಅಥವಾ ಶಿಕ್ಷೆ ವಿಧಿಸುವುದಕ್ಕೆ ಮುಂಚೆ —

(ಕ) ಚೆಕ್ಕು ರಚಿತವಾದಂದಿನಿಂದ 6 ತಿಂಗಳೊಳಗಾಗಿ ಅಥವಾ ಚೆಕ್ಕಿನ ಊರ್ಜಿತಾವಧಿ, ಇವುಗಳಲ್ಲಿ ಯಾವುದು ಕಡಿಮೆಯೋ ಅದರೊಳಗೆ ಪಾವತಿಗಾಗಿ ಸಲ್ಲಿಸಿರಬೇಕು.

(ಖ) ಚೆಕ್ ಬ್ಯಾಂಕಿನಿಂದ ಅನಾದರಣೆಗೊಂಡ ಮಾಹಿತಿ ದೊರೆತ ದಿನದಿಂದ 15 ದಿನಗಳ ಒಳಗಾಗಿ ಆ ಚೆಕ್ಕಿನ ಪ್ರಾಪ್ತಿಕರ್ತ ಅಥವಾ ಕ್ರಮ-ಪ್ರಾಪ್ತಧಾರಕ ಚೆಕ್‌ನ ರಚಕನಿಗೆ ಹಣಪಾವತಿ ಮಾಡುವಂತೆ ಲಿಖಿತ ತಗಾದೆ ನೀಡಿರಬೇಕು.

(ಗ) ಮೇಲೆ ವಿವರಿಸಿದ ಲಿಖಿತ ತಗಾದೆ (Written Demand) ತಲುಪಿದ 15 ದಿನಗಳ ಅನಂತರವೂ ಪ್ರಾಪ್ತಿಕರ್ತ ಅಥವಾ ಕ್ರಮಪ್ರಾಪ್ತಧಾರಕನಿಗೆ ಚೆಕ್‌ನ ರಚಕ ಹಣಪಾವತಿ ಮಾಡದಿರಬೇಕು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಋಣ ಅಥವಾ ಹೊಣೆಗಾರಿಕೆ ಎಂದರೆ ಕಾನೂನುಕ್ರಮದ ಮೂಲಕ ವಸೂಲಿ ಮಾಡಬಹುದಾದ ಋಣ ಅಥವಾ ಪೂರೈಸಲೇಬೇಕಾದ ಹೊಣೆಗಾರಿಕೆ ಎಂದು ವಿವರಣೆ ನೀಡಲಾಗಿದೆ.

ಪ್ರಕರಣ 139 : ಧಾರಕನ ಪರವಾದ ಪೂರ್ವಭಾವನೆ (Presumption in favour o Holder). ಪ್ರಕರಣ 138ರಲ್ಲಿ ಪಡೆಯಲಾದ ಯಾವುದೇ ಚೆಕ್ಕನ್ನು ಧಾರಕ ಋಣ ಅಥವಾ ಹೊಣೆಯೊಂದರ ಪೂರ್ಣ ಅಥವಾ ಭಾಗಶಃ ವಿಮೋಚನೆಗೆ ಪಡೆದ ಎಂದು ಭಾವಿಸಲಾಗುತ್ತದೆ. ಆದರೆ ಇದರ ವ್ಯತಿರಿಕ್ತವಾದದ್ದನ್ನು ಸಾಕ್ಷ್ಯಾಧಾರಗಳಿಂದ ನಿರೂಪಿಸಲು ರಚಕನಿಗೆ ಅವಕಾಶ ಇದೆ.

---

# ಬದಲಾದ ಸಣ್ಣ ಕೈಗಾರಿಕಾ ನೀತಿ

6ನೇ ಪುಟದಿಂದ]

ಯಲ್ಲಿ ಈಗ ಸುಲಭವಾಗಿ ದೊರೆಯುತ್ತಿಲ್ಲ. ಅಂಥವನ್ನು ಗುರುತಿಸಿ ಅವುಗಳ ಉತ್ಪಾದನೆಗೆ ವಿಶೇಷ ರೀತಿಯ ಪ್ರೋತ್ಸಾಹ ನೀಡಬೇಕಾಗಿದೆ. ಗುಣಮಟ್ಟವನ್ನು ಅಭಿವೃದ್ಧಿಪಡಿಸುವತ್ತ ನಮ್ಮ ಸಣ್ಣ ಕೈಗಾರಿಕೆ ದೃಷ್ಟಿ ಹರಿಸಿಲ್ಲ. ಕಡಿಮೆ ಬಂಡವಾಳದ ಅನೇಕ ಅತಿ ಸಣ್ಣ ಕೈಗಾರಿಕೆಗಳಿದ್ದು ಗುಣಮಟ್ಟವನ್ನು ಏರಿಸುವಲ್ಲಿ ಅವು ವಿಫಲವಾಗಿವೆ. ಉತ್ಪನ್ನಗಳ ಬೆಲೆ ಮಟ್ಟವೂ ಗ್ರಾಹಕರಿಗೆ ತೃಪ್ತಿ ತರುವಂತಿಲ್ಲ. ದೊಡ್ಡ ಕೈಗಾರಿಕೆಗಳಿಂದ ಬಂಡವಾಳ ಹೂಡಿಕೆಗೆ ಸಾಕಷ್ಟು ಅವಕಾಶ ಕಲ್ಪಿಸಲಾಗಿರುವುದರಿಂದ ಉತ್ಪಾದನೆಯ ಮಟ್ಟ ಅಧಿಕಗೊಂಡು ವೆಚ್ಚ ಕಡಿಮೆಯಾಗುವುದಲ್ಲದೆ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ದೊರೆತು ಉತ್ಪನ್ನದ ಗುಣಮಟ್ಟವೂ ಉತ್ತಮಗೊಳ್ಳುವುದೆಂದು ನಿರೀಕ್ಷಿಸಬಹುದು.

ಆರೋಗ್ಯ ಮತ್ತು ಜೀವಕ್ಕೆ ಅಪಾಯವೊಡ್ಡುವ ಸಾಧ್ಯತೆಯುಳ್ಳ ಉತ್ಪನ್ನಗಳಿಗೆ ಕಡ್ಡಾಯ ಗುಣ ನಿಯಂತ್ರಣ ವ್ಯವಸ್ಥೆ ಜಾರಿಗೆ ತಂದಿರುವುದು ಇನ್ನೊಂದು ಮುಖ್ಯ ಸಂಗತಿ. ಕಳಪೆ ಗುಣಮಟ್ಟದ ಕೆಲವು ರೀತಿಯ ವಸ್ತುಗಳು ಬಳಕೆದಾರರ ಆರೋಗ್ಯಕ್ಕೂ ಜೀವಕ್ಕೂ ಮುಳುವಾಗುವ ಸಂದರ್ಭಗಳು ಈಗ ಅಪರೂಪವಾಗಿ ಉಳಿದಿಲ್ಲ. ಇಂಥ ವಸ್ತುಗಳಿಗೆ ಕಟ್ಟುನಿಟ್ಟಾದ ಗುಣನಿಯಂತ್ರಣ ವ್ಯವಸ್ಥೆ ಜಾರಿಗೆ ಬಂದರೆ ಬಳಕೆದಾರರಿಗೆ ಸುರಕ್ಷೆಯ ಭರವಸೆ ದೊರೆತೀತು.

ಸ್ಪರ್ಧಾತ್ಮಕವಾದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಉತ್ಪನ್ನಗಳಿಗೆ ಬೇಡಿಕೆ ಮುಂದುವರಿಯಬೇಕಾದರೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಇನ್ನಷ್ಟು ಗಮನ ನೀಡಬೇಕು. ಈ ದೃಷ್ಟಿಯಿಂದ ತರಬೇತಿ, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಸಮಗ್ರ ಯೋಜನೆಯೊಂದನ್ನು ರೂಪಿಸುವ ಬಗೆಗೆ ಹೊಸ ಸಣ್ಣ ಕೈಗಾರಿಕಾ ನೀತಿಯಲ್ಲಿ ಸೂಚನೆಯಿದೆ. ಆಧುನಿಕೀಕರಣ ಮತ್ತು ತಂತ್ರಜ್ಞಾನ ಮಟ್ಟ ಹೆಚ್ಚಳ ಕುರಿತ ಯೋಜನೆಯೂ ಇಷ್ಟರಲ್ಲೇ ಪ್ರಕಟಗೊಳ್ಳುವುದು.

ಹೊಸ ಕೈಗಾರಿಕಾ ನೀತಿಯ ಅತಿ ದೊಡ್ಡ ಲೋಪವೆಂದರೆ ಅಸ್ವಸ್ಥ ಕೈಗಾರಿಕೆಗಳನ್ನು ಕುರಿತ ನಿಲುವುಗಳನ್ನು ಸ್ಪಷ್ಟಪಡಿಸದಿರುವುದು. ಅಸ್ವಸ್ಥತೆ ನಮ್ಮ ಕೈಗಾರಿಕಾಪ್ರಪಂಚದ ಬಹು ದೊಡ್ಡ ಪಿಡುಗು. ಇದನ್ನು ನಿವಾರಿಸಿದಲ್ಲದೆ ಗತ್ಯಂತರವಿಲ್ಲ. ಹಣಕಾಸು ಸಂಸ್ಥೆಗಳ ಸಹಸ್ರಾರು ಕೋಟಿ ರೂ. ಉದರಿಯನ್ನು ಸ್ಥಗಿತಗೊಳಿಸಿರುವ ಅಸ್ವಸ್ಥ ಕೈಗಾರಿಕೆಗಳಿಂದ ಇಡೀ ಅರ್ಥವ್ಯವಸ್ಥೆಗೆ ಸಾಕಷ್ಟು ಹಾನಿಯಾಗಿದೆ. ಅಸ್ವಸ್ಥ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ಯತ್ನಗಳು ವಿಫಲವಾಗಿರುವುದೇ ಹೆಚ್ಚು. ಈಗಿನ ಕೈಗಾರಿಕಾ ನೀತಿಯಲ್ಲಿ ಅಸ್ವಸ್ಥ ಕೈಗಾರಿಕೆಗಳ ಬಗೆಗೆ 'ಶೀಘ್ರದಲ್ಲೇ' ನಿರ್ಧಾರ ಕೈಗೊಳ್ಳುವುದಾಗಿ ಮಾತ್ರ ತಿಳಿಸಲಾಗಿದೆ. ಹೊಸ ಸರ್ಕಾರದ ವಿಚಾರಗಳನ್ನು ಗಮನಿಸಿದರೆ ಒಂದು ಸಂಗತಿ ಯಂತೂ ಸ್ಪಷ್ಟವಾಗುತ್ತದೆ. ಕೇವಲ ಉದ್ಯೋಗಾವಕಾಶದ ದೃಷ್ಟಿಯಿಂದ ನಿರಂತರ ನಷ್ಟವನ್ನು ಮುಂದುವರಿಸಿಕೊಂಡು ಹೋಗುವ ಇಚ್ಛೆ ಸರಕಾರಕ್ಕಿಲ್ಲ. ಅಸ್ವಸ್ಥ ಕೈಗಾರಿಕೆಗಳಿಗೆ ಒಂದು 'ಸುರಕ್ಷಿತ ನಿರ್ಗಮನ ನೀತಿ' (ಸೇಫ್ ಎಕ್ಸಿಟ್ ಪಾಲಿಸಿ)ಯನ್ನು ರೂಪಿಸುವತ್ತ ಚಿಂತನೆ ಹರಿದಿದೆ.

ಒಟ್ಟಾರೆ ಹೊಸ ಕೈಗಾರಿಕಾ ನೀತಿಯಲ್ಲಿ ಸೂಚಿಸಲಾಗಿರುವ ಅನೇಕ ಅಂಶಗಳು ಉತ್ತೇಜಕವಾಗಿವೆ. ಬೆಂಬಲ ಸಂಸ್ಥೆಗಳಿಂದ ಹೆಚ್ಚಿನ ನಿರೀಕ್ಷೆಯಿದೆ ಎಂಬುದೂ ಸ್ಪಷ್ಟವಾಗಿಯೇ ಇದೆ. ಈ ಕೈಗಾರಿಕಾ ನೀತಿ ಫಲಕಾರಿಯಾಗಬೇಕಾದರೆ ಅಧೋರಚನೆಯ ವಿವಿಧ ಹಂತಗಳಲ್ಲಿ ಬೆಂಬಲ ಸಂಸ್ಥೆಗಳ ಕಾರ್ಯಕ್ಷಮತೆ ವೃದ್ಧಿಗೊಂಡು ಕೈಗಾರಿಕೆಗೆ ಆಧಾರವಾಗಿರುವ ವ್ಯವಸ್ಥೆ ಜೀವ ತುಂಬಿಕೊಳ್ಳಬೇಕಾಗುತ್ತದೆ. ಹಾಗಾಗದಿದ್ದರೆ ಯಥಾಸ್ಥಿತಿ ಮುಂದುವರಿಯುವುದೆಂದು ಧಾರಾಳವಾಗಿ ನಿರೀಕ್ಷಿಸಬಹುದು. ●

ಪ್ರಕರಣ 140 : ಪ್ರಕರಣ 138ರಡಿಯಲ್ಲಿ ಅಪರಾಧಿಯಾದವರಿಗೆ ಚೆಕ್ ನೀಡಿಕೆ ಸಮಯದಲ್ಲಿ ಆ ಪ್ರಕರಣದಲ್ಲಿ ವಿವರಿಸಲಾದ ಕಾರಣಗಳಿಗೆ ಚೆಕ್ ಅನಾದರಣೆಗೊಳ್ಳಬಹುದೆಂದು ನಂಬಲು ಯಾವುದೇ ಕಾರಣಗಳು ಇರಲಿಲ್ಲ ಎಂಬ ಕಾರಣದಿಂದಾಗಿ ರಕ್ಷಣೆ ದೊರೆಯದಿರಬಹುದು.

ಪ್ರಕರಣ 141 : ಪ್ರಕರಣ 138ರಡಿ ಅಪರಾಧಿಯಾದ್ದು ಕಂಪನಿಯಾದಲ್ಲಿ ಅಪರಾಧ ನಡೆದ ಸಂದರ್ಭದಲ್ಲಿ ಕಂಪನಿಯ ವ್ಯವಹಾರಗಳನ್ನು ನಡೆಸಲು ಜವಾಬ್ದಾರನಾಗಿದ್ದ ಮತ್ತು ನಿಯುಕ್ತಗೊಳಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿ ಹಾಗೂ ಕಂಪನಿ ಅಪರಾಧಿಗಳಾಗಿದ್ದು ದಂಡನೆಗೆ ಅರ್ಹರಾಗುತ್ತಾರೆ. ಆದರೆ ತನ್ನ ಅರಿವಿಗೆ ಬರದೆ ಅಪರಾಧ ನಡೆದಿದೆಯೆಂದೂ ಅಥವಾ ಅಪರಾಧ ನಡೆಯದಿರಲು ತನ್ನ ಕೈಲಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇನೆಂದೂ ಯಾವುದೇ ವ್ಯಕ್ತಿ ನಿರೂಪಿಸಿದರೆ ಆ ವ್ಯಕ್ತಿಗೆ ದಂಡನೆಯಿಂದ ವಿನಾಯ್ತಿ ದೊರೆಯಬಹುದು. ಆದರೆ ಯಾವುದೇ ಕಂಪನಿ ಅಪರಾಧವೆಸಗಿದ್ದು ಅಪರಾಧವು ಯಾವುದೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಗಳ ಸಮ್ಮತಿ ಅಥವಾ ಪರೋಕ್ಷ ಸಮ್ಮತಿ (ಕನ್ನೈವೆನ್ಸ್) ಅಥವಾ ಅದರ ನಿರ್ಲಕ್ಷ್ಯದಿಂದಾಗಿ ಘಟಿಸಿದೆ ಎಂದು ಸಾಬೀತಾದರೆ ಆ ವ್ಯಕ್ತಿಗಳೂ ಅಪರಾಧಿಗಳೆಂದು ಪರಿಗಣಿಸಲ್ಪಟ್ಟು ಅವರಿಗೂ ಶಿಕ್ಷೆ ವಿಧಿಸಲು ಅವಕಾಶ ಇದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಪನಿ ಎಂದರೆ ನಿಗಮಿತಕಾಯ (ಬಾಡಿ ಕಾರ್ಪೊರೇಟ್), ಭಾಗಿದಾರಿ ಸಂಸ್ಥೆ ಮತ್ತು ಹಾಗೂ ವ್ಯಕ್ತಿಗಳ ಸಂಘಟನೆ ಎಂದೂ ವಿವರಣೆ ನೀಡಲಾಗಿದೆ. ಮತ್ತು ಭಾಗಿದಾರಿ ಸಂಸ್ಥೆಗೆ ಸಂಬಂಧಿಸಿದಂತೆ ನಿರ್ದೇಶಕ ಎಂದರೆ ಭಾಗಿದಾರ ಎಂದೂ ಹೇಳಲಾಗಿದೆ.

ಪ್ರಕರಣ 142 : ಅಪರಾಧಗಳ ಸಂಜ್ಞೇಯತೆ (ಕಾಗ್ನಿಸೆನ್ಸ್ ಆಫ್ ಅಫೆನ್ಸಸ್). ದಂಡ ಪ್ರಕ್ರಿಯಾ ಸಂಹಿತೆ 1973ರಲ್ಲಿ ಹೇಳಿರುವುದನ್ನು ಹೊರತುಪಡಿಸಿ

(ಪ) ಯಾವುದೇ ನ್ಯಾಯಾಲಯ ಪ್ರಕರಣ 138ರಡಿ ಶಿಕ್ಷೆ ವಿಧಿಸಲಾಗುವ ಯಾವುದೇ ಅಪರಾಧವನ್ನು ಚೆಕ್ಕಿನ ಪ್ರಾಪ್ತಿಕರ್ತ ಅಥವಾ ಆ ಪ್ರಕರಣಕ್ಕೆ ಸಂಬಂಧಿಸಿದ ಕ್ರಮಬದ್ಧದಾರಕನ ಲಿಖಿತ ದೂರಿಲ್ಲದೆ ಸಂಜ್ಞೇಯ ಮಾಡುವುದಿಲ್ಲ.

(ಫ) ಮೇಲೆ ಹೇಳಿದ ಲಿಖಿತ ದೂರು 138ನೇ ಪ್ರಕರಣದ ಖಂಡ (ಇ)ಯ ಅನ್ವಯ ಲಿಖಿತ ತಗಾದೆಗೆ ಹಣ ಪಾವತಿ ಮಾಡದ ದಿನದಿಂದ ಒಂದು ತಿಂಗಳೊಳಗಾಗಿ ಸಲ್ಲಿಸತಕ್ಕದ್ದು.

(ಬ) ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ನ್ಯಾಯಾಂಗ ಮ್ಯಾಜಿಸ್ಟ್ರೇಟರಿಂದ ಕೆಳಗಣ ದರ್ಜೆಯ ನ್ಯಾಯಾಲಯ, ಪ್ರಕರಣ 138ರಡಿ ಶಿಕ್ಷೆ ವಿಧಿಸುವ ಮೊಕದ್ದಮೆಗಳನ್ನು ವಿಚಾರಣೆ ನಡೆಸುವಂತಿಲ್ಲ.

## ಕಾನೂನಿನ ಮಿತಿಗಳು

ಹಣ ಇಲ್ಲದೆ ಚೆಕ್ ನೀಡಿ, ಅದರ ಪಾವತಿಗಾಗಿ ಬ್ಯಾಂಕ್‌ಗೆ ಸಲ್ಲಿಸುವ ವೇಳೆಗೆ 'ಪಾವತಿ ನಿಲ್ಲಿಸಿ' ಆದೇಶ ನೀಡಿದರೆ, ಬ್ಯಾಂಕ್ ಚೆಕ್‌ನ ಅನಾದರಣೆ ಮಾಡುವಾಗ ರಚಕ "ಪಾವತಿ ನಿಲ್ಲಿಸಿ" ಆದೇಶ ನೀಡಿದ್ದಾನೆ ಎಂಬ ಕಾರಣ ಕೊಟ್ಟು ಚೆಕ್ ಹಿಂತಿರುಗಿಸುತ್ತದೆ. ಚೆಕ್ ನೀಡಿ ಅನಂತರ ತನ್ನ ಖಾತೆಯನ್ನು ಮುಕ್ತಾಯಗೊಳಿಸಿದ್ದರೆ ಬ್ಯಾಂಕ್ "ಖಾತೆ ಮುಚ್ಚಲಾಗಿದೆ" ಎಂಬ ಕಾರಣ ನೀಡಿ ಚೆಕ್ ಅನಾದರಣೆಗೊಳಿಸುತ್ತದೆ. ಈ ಎರಡೂ ಪ್ರಕರಣಗಳಲ್ಲೂ ಚೆಕ್‌ನ ರಚಕ ಉದ್ದೇಶಪೂರ್ವಕವಾಗಿ ವಂಚಿಸಿದ್ದರೂ ಆತನ ಮೇಲೆ ಈ ಕಾನೂನಿನಡಿ ಕ್ರಮ ಜರುಗಿಸಲಾಗದು.

ಪ್ರಾಪ್ತಿಕರ್ತ/ಕ್ರಮಬದ್ಧಧಾರಕ ಪಡೆದುಕೊಂಡ ಪ್ರತಿ ಚೆಕ್ಕು ಋಣ/ಹೊಣೆಯ ಭಾಗಶಃ ಅಥವಾ ಪೂರ್ಣ ವಿಮೋಚನೆಗೆ ನೀಡಿದ್ದು ಎನ್ನುವ ಪೂರ್ವಭಾವನೆ ಎಷ್ಟರಮಟ್ಟಿಗೆ ಸರಿ ? ವ್ಯವಹಾರವೊಂದರ ಇತ್ಯರ್ಥಕ್ಕೆ ಚೆಕ್ ನೀಡುವಂತೆ, ವ್ಯವಹಾರವೊಂದರ ನಾಂದಿಗೆ ಸಹ ಚೆಕ್ ನೀಡಿಕೆ ಸಹಜವಲ್ಲವೆ ? ಈ ಪೂರ್ವಭಾವನೆಯಿಂದಚೆಕ್‌ಗಳ ರಚಕರಿಗೆ ಅನಾವಶ್ಯಕ ಕಿರುಕುಳ ಉಂಟಾಗಬಹುದು. ಚೆಕ್ ಅನಾದರಣೆಗೊಂಡ 15 ದಿನಗಳ ಒಳಗಾಗಿ ರಚಕನಿಗೆ ಲಿಖಿತ ತಗಾದೆ ನೀಡಬೇಕು. ರಚಕನ ವಿಳಾಸ ದೊರಕಿಸಿಕೊಳ್ಳುವುದು ಕ್ರಮಪ್ರಾಪ್ತಧಾರಕನಿಗೆ ತೊಡಕಿನ ಕೆಲಸ. ಹಾಗಾಗಿ ಹದಿನೈದು ದಿನದ ಕಾಲಾವಕಾಶ ಸಾಲದು. 15 ದಿನಗಳ ಕಾಲಾವಕಾಶ ಸಾಲದಾದಾಗ ಚೆಕ್ಕನ್ನು ಮತ್ತೊಮ್ಮೆ ಬ್ಯಾಂಕಿಗೆ ಸಲ್ಲಿಸಿ ಅನಾದರಣೆಯ ಆದೇಶ ಪಡೆದು ವಿಸ್ತೃತ ಸಮಯ ದೊರಕಿಸಿಕೊಳ್ಳಬಹುದೇ? ಚೆಕ್‌ನ ರಚಕ ಉದ್ದೇಶಪೂರ್ವಕವಾಗಿ ಲಿಖಿತ ತಗಾದೆ ಸ್ವೀಕರಿಸಲು ನಿರಾಕರಿಸಿದರೆ ಪ್ರಾಪ್ತಿಕರ್ತ ಅಥವಾ ಕ್ರಮಪ್ರಾಪ್ತಧಾರಕ ಯಾವ ಕ್ರಮ ಜರುಗಿಸಬೇಕು ? ಈ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರಕಬೇಕಾಗಿದೆ.

ಈ ಪ್ರಕರಣಗಳು ನ್ಯಾಯಾಲಯದ ವ್ಯಾಪ್ತಿಯ ಬಗ್ಗೆ ತಿಳಿಸುವುದಿಲ್ಲ. ಲಿಖಿತ ದೂರನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಅಥವಾ ಪ್ರಥಮ ದರ್ಜೆನ್ಯಾಯಾಂಗ ಮ್ಯಾಜಿಸ್ಟ್ರೇಟರಲ್ಲಿ ಸಲ್ಲಿಸಿರಬೇಕು ಆದರೆ ಅವರು ರಚಕ ವಾಸವಾಗಿರುವ ಸ್ಥಳದವರೇ? ಅಥವಾ ಚೆಕ್ ಅನಾದರಣೆಗೊಂಡ ಸ್ಥಳದವರೇ ? ಅಥವಾ ಪ್ರಾಪ್ತಿಕರ್ತ/ಕ್ರಮಪ್ರಾಪ್ತಧಾರಕ ವಾಸಿಸುವ ಸ್ಥಳದವರೇ ಎಂಬುದು ನಿಸ್ಸಂದೇಹವಾಗಿ ತಿಳಿಯುವುದಿಲ್ಲ. ದಂಡಪ್ರಕ್ರಿಯಾ ಸಂಹಿತೆಯ 177 ನೆಯಪ್ರಕರಣದ ಪ್ರಕಾರ ಯಾವ ನ್ಯಾಯಾಲಯದ ವ್ಯಾಪ್ತಿಯಲ್ಲಿ ಅಪರಾಧ ಜರುಗುವುದೋ ಆ ನ್ಯಾಯಾಲಯಕ್ಕೆ ವಿಚಾರಣೆ ನಡೆಸುವ ಅಧಿಕಾರ ಸಾಮಾನ್ಯವಾಗಿ ದೊರಕುತ್ತದೆ. ಈ ಕಾನೂನಿನಡಿ ಚೆಕ್‌ನ ರಚಕ, ಪ್ರಾಪ್ತಿಕರ್ತ/ಕ್ರಮಪ್ರಾಪ್ತಧಾರಕ ಚೆಕ್ ಅನಾದರಣೆಗೊಂಡಾಗ ನೀಡಿದ ಲಿಖಿತ ತಗಾದೆಗೆ 15 ದಿನಗಳೊಳಗಾಗಿ ಹಣ ಪಾವತಿ ಮಾಡದಿದ್ದಾಗ ಅಪರಾಧಿಯಾಗುತ್ತಾನೆ. ಆದುದರಿಂದ ರಚಕನು ವಾಸಿಸುವ ಸ್ಥಳದಲ್ಲಿ ದೂರು ಸಲ್ಲಿಸಬೇಕೆಂದು ಕಾನೂನು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಪರಊರಿನ ಚೆಕ್ಕುಗಳನ್ನು ಪಡೆದ ಪ್ರಾಪ್ತಿಕರ್ತರಿಗೆ ಈ ತೆರನ ಮೊಕದ್ದಮೆ ಹೂಡುವುದು ಹೆಚ್ಚಿನ ಖರ್ಚಿನ ಸಂಗತಿಯಾಗುತ್ತದೆ. ಇದರ ಜೊತೆಗೆ ಭಾರತದ ದಂಡ ಪ್ರಕ್ರಿಯಾ ಸಂಹಿತೆಯ 56ನೇ ಪ್ರಕರಣದನ್ವಯ ದೂರು ನೀಡುವವರು ನ್ಯಾಯಾಲಯದಲ್ಲಿ ವಿಚಾರಣೆಯಂದು ಸ್ವತಃ ಹಾಜರಿರಬೇಕು.

ಈ ಸ್ವತಃ ಹಾಜರಾತಿಗೆ ವಿನಾಯ್ತಿ ನೀಡಲು ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಇದ್ದರೂ ವಿನಾಯ್ತಿ ನೀಡದಿದ್ದರೆ ಗೈರುಹಾಜರಾದಾಗ ದೂರು ವಜಾ ಆಗುತ್ತದೆ. ದಂಡನಾರ್ಹ ಅಪರಾಧಗಳಲ್ಲಿ ವಿಧಿಸುವ ದಂಡ ಸಾಮಾನ್ಯವಾಗಿ ಸರಕಾರಕ್ಕೆ ಸೇರುತ್ತದೆ. ಪ್ರಾಪ್ತಿಕರ್ತ/ಕ್ರಮಬದ್ಧಧಾರಕನಿಗೆ ಬರಬೇಕಾದ ಹಣಕ್ಕೆ ಆತ ಮತ್ತೆ ಸಿವಿಲ್ ಮೊಕದ್ದಮೆ ಹೂಡಬಹುದೇ ?

## ಪರಿಹಾರ

ಮೇಲೆ ವಿವರಿಸಿದ ಮಿತಿಗಳಿಂದಾಗಿ ಚೆಕ್ಕುಗಳನ್ನು ಸ್ವೀಕಾರಾರ್ಹವನ್ನಾಗಿ ಮಾಡುವಲ್ಲಿ ತಿದ್ದುಪಡಿ ಎಷ್ಟು ಯಶಸ್ವಿಯಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಆದುದರಿಂದ ಅನಾದರಣೆಗೊಳ್ಳದ ಚೆಕ್ಕುಗಳನ್ನು ಜಾರಿಗೆ ತರುವುದೇ ಚೆಕ್ಕುಗಳ ಸ್ವೀಕಾರಾರ್ಹತೆಯನ್ನು ಹೆಚ್ಚಿಸಲು ಉತ್ತಮ ಪರಿಹಾರ ಎನ್ನುವುದರಲ್ಲಿ ಅನುಮಾನ ಇಲ್ಲ. ●

# ಕೃಷಿ ಪತ್ತಿನ ಪುನರೀಕ್ಷಣಾ ಸಮಿತಿಯ ವರದಿ

## ಎ. ಎಮ್. ಖುಸ್ರೋ ಸಮಿತಿಯ ಶಿಫಾರಸುಗಳು

**ಸುಗ್ಗಿಯಿಂದ ಸುಗ್ಗಿಗೆ ದುಡಿಯುತ್ತ, ಪ್ರತಿ ಸುಗ್ಗಿಯಲ್ಲೂ ಮುಂದಿನ ಸುಗ್ಗಿ ಹೆಚ್ಚು ಸಮೃದ್ಧವಾಗಿರುವುದೆಂದು ಕನಸು ಕಾಣುತ್ತ ಸಾಗುತ್ತಿರುವ ರೈತ ಸಾಲ ಎತ್ತುವುದಾಗಲಿ, ಅವನಿಗೆ ಸಾಲ ಕೊಡುವುದಾಗಲಿ ತಪ್ಪೇನೂ ಅಲ್ಲ. ಸದಾ ಅನಿಶ್ಚಿತತೆಗೆ ಒಳಗಾದ ಕೃಷಿಗೆ ಸಾಲ ಕೊಟ್ಟರೂ ಚಿಂತೆ, ಕೊಡದಿದ್ದರೂ ಚಿಂತೆ. ಇವೆರಡರ ನಡುವೆ ಸಾಲ ನೀಡಿಕೆಯ ಸಂಸ್ಥೆಗಳು ಹೇಗೆ ನಡೆದುಕೊಳ್ಳಬೇಕು? ಇಂಥ ಸಂಸ್ಥೆ ಹೇಗಿರಬೇಕು? ಕೃಷಿ ಉದರಿ ನೀಡಿಕೆಗಾಗಿ ಇದುವರೆಗೆ ನಡೆದಿರುವ ಪ್ರಯತ್ನಗಳನ್ನೆಲ್ಲ ವಿಮರ್ಶಿಸಿ ಇದರ ಸುಧಾರಣೆಗಾಗಿ ನೇಮಕವಾದ ಸಮಿತಿಯ ವರದಿಯ ಸಮರ್ಥ ವಿವೇಚನೆ ಇಲ್ಲಿದೆ.**

ಎಂ. ಎಂ. ವಗ್ಗನವರ
**ಅಧ್ಯಾಪಕರು, ಸಹಕಾರ ತರಬೇತಿ ಕಾಲೇಜು**
**ಬೆಂಗಳೂರು**

ಭಾರತ ಇಂದು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಅತಿ ಜಟಿಲವಾದದ್ದು, ಸಮಸ್ಯಾತ್ಮಕವಾದದ್ದು ಹಾಗೂ ಸಂಪೂರ್ಣವಾಗಿ ಬಗೆಹರಿಸಲು ಸಾಧ್ಯವಾಗದ ಸಮಸ್ಯೆ ಎಂದರೆ ಕೃಷಿ ಸಾಲದ ಸಮಸ್ಯೆ ಎನ್ನಬಹುದು.

ಕೃಷಿಯೂ ಒಂದು ಉದ್ದಿಮೆಯಾಗಿದೆ, ಯಾವುದೇ ಒಂದು ಉದ್ದಿಮೆಗೆ ಬೇಕಾದಂತೆ ಕೃಷಿ ಉದ್ದಿಮೆಗೂ ಬಂಡವಾಳದ ಆವಶ್ಯಕತೆ ಇರುವುದು, ಆದರೆ ಕೃಷಿ ಸಾಲ ರೈತರ ಆರ್ಥಿಕೋನ್ನತಿಯ ಉದ್ದೇಶ ಹೊಂದಿದ ಸಾಲದ ಸಂಸ್ಥೆಗಳಿಂದ ದೊರೆಯಬೇಕೇ ಹೊರತು, ಸಾಲ ಕೊಟ್ಟು ಬಡ್ಡಿ, ಚಕ್ರಬಡ್ಡಿ ಹಾಕಿ ರೈತನ ಆಸ್ತಿಪಾಸ್ತಿಗಳನ್ನು ಲಪಟಾಯಿಸುವ ಶ್ರೀಮಂತರಿಂದ ದೊರೆಯುವಂತಿರಬಾರದು.

ಪ್ರಕೃತಿಯ ವಿಕೋಪ, ಸಣ್ಣ-ಅತಿ ಸಣ್ಣ ಭೂಹಿಡುವಳಿಗಳು, ಅವೈಜ್ಞಾನಿಕ ಭೂ ಸಾಗುವಳಿ ಪದ್ಧತಿ ಮುಂತಾದವುಗಳಿಂದ ಕೃಷಿ ಉತ್ಪಾದನೆ ಕಡಿಮೆ ಆಗಿರುವುದರಿಂದ ಬಡತನ ರೈತರ ಬೆನ್ನು ಹತ್ತಿದ ಬೇತಾಳವಾಗಿದೆ. ಆದ್ದರಿಂದ ರೈತ ಒಂದು ಸುಗ್ಗಿಯಿಂದ ಇನ್ನೊಂದು ಸುಗ್ಗಿಯವರೆಗೆ ಸಾಲ ತರದೇ ಇರಲಾರ. ಅಲ್ಲದೆ ರೈತನ ಉಳಿತಾಯ ಅವನ ಭೂಮಿಯಲ್ಲಿ ವಿನಿಯೋಗವಾಗಿರುವುದರಿಂದ ಹಾಗೂ ಅವನು ಕೂಡಿಟ್ಟ ದವಸ ಧಾನ್ಯಗಳ ಮೂಲಕ ಇರುವುದರಿಂದ "ರೈತನಿಗೆ ಸಾಲ ಕೊಡುವುದೇನೂ ಆಕ್ಷೇಪಣೆಯಲ್ಲ ಮತ್ತು ಅವನು ಸಾಲ ತರುವುದು ಅವನ ಬಡತನದ ದ್ಯೋತಕವೂ ಆಗಲಾರದು. ಯಾವುದೇ ದೇಶದ ಗ್ರಾಮೀಣ ಅರ್ಥಶಾಸ್ತ್ರದ ಇತಿಹಾಸದ ಪುಟಗಳನ್ನು ಮಗುಚಿದಾಗ ರೈತ ಸಾಲ ತರಲೇಬೇಕು ಮತ್ತು ತಂದೇ ತರುವನು"—ಎಂಬ ಅಧ್ಯಾಯ ಬೇರೆ ಆಗಿರಲಾರದು ಎಂದು ಎಫ್. ಎ. ನಿಕೊಲ್ಸನ್‌ರವರು ತಮ್ಮ ವರದಿಯಲ್ಲಿ ಹೇಳಿರುವುದು ಹೆಚ್ಚು ಸಮಂಜಸ.

ಆದರೆ ಕೃಷಿ ಹುಟ್ಟುವಳಿಯ ಅನಿಶ್ಚಿತತೆಯಿಂದ ಇಂದು ಕೊಟ್ಟ ಸಾಲ ಸಕಾಲದಲ್ಲಿ ಮರುಪಾವತಿ ಆಗದಿದ್ದರೆ, ಸಾಲ ಕೊಟ್ಟ ಸಂಸ್ಥೆಗಳು ಕೈಸುಟ್ಟುಕೊಳ್ಳುವುದು ಸಹಜ. ಆದರೆ ಕಾನೂನಿನ ಮೂಲಕ ರಚನೆಯಾದ ಸಂಘ-ಬ್ಯಾಂಕುಗಳಿಂದ ರೈತರಿಗೆ ಸಾಲ ಸಿಗದಿದ್ದರೆ, ಅವರು ಶ್ರೀಮಂತರ ಕಪಿಮುಷ್ಠಿಯಲ್ಲಿ ಸಿಕ್ಕು, ಸಾಲ ಅವರಿಗೆ ಶೂಲವಾಗಿ ಸಾಲದಲ್ಲಿ ಹುಟ್ಟಿ ಸಾಲವನ್ನೇ ಕೊನೆಗೆ ಮಕ್ಕಳಿಗೆ ಬಳುವಳಿಯಾಗಿ ಬಿಟ್ಟು ಹೋಗಬೇಕಾಗುತ್ತದೆ, ಅಲ್ಲದೆ ಅವರಿಗೆ ಸಾಲ ಸಿಗದೇ ಇದ್ದರೆ ಅವರ ಕೃಷಿ ಚಟುವಟಿಕೆಗಳು ನಿಂತು ಕೃಷಿ ಉತ್ಪಾದನೆ ಇಲ್ಲದೆ ಅವನ ಆರ್ಥಿಕ ಸ್ಥಿತಿ ಮತ್ತಷ್ಟು ಹದಗೆಡುವುದು ಸಹಜ. ಆದ್ದರಿಂದ ರೈತರಿಗೆ ಸಾಕಷ್ಟು ಸಾಲ ದೊರೆಯದಿದ್ದರೂ ಒಂದು ಸಮಸ್ಯೆ, ದೊರೆತರೂ ಒಂದು ಸಮಸ್ಯೆ. ಇವೆರಡರ ಮಧ್ಯೆ ಸಾಲದ ಸಂಸ್ಥೆಗಳು ಜಾಗರೂಕವಾಗಿ ವ್ಯವಹರಿಸಬೇಕು.

ಭಾರತದಲ್ಲಿ ಕೃಷಿ ಸಾಲದ ಸಮಸ್ಯೆ ಇಂದು ನಿನ್ನೆಯದಲ್ಲ, ಕಳೆದ ಶತಮಾನದ ಕೊಡುಗೆಯಾಗಿ ಇದು ಮುಂದುವರಿದಿದೆ. ರೈತರನ್ನು ಅವರ ಸಾಲದ ಶೂಲದಿಂದ ರಕ್ಷಿಸಿ ಬದುಕಿಸಲು 1883ರಲ್ಲಿ ಭೂ ಸುಧಾರಣಾ ಕಾನೂನು ಹಾಗೂ 1884ರಲ್ಲಿ ರೈತರ ಸಾಲದ ಕಾನೂನು ಅಂದಿನ ಬ್ರಿಟಿಷ್ ಸರಕಾರ ಜಾರಿಗೆ ತಂದು ರೈತರಿಗೆ ಸಾಲ ಹಂಚಲು ಪ್ರಾರಂಭಿಸಿತು. ಇವುಗಳಿಂದ ರೈತರಿಗೆ ದೊರೆಯುತ್ತಿದ್ದ ಸಾಲ ಅವರ ಬೇಡಿಕೆಯ ಕೊನೆಯ ಚುಂಗು ಆಗಿರದಿದ್ದರೂ ಇದು ರೈತರಿಗೆ ಸಾಂಸ್ಥಿಕ ಸಾಲ ಹಂಚಲು ನಾಂದಿ ಅಥವಾ ಮೊದಲ ಹೆಜ್ಜೆಯೆಂದು ಹೇಳಬಹುದು.

ರೈತರಿಗೆ ಸ್ವಸಹಾಯ, ಪರಸ್ಪರ ಸಹಾಯ ಹಾಗೂ ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ ಮುಂತಾದ ಸಹಕಾರದ ತತ್ವಗಳ ಪ್ರಕಾರ ಕಡಿಮೆ ಬಡ್ಡಿ ದರದಲ್ಲಿ ಸುಲಭ ಆಧಾರದ ಮೇಲೆ ಸಾಲ ಹಂಚಲು ಅಂದಿನ ಸರಕಾರ 1904ರಲ್ಲಿ ಸಹಕಾರಿ ಕಾನೂನನ್ನು ಜಾರಿ ಮಾಡಿ ಗ್ರಾಮೀಣ ಸಾಲದ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಸಾಂಸ್ಥಿಕ ಸಾಲಕ್ಕೆ ಭದ್ರ ಅಡಿಪಾಯ ಹಾಕಿತು.

ಸ್ವಾತಂತ್ರ್ಯಪೂರ್ವದಲ್ಲಿ ಈ ಸಂಸ್ಥೆಗಳಿಂದ ರೈತರಿಗೆ ನಿರೀಕ್ಷಿಸಿದಷ್ಟು ನೆರವು ದೊರೆಯದಿದ್ದರೂ, ಸ್ವಾತಂತ್ರ್ಯಾನಂತರ ಇವುಗಳಲ್ಲಿ ಅಭೂತಪೂರ್ವವಾದ ಪ್ರಗತಿ ಆಯಿತು. ಪಂಚವಾರ್ಷಿಕ ಯೋಜನೆಗಳಲ್ಲಿ ಸರಕಾರ ಬೇಸಾಯ ಅಭಿವೃದ್ಧಿಗಾಗಿ ಹೆಚ್ಚು ಪ್ರಾಶಸ್ತ್ಯಕೊಟ್ಟು ಹೇರಳ ಬಂಡವಾಳವನ್ನು ವಿನಿಯೋಗಿಸಿತು. ಹಸಿರು ಹಾಗೂ ಶ್ವೇತಕ್ರಾಂತಿಯ ಪರಿಣಾಮದಿಂದ ರೈತರ ಸಾಲದ ಬೇಡಿಕೆ ಮಿತಿ ಮೀರಿ ಕೇವಲ ಸಹಕಾರಿ ಸಂಘಗಳಿಂದ ಮಾತ್ರ ಒದಗಿಸಲು ಅಸಾಧ್ಯವಾಯಿತು. ಇದರಿಂದ ಸಹಕಾರಿ ಸಂಘಗಳಿಗೆ ಪೂರಕವಾಗಿ ವಾಣಿಜ್ಯ ಬ್ಯಾಂಕುಗಳನ್ನು ಕೃಷಿ ಸಾಲ ಹಂಚಲು ತೊಡಗಿಸಲಾಯಿತು.

ಸಹಕಾರಿ ಸಂಘಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಸಣ್ಣ, ಅತಿಸಣ್ಣ ರೈತರ ಹಾಗೂ ಕೃಷಿ ಕೂಲಿಕಾರರ ಹಿತರಕ್ಷಣೆ ಮರೆತು ಕೇವಲ ದೊಡ್ಡದೊಡ್ಡ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಹಂಚುವುದು ಕಂಡುಬಂದದ್ದರಿಂದ ಈ ದುರ್ಬಲ ವರ್ಗದವರಿಗಾಗಿಯೇ ಒಂದು ಪ್ರತ್ಯೇಕವಾದ ಸಾಲದ ಸಂಸ್ಥೆಯನ್ನು ಸ್ಥಾಪಿಸುವುದು ಅವಶ್ಯಕವಾದ್ದರಿಂದ 1975ರಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು.

ಹೀಗೆ ರಾಷ್ಟ್ರದಲ್ಲಿಂದು ಬೇಸಾಯ ಸಾಲ ಒದಗಿಸಲು ಸಹಕಾರಿ ಸಂಘಗಳು, ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣ ಬ್ಯಾಂಕುಗಳು ತೊಡ

ಗಿವೆ. ದೇಶದಲ್ಲಿಂದು ಒಟ್ಟು 94 ಸಾವಿರ ಪ್ರಾಥಮಿಕ ಸಹಕಾರಿ ಸಂಘಗಳು, 345 ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕುಗಳು, 26 ರಾಜ್ಯ ಸಹಕಾರಿ ಬ್ಯಾಂಕುಗಳು ಇದ್ದು ಇವು ರೈತರಿಗೆ ಅಲ್ಪಾವಧಿ ಹಾಗೂ ಮಧ್ಯಮಾವಧಿ ಸಾಲಗಳನ್ನು ಒದಗಿಸುತ್ತವೆ. ಅದರಂತೆ 19 ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು ಹಾಗೂ 1,440 ಪ್ರಾಥಮಿಕ ಹಾಗೂ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು, ಜಿಲ್ಲಾ ಮಟ್ಟದ ಶಾಖೆಗಳು ದೀರ್ಘಾವಧಿ ಸಾಲ ಹಂಚಲು ನಿರತವಾಗಿವೆ. ಅದರಂತೆ 1987ರಲ್ಲಿ ವಾಣಿಜ್ಯ ಬ್ಯಾಂಕುಗಳ ಒಟ್ಟು 24,943 ಶಾಖೆಗಳು ಹಳ್ಳಿಗಳಲ್ಲಿ ಹಾಗೂ ಚಿಕ್ಕ ಪುಟ್ಟ ನಗರಗಳಲ್ಲಿ ಒಟ್ಟು 9,483 ಕೋಟಿ ರೂ. ಸಾಲ ಹಂಚಿದ್ದವು. ಅದರಂತೆ 30–12–1987ರಲ್ಲಿ ಒಟ್ಟು 13,341 ಶಾಖೆಗಳನ್ನು ಹೊಂದಿದ ಗ್ರಾಮೀಣ ಬ್ಯಾಂಕುಗಳು ಒಟ್ಟು 1,062 ಕೋಟಿ ರೂ. ಸಾಲ ಹಂಚಿದ್ದವು. ಅದರಂತೆ ಸಹಕಾರಿ ಸಂಸ್ಥೆಗಳು ಜೂನ್ 30, 1987ರಲ್ಲಿ ಒಟ್ಟು 7,478 ಕೋಟಿ ರೂ. ಸಾಲ ಹಂಚಿದ್ದವು.

ಹೀಗೆ ಮೂರು ರೀತಿಯ ಸಂಸ್ಥೆಗಳು ಕೃಷಿಗಾಗಿ ಎಷ್ಟೇ ಸಾಲ ಹಂಚಿದ್ದರೂ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ನಿರೀಕ್ಷಿಸಿದಷ್ಟು ಪ್ರಗತಿ ಸಾಧ್ಯವಾಗದ್ದರಿಂದ ಇದಕ್ಕೆ ಕಾರಣಗಳನ್ನು ಕಂಡು ಹಿಡಿದು ಅವುಗಳಿಗೆ ಪರಿಹಾರಗಳನ್ನು ಸೂಚಿಸಲು ಗ್ರಾಮೀಣ ಸಾಲದ ಸಮೀಕ್ಷೆಯನ್ನು ಕೈಗೊಳ್ಳುವುದೂ ಅತ್ಯವಶ್ಯ.

ಗ್ರಾಮೀಣ ಸಾಲ ಹಂಚುವ ಸಂಸ್ಥೆಗಳ ಬಗ್ಗೆ ಸಮೀಕ್ಷೆಯನ್ನು ಈವರೆಗೆ ಹಲವಾರು ಬಾರಿ ಕೈಗೊಳ್ಳಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಅಂದಿನ ಬ್ರಿಟಿಷ್ ಸರಕಾರ ಈ ಬಗ್ಗೆ ನೇಮಿಸಿದ ಸಮಿತಿಗಳಲ್ಲಿ ಮಾಕ್ಲಾಗಾನ್ ಅವರ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿ ವರದಿ ಅತಿ ಪ್ರಮುಖವಾಗಿದೆ. ಮ್ಯಾಕ್ಲಾಗಾನ್ ಸಮಿತಿಯು ಮಾಡಿದ ಶಿಫಾರಸುಗಳನ್ನೆಲ್ಲಾ ಅಂದಿನ ಸರಕಾರ ಅನುಷ್ಠಾನಕ್ಕೆ ತಂದಿದ್ದರೆ ಭಾರತದ ಗ್ರಾಮೀಣ ಚಿತ್ರವಿಂದು ಅತೀ ಹರ್ಷಮಯವಾಗಿರುತ್ತಿತ್ತು. ರಾಯಲ್ ಕಮೀಷನ್ "ಭಾರತದಲ್ಲಿ ಸಹಕಾರಿ ಆಂದೋಲನ ಅಯಶಸ್ವಿಯಾದರೆ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಇದ್ದ ಆಶೆಗಳು ನಿರಾಶೆ ಆದಂತೆ" ಎಂದು ಹೇಳಿ, ಸಹಕಾರಿ ಆಂದೋಲನದ ಅನೇಕ ಲೋಪ ದೋಷಗಳನ್ನು ಎತ್ತಿ ತೋರಿಸಿ ಅದರ ಪ್ರಗತಿಗಾಗಿ ಅನೇಕ ಶಿಫಾರಸುಗಳನ್ನು ಮಾಡಿತು.

ಸ್ವಾತಂತ್ರ್ಯಾನಂತರ ಗ್ರಾಮೀಣ ಸಾಲದ ಪರಿಶೀಲನೆ ಮಾಡಲು ಈವರೆಗೆ ಭಾರತದ ರಿಸರ್ವ್ ಬ್ಯಾಂಕು ಮೂರು ಸಮಿತಿಗಳನ್ನು ನೇಮಿಸಿದೆ. ಅವು—

1 ಅಖಿಲ ಭಾರತ ಗ್ರಾಮೀಣ ಪತ್ತು ಪರಿಶೀಲನಾ ಸಮಿತಿ-1954, 2 ಅಖಿಲ ಭಾರತ ಗ್ರಾಮೀಣ ಪತ್ತು ಪುನರ್ವಿಮರ್ಶನ ಸಮಿತಿ—1969 ಮತ್ತು 3 ಕ್ರಾಫಿಕಾರ್ಡ್ (CRAFI CARD)—1978.

1954ರಲ್ಲಿ ಶ್ರೀ ಎ. ಡಿ. ಗೋರವಾಲಾರವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಅಖಿಲ ಭಾರತ ಗ್ರಾಮೀಣ ಪತ್ತು ಪರಿಶೀಲನಾ ಸಮಿತಿ ಸಲ್ಲಿಸಿದ ವರದಿ ಭಾರತದ ಸಹಕಾರ ಆಂದೋಲನದ ಒಂದು ಮೈಲಿಗಲ್ಲು. ಇದು "ಭಾರತದಲ್ಲಿ ಸಹಕಾರಅಯಶಸ್ವಿಯಾಗಿದೆ. ಆದರೆ ಅದು ಯಶಸ್ವಿಯಾಗಬೇಕೆ"ಂದು ಪ್ರತಿಪಾದಿಸುತ್ತಾ ಸಹಕಾರಿ ಆಂದೋಳನದ ಪ್ರಗತಿಗಾಗಿ ಅನೇಕ ಶಿಫಾರಸುಗಳನ್ನು ಮಾಡಿತು. ಈ ಶಿಫಾರಸುಗಳನ್ನು ಅನುಷ್ಠಾನಕ್ಕೆ ತಂದನಂತರ ಸಹಕಾರಿ ಆಂದೋಳನ ಸುಭದ್ರವಾಗಿ ವಿಶಾಲವಾಗಿ ಬೆಳೆದು ಬಂದಿತು. ಈ ಸಮಿತಿಯ ಮುಖ್ಯ ಶಿಫಾರಸುಗಳೆಂದರೆ, ಭಾರತದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾವನ್ನು ರಾಷ್ಟ್ರೀಕರಣಗೊಳಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆಗಿ ಪರಿವರ್ತಿಸುವುದು, ಸಹಕಾರಿ ಸಂಘಗಳಲ್ಲಿ ಸರಕಾರದ ಸಾಲಗಾರಿಕೆ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಸಂಸ್ಥೆ ನಿಗಮದ ಸ್ಥಾಪನೆ ಮುಂತಾದವುಗಳು ಪ್ರಮುಖವಾಗಿವೆ.

1969ರಲ್ಲಿ ವರದಿ ಸಲ್ಲಿಸಿದ ಶ್ರೀ ಬಿ. ವೆಂಕಟಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನೇಮಿಸಿದ ಅಖಿಲ ಭಾರತದ ಗ್ರಾಮೀಣ ಪತ್ತು ಮರು ಪರಿಶೀಲನಾ ಸಮಿತಿಯು ದುರ್ಬಲ ವರ್ಗಗಳ ಅಭಿವೃದ್ಧಿಗಾಗಿ ಎಸ್ ಎಫ್ ಡಿ ಎ (ಸ್ಮಾಲ್ ಫಾರ್ಮರ್ಸ್ ಡೆವೆಲಪ್‌ಮೆಂಟ್ ಏಜೆನ್ಸಿ) ಸಣ್ಣ ರೈತರ ಅಭಿವೃದ್ಧಿ ಅಭಿಕರಣಗಳು, ಎಂ ಎಫ್ ಎ ಎಲ್ (ಅತಿ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕ ಅಭಿವೃದ್ಧಿ ಅಭಿಕರಣಗಳು, ಮಾರ್ಜಿನಲ್ ಫಾರ್ಮರ್ಸ್ ಅಂಡ್ ಅಗ್ರಿಕಲ್ಚರಲ್ ಲೇಬರ್ ಡೆವೆಲಪ್‌ಮೆಂಟ್ ಏಜೆನ್ಸೀಸ್), ಗ್ರಾಮೀಣ ವಿದ್ಯುದೀಕರಣದ ನಿಗಮಗಳ ರಚನೆಗೆ ಶಿಫಾರಸು ಮಾಡಿತು. ಅಲ್ಲದೆ 4ನೇ ಪಂಚವಾರ್ಷಿಕ ಯೋಜನೆಯ ಕೊನೆಗೆ ಅಂದರೆ 1974–75ರಲ್ಲಿ ಕೃಷಿ ಸಾಲದ ಬೇಡಿಕೆ ಒಟ್ಟು 4,000 ಕೋಟಿ ರೂ. ಮುಟ್ಟಬಹುದೆಂದೂ, ಇದರಲ್ಲಿ ಸಹಕಾರ ಸಂಘಗಳು ಕೇವಲ ½ರಷ್ಟು ಹಂಚಬಹುದೆಂದೂ ಅಂದಾಜು ಮಾಡಿ ವಾಣಿಜ್ಯ ಬ್ಯಾಂಕುಗಳು ಕೃಷಿ ಸಾಲ ಹಂಚಲು ತೊಡಗಬೇಕೆಂದು ಶಿಫಾರಸು ಮಾಡಿತು. ಇದರ ಪ್ರಯುಕ್ತವಾಗಿ ರಾಷ್ಟ್ರದ 14 ಬೃಹತ್ ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕರಣಗೊಂಡವು.

1978ರಲ್ಲಿ ಭಾರತದ ರಿಸರ್ವ್ ಬ್ಯಾಂಕು ಶ್ರೀ ನರಸಿಂಹನ್‌ರವರ ನೇತೃತ್ವದಲ್ಲಿ ಕೃಷಿ ಹಾಗೂ ಗ್ರಾಮೀಣ ಸಾಂಸ್ಥಿಕ ಸಾಲದ ವ್ಯವಸ್ಥೆಯ ಪುನರೀಕ್ಷಣ ಸಮಿತಿಯನ್ನು ಗ್ರಾಮೀಣ ಸಾಲ ಹಂಚುವ ಸಂಸ್ಥೆಗಳಿಗೆ ಪುನರ್ಧನ ಸಾಲ ಹಂಚಲು ಹಾಗೂ ಅವುಗಳಿಗೆ ಮಾರ್ಗದರ್ಶನ, ಮೇಲ್ವಿಚಾರಣೆ ಒದಗಿಸಿ ಅವುಗಳ ಮೇಲೆ ಹತೋಟಿ ಹೊಂದಲು ರಾಷ್ಟ್ರಮಟ್ಟದಲ್ಲಿ ಪ್ರತ್ಯೇಕ ರಾಷ್ಟ್ರೀಯ ಬ್ಯಾಂಕು ಒಂದು ಇರಬೇಕೆಂದು ಶಿಫಾರಸು ಮಾಡಿತು. ಇದರ ಶಿಫಾರಸಿನ ಮೇರೆಗೆ 1982ರಲ್ಲಿ "ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕು" ಸ್ಥಾಪನೆಗೊಂಡಿತು.

## ಕೃಷಿ ಪತ್ತಿನ ಪುನರೀಕ್ಷಣ ಸಮಿತಿ (ಖುಸ್ರೋ ಸಮಿತಿ) 1988

ಭಾರತದ ರಿಸರ್ವ್ ಬ್ಯಾಂಕು, ಕೇಂದ್ರ ಸರಕಾರ ಹಾಗೂ ವಿಶ್ವ ಬ್ಯಾಂಕಿನೊಡನೆ ಸಮಾಲೋಚಿಸಿ 1986ರ ಆಗಸ್ಟ್ 6ರಂದು ಈ ಸಮಿತಿಯನ್ನು ಭಾರತದ ಯೋಜನಾ ಆಯೋಗದ ಮಾಜಿ ಸದಸ್ಯ ಪ್ರೊ. ಎ. ಎಂ. ಖುಸ್ರೋರವರ ಅಧ್ಯಕ್ಷತೆಯಲ್ಲಿ ನೇಮಿಸಲಾಯಿತು. ಒಟ್ಟು 24 ಅಧ್ಯಾಯಗಳಲ್ಲಿ ಹತ್ತು ಭಾಗಗಳಲ್ಲಿ ವಿವರಿಸಿದ ಈ ಬೃಹತ್ ವರದಿ ಒಟ್ಟು 1,074 ಪುಟಗಳನ್ನು ಒಳಗೊಂಡಿರುತ್ತದೆ.

## ಸಮಿತಿಯ ಸದಸ್ಯರು

ಈ ಸಮಿತಿಯಲ್ಲಿ ಒಟ್ಟು ಏಳು ಜನ ಸದಸ್ಯರಿದ್ದರು. ನಾಲ್ಕು ಜನ ಪರಿಣತರು ಭಾರತೀಯರಾಗಿದ್ದು, ಉಳಿದ ಮೂರು ಜನ ಪರಿಣತರು ವಿದೇಶೀಯರಾಗಿದ್ದರು. ಅವರು ಕೆಳಗಿನಂತಿದ್ದಾರೆ :

ಪ್ರೊ. ಎ. ಎಂ. ಖುಸ್ರೋ (ಅಧ್ಯಕ್ಷರು, ಭಾರತ ಯೋಜನಾ ಆಯೋಗದ ನಿವೃತ್ತ ಸದಸ್ಯರು) ಶ್ರೀ ಎಂ. ಎಂ. ವಾಲಿ (ನಿವೃತ್ತ ಲೆಫ್ಟಿನೆಂಟ್ ಗವರ್ನರ್, ಹೊಸ ದೆಹಲಿ), ಶ್ರೀ ಎಂ. ವಿ. ಹಾಟೆ (ನಿವೃತ್ತ ಡೆಪ್ಯುಟಿ ಗವರ್ನರ್, ಭಾರತೀಯ ರಿಸರ್ವ್ ಬ್ಯಾಂಕು, ಮುಂಬೈ), ಡಾ. ಎ. ಎಸ್. ಕೋಹಲಾನ್ (ಮಾಜಿ ಅಧ್ಯಕ್ಷರು, ಭಾರತ ಸರ್ಕಾರದ ಬೇಸಾಯ ಹುಟ್ಟುವಳಿ ಬೆಲೆ ನಿರ್ಧಾರಣಾ ಸಮಿತಿ, ಹೊಸ ದೆಹಲಿ), ಡಾ. ಜೆ. ಡಬ್ಲು. ಮೆಲ್ಲರ್ (ಅಂತರರಾಷ್ಟ್ರೀಯ ಆಹಾರ ಯೋಜನಾ ಸಂಶೋಧನಾ ಸಂಸ್ಥೆ, ವಾಷಿಂಗ್ಟನ್), ಜೆ. ಎ. ವ್ಯಾನ್ ಡೆರ್ ಲಿಂಡನ್ (ಮಾಜಿ ಜನರಲ್ ಮ್ಯಾನೇಜರ್, ರೇಬೋ ಬ್ಯಾಂಕ್, ನೆದರ್‌ಲ್ಯಾಂಡ್), ಶ್ರೀ ಬಾಸಿಲಿಯೋ ಇಷ್ಪಾನಿಸ್ಲಾವೊ (ಮಾಜಿ ಅಧ್ಯಕ್ಷರು, ಭೂ ಅಭಿವೃದ್ಧಿ ಬ್ಯಾಂಕ್, ಫಿಲಿಪೀನ್ಸ್ ಹಾಗೂ ಮಾಜಿ ಅಧ್ಯಕ್ಷರು APRACA).

ಈ ಸಮಿತಿಗೆ ಶ್ರೀ ಸಿ. ವಿ. ನಾಯರ್‌ರವರು ಕಾರ್ಯನಿರ್ದೇಶಕರಾಗಿದ್ದರು.

## ಉದ್ದೇಶಗಳು

ಈ ಸಮಿತಿಯು ಕೆಳಗಿನ ವಿಷಯಗಳ ಬಗ್ಗೆ ಅಧ್ಯಯನ ಮಾಡಿತು :

ಸಾಮಾನ್ಯವಾಗಿ ಕೃಷಿ ಪತ್ತಿನ ಬಗ್ಗೆ,

ಕೃಷಿ ಸಾಲ ಹಂಚುವ ಸಂಸ್ಥೆಗಳ ಬಗ್ಗೆ ಹಾಗೂ ಅವುಗಳ ಪ್ರಯೋಜನಗಳ ಬಗ್ಗೆ,

ಬೇಸಾಯ ಸಾಲ ವಿತರಣೆಯಲ್ಲಿ ಸಾಲದ ಶ್ರೇಣಿ ಸಂಸ್ಥೆಗಳ ಬಗ್ಗೆ,

ಸಾಲ ಹಂಚಲು ತಗಲುವ ವೆಚ್ಚ ಹಾಗೂ ಲಾಭಾಂಶದ ಬಗ್ಗೆ,

ನಬಾರ್ಡ್‌ನ ಸಂಘಟನೆ ಹಾಗೂ ಆಡಳಿತದ ಬಗ್ಗೆ.

## ಶಿಫಾರಸುಗಳು

ಈ ಸಮಿತಿಯು ವಾಣಿಜ್ಯ ಬ್ಯಾಂಕುಗಳ/ಗ್ರಾಮೀಣ ಬ್ಯಾಂಕುಗಳ ಬಗ್ಗೆ, ಸಹಕಾರಿಸಂಘಗಳ/ಬ್ಯಾಂಕುಗಳ ಬಗ್ಗೆ ಅನೇಕ ಶಿಫಾರಸುಗಳನ್ನು ಮಾಡಿದೆ. ಅವುಗಳ ಲೋಪದೋಷ ಹಾಗೂ ಸಮಸ್ಯೆಗಳನ್ನು ಎತ್ತಿ ತೋರಿಸಿ ಅವುಗಳ ಪರಿಹಾರಕ್ಕಾಗಿ ಸುಮಾರು ಒಟ್ಟು 182 ಶಿಫಾರಸುಗಳನ್ನು ಮಾಡಿದೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಮಾತ್ರ ಕೆಳಗೆ ಕೊಡಲಾಗಿದೆ :

ರಾಷ್ಟ್ರೀಯ ಸಹಕಾರಿ ಬ್ಯಾಂಕಿನ ಸ್ಥಾಪನೆ ;

ಬೆಳೆ ವಿಮಾ ಯೋಜನೆಯ ನಿಗಮದ ಸ್ಥಾಪನೆ;

ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ನಿಗಮಗಳ ರಚನೆ ;

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಅವುಗಳ ಮಾತೃಬ್ಯಾಂಕುಗಳಲ್ಲಿ ವಿಲೀನೀಕರಣಗೊಳಿಸುವುದು ;

ಸುಸ್ತಿ ಸಾಲದ ವಸೂಲಾತಿಗಾಗಿ ಎಲ್ಲಾ ಸಂಸ್ಥೆಗಳಿಗೆ ಅನ್ವಯ ಆಗುವಂತೆ ಪ್ರತಿ ರಾಜ್ಯದಲ್ಲಿ ಒಂದು ಏಕರೂಪ ಸುಸ್ತಿ ಸಾಲ ವಸೂಲಿಯ ಬಗ್ಗೆ ಕಾನೂನಿನ ಮತ್ತು ನ್ಯಾಯಮಂಡಳಿಗಳ ರಚನೆ ಹಾಗೂ ಸಾಲ ವಸೂಲಾತಿಗಾಗಿ ಪ್ರತ್ಯೇಕ ಸರಕಾರದ ಇಲಾಖೆಯ ರಚನೆ ;

ಕೃಷಿ ಸಾಲದ ಮೇಲಿನ ಬಡ್ಡಿದರವನ್ನು ಶೇ. 15.5ನ್ನು ಮೀರದ ಹಾಗೆ ಹೆಚ್ಚಿಸುವುದು ;

ತರಬೇತಿಗಾಗಿ ಹೆಚ್ಚಿನ ಮಹತ್ವ ಕೊಡಬೇಕು;

ಗಣಕಯಂತ್ರಗಳ ಬಳಕೆ ಜಿಲ್ಲಾಮಟ್ಟದಲ್ಲಿರಬೇಕು ; ಗ್ರಾಮಮಟ್ಟದಲ್ಲಿ ಇವುಗಳ ಮಹತ್ವ ಅಷ್ಟಿಲ್ಲ ;

ವಾಣಿಜ್ಯ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರಿಗೆ ಕೆಲವೊಂದು ವಿಶೇಷ ಸವಲತ್ತುಗಳು ;

ಅಲ್ಪಾವಧಿ ಹಾಗೂ ದೀರ್ಘಾವಧಿ ಸಾಲ ಒದಗಿಸುವ ಸಹಕಾರ ಸಂಘ ಹಾಗೂ ಬ್ಯಾಂಕುಗಳು ಒಂದುಗೂಡುವಿಕೆಯ ವಿಷಯವನ್ನು ಮುಂದೂಡಬೇಕು ;

ಸಹಕಾರಿ ಸಂಘ ಹಾಗೂ ಬ್ಯಾಂಕುಗಳಿಗೆ ಸಂಬಂಧಿಸಿದ ಶಿಫಾರಸುಗಳು.

## ಭಾರತದ ರಾಷ್ಟ್ರೀಯ ಸಹಕಾರಿ ಬ್ಯಾಂಕಿನ ಸ್ಥಾಪನೆ

ರಾಷ್ಟ್ರಮಟ್ಟದಲ್ಲಿ ಸಮಸ್ತ ಸಹಕಾರಿ ಬ್ಯಾಂಕುಗಳ ಮುಂದಾಳಾಗಿ, ಅವುಗಳ ಪ್ರಗತಿ ಹಾಗೂ ಅವುಗಳ ಸಮಸ್ಯೆಗಳ ಪರಿಹಾರದ ಬಗ್ಗೆ ರಾಷ್ಟ್ರಮಟ್ಟದ ಬ್ಯಾಂಕಿಂಗ್ ವೇದಿಕೆಗಳ ಮೇಲೆ ಪ್ರತಿಪಾದಿಸಲು ಹಾಗೂ ಇಡೀ ರಾಷ್ಟ್ರದ ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆಗೆ ಒಂದು ಮುಖವಾಣಿಯಾಗಿ ವ್ಯವಹರಿಸಲು ಸಹಕಾರಿ ಬ್ಯಾಂಕುಗಳದೇ ಆದ ಒಂದು ರಾಷ್ಟ್ರೀಯ ಸಹಕಾರಿ ಬ್ಯಾಂಕಿನ ಸ್ಥಾಪನೆಯ ಆವಶ್ಯಕತೆ ಮೊದಲಿನಿಂದಲೂ ಇತ್ತು. ಈ ಬ್ಯಾಂಕಿನ ಸ್ಥಾಪನೆಯ ಆವಶ್ಯಕತೆಯ ಬಗ್ಗೆ ರಾಷ್ಟ್ರಮಟ್ಟದ ಅನೇಕ ವೇದಿಕೆಗಳ ಮೇಲೆ ಬೇಡಿಕೆಯನ್ನು ಸಲ್ಲಿಸಲಾಗುತ್ತಿತ್ತು. ಸಹಕಾರಿ ಬ್ಯಾಂಕುಗಳಿಗೆ ರಾಷ್ಟ್ರೀಯಮಟ್ಟದ ತಮ್ಮದೇ ಆದ ರಾಷ್ಟ್ರೀಯ ಸಹಕಾರಿ ಬ್ಯಾಂಕು ಇರದೇ ಇದ್ದುದರಿಂದ ಎರಡು ರೀತಿಯ ಹಾನಿ ಸಹಕಾರಿ ಆಂದೋಲನಕ್ಕೆ ಆಗುತ್ತಿತ್ತು. ಮೊದಲನೆಯದಾಗಿ, ರಾಜ್ಯ ಸಹಕಾರಿ ಬ್ಯಾಂಕುಗಳ ಹಾಗೂ ರಾಷ್ಟ್ರಮಟ್ಟದ ಸಹಕಾರಿ ಮಹಾಮಂಡಳಗಳ ಹೆಚ್ಚುವರಿ ಹಣ ವಾಣಿಜ್ಯ ಬ್ಯಾಂಕುಗಳಿಗೆ ಠೇವಣಿ ಮೂಲಕ ಹರಿದು ಹೋಗುತ್ತಿತ್ತು. ಎರಡನೆಯದಾಗಿ, ಸಹಕಾರಿ ಬ್ಯಾಂಕುಗಳ ಹಾಗೂ ರಾಷ್ಟ್ರೀಯ ಮಟ್ಟದ ಸಹಕಾರಿ ಮಹಾಮಂಡಳಗಳ ಉತ್ತಮ ಹಾಗೂ ಲಾಭದಾಯಕವಾದ ಬ್ಯಾಂಕಿಂಗ್ ವ್ಯವಹಾರ ವಾಣಿಜ್ಯ ಬ್ಯಾಂಕುಗಳ ಪಾಲಾಗುತ್ತಿತ್ತು. ಆದ್ದರಿಂದ ಈ ಸಮಿತಿ ಈ ಬ್ಯಾಂಕಿನ ಸ್ಥಾಪನೆಗೆ ಶಿಫಾರಸು ಮಾಡಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ.

ಭಾರತದ ರಾಷ್ಟ್ರೀಯ ಸಹಕಾರಿ ಬ್ಯಾಂಕು ನಬಾರ್ಡಿಗೆ ಪರ್ಯಾಯ ಬ್ಯಾಂಕಾಗದು. ಇಂದಿನಂತೆ ಮುಂದೂ ನಬಾರ್ಡ್ ಸಹಕಾರಿ ಬ್ಯಾಂಕುಗಳಿಗೆ ಒದಗಿಸುವ ಪುನರ್‌ಧನ ಸಾಲದ ವ್ಯವಸ್ಥೆ ಮುಂದುವರಿಯುತ್ತದೆ. ಈ ಸಂಸ್ಥೆ ಸಹಕಾರಿ ಸಾಲದ ವಿತರಣಾ ವ್ಯವಸ್ಥೆಯ ಸಮತೋಲನ ಕಾಯುವುದು.

ರಾಷ್ಟ್ರಮಟ್ಟದ ಈ ಸಂಸ್ಥೆಯ ಮಾಲೀಕತ್ವ ಹಾಗೂ ಆಡಳಿತವನ್ನು ರಾಷ್ಟ್ರದ ಸಮಸ್ತ ಸಹಕಾರಿ ಪತ್ತಿನ ವ್ಯವಸ್ಥೆ ಹೊಂದಿರುತ್ತದೆ. ಗ್ರಾಮಾಂತರ ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳಿಂದ ರಾಜ್ಯ ಸಹಕಾರಿ ಬ್ಯಾಂಕುಗಳವರೆಗಿನ ಅಭಿವೃದ್ಧಿಯ ಜವಾಬ್ದಾರಿಯನ್ನು ಈ ಸಂಸ್ಥೆ ವಹಿಸಿಕೊಳ್ಳುತ್ತದೆ. ರಾಷ್ಟ್ರಮಟ್ಟದಲ್ಲಿ ಸಹಕಾರಿ ಪತ್ತಿನ ವ್ಯವಸ್ಥೆಯ ಬಗ್ಗೆ ಅಂಕಿ ಅಂಶಗಳನ್ನು ಹೊಂದುವುದು ಹಾಗೂ ಭಾರತದ ಸಹಕಾರಿ ಆಂದೋಲನದ ಪ್ರಗತಿಯ ಸಿಂಹಾವಲೋಕನಗೈಯುವುದು ಈ ಬ್ಯಾಂಕಿನ ಕರ್ತವ್ಯ. ಪಟ್ಟಣ ಸಹಕಾರಿ ಬ್ಯಾಂಕುಗಳು ಹಾಗೂ ಇತರ ಸಹಕಾರಿ ಬ್ಯಾಂಕುಗಳು ಈ ರಾಷ್ಟ್ರೀಯ ಸಹಕಾರಿ ಬ್ಯಾಂಕಿನಲ್ಲಿಟ್ಟ ಠೇವಣಿಯನ್ನು ಆಯಾ ಬ್ಯಾಂಕುಗಳ ದವ್ರಿಕ್ತ ಆಸ್ತಿಗಳಾಗಿ ಪರಿಗಣಿಸಲು ಬ್ಯಾಂಕಿಂಗ್ ನಿಯಂತ್ರಣ ಕಾನೂನು 1949 (ಸಹಕಾರಿ ಸಂಘಗಳಿಗೆ ಅನ್ವಯವಾಗುವಂತೆ) 1966 ಇದಕ್ಕೆ ಸೂಕ್ತ ತಿದ್ದುಪಡಿ ಸೂಚಿಸಲಾಗುವುದು. ರಾಜ್ಯ ಸಹಕಾರಿ ಬ್ಯಾಂಕುಗಳು ತಮ್ಮ ನಗದು ಆಪದ್ಧನದಲ್ಲಿ ಶೇ. 50 ರಷ್ಟನ್ನು ಈ ಬ್ಯಾಂಕಿನಲ್ಲಿ ಠೇವಣಿಯಾಗಿಡಲು ಅನುಕೂಲ ಕಲ್ಪಿಸಲಾಗುವುದು. ರಾಜ್ಯ ಸಹಕಾರಿ ಬ್ಯಾಂಕುಗಳು ಹಾಗೂ ಇತರ ರಾಷ್ಟ್ರಮಟ್ಟದ ಸಹಕಾರಿ ಸಂಘ/ಮಹಾಮಂಡಳಿಗಳು ತಮ್ಮ ಹೆಚ್ಚುವರಿ ಹಣ ಹಾಗೂ ಅಪದ್ಧನದ ನಿಧಿಗಳನ್ನು ಈ ಬ್ಯಾಂಕುಗಳಲ್ಲಿ ಠೇವಣಿಯಾಗಿಡಬೇಕು. ಈ ಬ್ಯಾಂಕು ತನ್ನ ವಾರ್ಷಿಕ ನಿವ್ವಳ ಲಾಭದಿಂದ ಸದಸ್ಯ ಬ್ಯಾಂಕುಗಳಿಂದ ದೇಣಿಗೆ ಹೊಂದಿ ಒಂದು ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಿ ರಾಜ್ಯ ಸಹಕಾರಿ ಬ್ಯಾಂಕುಗಳ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯದರ್ಶಿಗಳಿಗೆ ತರಬೇತಿಗಾಗಿ ಹಾಗೂ ಸಂಶೋಧನಾ ಕಾರ್ಯಗಳಿಗೆ ವಿನಿಯೋಗಿಸಬೇಕು. ಈಗಾಗಲೇ ರಾಷ್ಟ್ರೀಯ ಸಹಕಾರಿ ಯೂನಿಯನ್, ರಾಜ್ಯ ಸಹಕಾರಿ ಬ್ಯಾಂಕುಗಳ ರಾಷ್ಟ್ರೀಯ ಮಹಾಮಂಡಳ, ಕೇಂದ್ರ ಸರಕಾರ ಹಾಗೂ ಭಾರತದ ರಿಜರ್ವ್ ಬ್ಯಾಂಕು ಕೂಡಿ ಈ ಬ್ಯಾಂಕನ್ನು ಸ್ಥಾಪಿಸಲು ಮುಂದಿನ ಕ್ರಮ ಕೈಗೊಳ್ಳಲು ನಿವೇದಿಸಲಾಗಿದೆ.

## ಬೆಳೆ ವಿಮಾ ಯೋಜನೆಯ ನಿಗಮ

ಪ್ರಕೃತಿಯ ವಿಕೋಪದಿಂದ ಬೆಳೆಬಾರದೆ ಕೊಟ್ಟ ಸಾಲದ ಮರುಪಾವತಿ ಆಗದಿದ್ದಾಗ ಅದನ್ನು ರಾಷ್ಟ್ರೀಯ ಕೃಷಿ ಸಾಲದ ಸ್ಥಿರೀಕರಣ ನಿಧಿಯಿಂದ ಮಧ್ಯಮಾವಧಿ ಸಾಲವನ್ನಾಗಿ ಮಾರ್ಪಡಿಸುವ ಅಥವಾ ಪುನರ್ ಮಾರ್ಪಡಿಸಿ ಹೊಸ ಸಾಲ ಒದಗಿಸುವ ವ್ಯವಸ್ಥೆ ಇದ್ದರೂ, ಇದು ಸಾಲ ತಂದ ರೈತನ ಸಾಲದ ಭಾರವನ್ನು ಹೆಚ್ಚಿಸುವುದೇ ಹೊರತು ಅವನು ಕಳೆದುಕೊಂಡ ಬೆಳೆಯ ಹಾನಿಯನ್ನು ತುಂಬಿಕೊಡುವುದಿಲ್ಲ. ಬೆಳೆಯ ಹಾನಿಯನ್ನು ತುಂಬಿಕೊಡಲು ಒಂದು ಉತ್ತಮ ಮಾಧ್ಯಮವೆಂದರೆ 'ಬೆಳೆ ವಿಮಾ ಯೋಜನೆ'. ಈ ಯೋಜನೆ ಕಳೆದ 7–8 ವರ್ಷಗಳಿಂದ ಸಹಕಾರಿ ಸಂಘಗಳಲ್ಲಿ ಜಾರಿಯಲ್ಲಿದ್ದರೂ, ರೈತ ಬೆಳೆದ ಎಲ್ಲಾ ಬೆಳೆಗೆ ಹಾಗೂ ಸಮಗ್ರ ಭಾರತಾದ್ಯಂತ ಜಾರಿಯಲ್ಲಿರುವುದಿಲ್ಲ. ಇದು ಕೇವಲ ಕೆಲವೇ ಬೆಳೆಗಳಿಗೆ ಹಾಗೂ ಕೆಲವೊಂದು ಜಿಲ್ಲೆಗಳ ಕೆಲವೊಂದು ಭಾಗಗಳಲ್ಲಿ ಜಾರಿಯಲ್ಲಿದೆ. ಇದರಿಂದ ರೈತರಿಗೆ ಹೆಚ್ಚಿನ ಪ್ರಯೋಜನ ಆಗುತ್ತಿಲ್ಲ. ಆದ್ದರಿಂದ ಈ ಬೆಳೆ ವಿಮಾ ಯೋಜನೆಯನ್ನು ಸಕಲ ಬೆಳೆಗಳಿಗೂ ಭಾರತದಾದ್ಯಂತ ವ್ಯಾಪಕಗೊಳಿಸಲು ಪ್ರತ್ಯೇಕ ಒಂದು "ಬೆಳೆ ವಿಮಾ ಯೋಜನೆ"ಯನ್ನು ಸ್ಥಾಪಿಸುವುದು ಆವಶ್ಯ. ಈ ಸಂಸ್ಥೆಯೂ ಕೂಡ ಎಂದೋ ರಚನೆ ಆಗಬೇಕಿತ್ತು. ಈಗಲಾದರೂ ಸ್ಥಾಪನೆ ಆಗುತ್ತಿರುವುದು ಸ್ವಾಗತಾರ್ಹ.

## ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ನಿಗಮ

ಕೃಷಿ ಸಾಲದ ಒಟ್ಟಾರೆ ಎಲ್ಲಾ ಸಾಲದ ಸಂಸ್ಥೆಗಳಿಂದ ರಾಷ್ಟ್ರಾದ್ಯಂತ ಸಮನಾಗಿ ಬೆಳೆದು ಬಂದಿಲ್ಲ. ಹೀಗಾಗಿ ರೈತರಿಗೆ ಸಾಕಷ್ಟು ಸಾಲ ಅನೇಕ ರಾಜ್ಯಗಳಲ್ಲಿ ಸಿಗುತ್ತಿಲ್ಲ. ಆದ್ದರಿಂದ ಬಿಹಾರ, ಒರಿಸ್ಸಾ, ಪಶ್ಚಿಮ ಬಂಗಾಳ ಹಾಗೂ ವಾಯುವ್ಯ ರಾಜ್ಯಗಳಿಗೆ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ನಿಗಮದ ಸ್ಥಾಪನೆ ಆಗಬೇಕೆಂದು ಶಿಫಾರಸು ಮಾಡಿದೆ.

## ಗ್ರಾಮೀಣ ಬ್ಯಾಂಕುಗಳನ್ನು ಅವುಗಳ ಮಾತೃ ಬ್ಯಾಂಕುಗಳಲ್ಲಿ ವಿಲೀನಗೊಳಿಸುವುದು

ದೇಶದಲ್ಲಿದ್ದ ಅನೇಕ ಗ್ರಾಮೀಣ ಬ್ಯಾಂಕುಗಳಲ್ಲಿ ಬಹುತೇಕ ಬ್ಯಾಂಕುಗಳು ಹಾನಿಯಲ್ಲಿ ನಡೆಯುತ್ತಿರುವುದರಿಂದ ಅವುಗಳನ್ನು ಸೃಷ್ಟಿಸಿದ ಬ್ಯಾಂಕುಗಳಲ್ಲಿ ವಿಲೀನಗೊಳಿಸುವುದು ಸೂಕ್ತ. ಈ ಬ್ಯಾಂಕುಗಳ ಲಾಭ-ನಷ್ಟದ ವಿವರಗಳನ್ನು ಕೋಷ್ಟಕ 1ರಲ್ಲಿ ನೋಡಬಹುದು.

ಅಲ್ಲದೆ ಇವುಗಳಲ್ಲಿ ಹಿಂದಿನ ವರ್ಷಗಳಿಂದ ಕೂಡಿ ಬಂದ ನಷ್ಟ ಕೆಳಕಂಡಂತಿದೆ.

### ಕೋಷ್ಟಕ 1

### ಗ್ರಾಮೀಣ ಬ್ಯಾಂಕುಗಳ ಪ್ರಗತಿಚಿತ್ರ

ಲಕ್ಷ ರೂಗಳಲ್ಲಿ

| ವರ್ಷ | ಒಟ್ಟು ಬ್ಯಾಂಕುಗಳು | ಲಾಭದಲ್ಲಿರುವಂಥವುಗಳು | | ನಷ್ಟದಲ್ಲಿರುವಂಥವುಗಳು | |
|---|---|---|---|---|---|
| | | ಬ್ಯಾಂಕುಗಳು | ಹಣ | ಬ್ಯಾಂಕುಗಳು | ಹಣ |
| 1976 | 40 | 26 | 10.92 | 14 | 2.55 |
| 1980 | 85 | 56 | 217.50 | 29 | 103.59 |
| 1984 | 173 | 43 | 318.33 | 130 | 1,585.90 |
| 1985 | 188 | 36 | 326.00 | 152 | 2,990.50 |
| 1986 | 194 | 46 | 432.12 | 148 | 3,554.83 |
| 1987 | — | — | — | 151 | — |

### ಕೋಷ್ಟಕ 2

### ಗ್ರಾಮೀಣ ಬ್ಯಾಂಕುಗಳ ಕೂಡಿ ಬಂದ ಒಟ್ಟು ನಷ್ಟ

(ಕೋಟಿ ರೂ.ಗಳಲ್ಲಿ)

| ವರ್ಷ | ಕೂಡಿಬಂದ ನಷ್ಟ | ವರ್ಷ | ಕೂಡಿಬಂದ ನಷ್ಟ |
|---|---|---|---|
| 1982 | 9.81 | 1985 | 61.36 |
| 1984 | 31.71 | 1986 | 94.31 |
| | | 1987 | 133.16 |

ನಷ್ಟದಲ್ಲಿರುವ ಈ ಬ್ಯಾಂಕುಗಳನ್ನು ಮುಚ್ಚುವುದು ಆವಶ್ಯಕವಾದರೂ ಹೆಚ್ಚಿನ ಸಂಖ್ಯೆಗಳಲ್ಲಿ ಶಾಖೆಗಳನ್ನು ಹೊಂದಿರುವ ಈ ಬ್ಯಾಂಕುಗಳನ್ನು ಅವುಗಳನ್ನು ಸ್ಥಾಪಿಸಿದ ಬ್ಯಾಂಕುಗಳಲ್ಲಿ ವಿಲೀನೀಕರಿಸಿ ಅವುಗಳ ಶಾಖೆಗಳನ್ನು ಅವುಗಳ ಮಾತೃ ಸಂಸ್ಥೆಗಳು ಮುಂದುವರಿಸುವುದು ಸೂಕ್ತ.

## ಸುಸ್ತಿ ಸಾಲದ ಸಮಸ್ಯೆ

ಕೃಷಿ ಸಾಲ ಹಂಚುವ ಸಂಸ್ಥೆಗಳ ಅತೀ ದೊಡ್ಡ ಸಮಸ್ಯೆಯೆಂದರೆ ಸುಸ್ತಿ ಸಾಲದ ಸಮಸ್ಯೆ. ಇದೊಂದು ಬೇಗನೆ ಗುಣಪಡಿಸಲಾರದ ರೋಗ ವಿದ್ದಂತೆ. ಈ ರೋಗ ಕೇವಲ ಸಹಕಾರಿ ಸಂಘಗಳಲ್ಲಿ ಮಾತ್ರ ಮಿತಿಮೀರಿಲ್ಲ. ಆದರೆ ವಾಣಿಜ್ಯ ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿಯೂ ಸಹ ಇದು ಮಹಾರೋಗವಾಗಿ ಪರಿಣಮಿಸಿದೆ. ಇದನ್ನು 3ನೇ ಕೋಷ್ಟಕದಲ್ಲಿ ನೋಡಬಹುದು.

ಮೇಲೆ ಹೇಳಿದ ಅಂಕಿ-ಅಂಶಗಳಂತೆ ಸುಸ್ತಿ ಸಾಲದ ಬಾಕಿ ಎಲ್ಲಾ ರೀತಿಯ ಸಾಲದ ಸಂಸ್ಥೆಗಳೂ ಹೊಂದಿರುವುದರಿಂದ ಸಹಕಾರಿ ಸಂಘಗಳಿಗೆ ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ಏಕರೂಪವಾದ ಒಂದು ಕಾನೂನನ್ನು ರಚಿಸುವುದು ಆವಶ್ಯಕ. ಅಲ್ಲದೆ ರಾಜ್ಯ ಮಟ್ಟದಲ್ಲಿ ಸಾಲ ವಸೂಲಿಯ ವ್ಯಾಜ್ಯಗಳನ್ನು ತೀವ್ರವಾಗಿ ಬಗೆಹರಿಸಲು ನ್ಯಾಯಮಂಡಳಿಗಳನ್ನು ರಚಿಸಬೇಕು ಹಾಗೂ ಪ್ರತಿ ರಾಜ್ಯದ ಸರಕಾರದಲ್ಲಿ ಸಾಲದ ವ್ಯಾಜ್ಯಗಳ ಅಮಲು ಬಚಾವಣೆಗಳಾಗಿ ಪ್ರತ್ಯೇಕ ಇಲಾಖೆಯನ್ನು ರಚಿಸಬೇಕು.

## ವಾಣಿಜ್ಯ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರಿಗೆ ವಿಶೇಷ ಸವಲತ್ತುಗಳು

ವಾಣಿಜ್ಯ ಬ್ಯಾಂಕುಗಳ ಶಾಖೆಗಳಲ್ಲಿ ಅವುಗಳ ಸಿಬ್ಬಂದಿ ವರ್ಗದವರನ್ನು ಮನಃಪೂರ್ವಕವಾಗಿ ಸೇವೆ ಸಲ್ಲಿಸುವಂತೆ ಉತ್ತೇಜಿಸುವ ಸಲುವಾಗಿ ಅವರಿಗೆ ಕೆಲವೊಂದು ವಿಶೇಷ ಸವಲತ್ತುಗಳನ್ನು ಒದಗಿಸಬೇಕು.

ಅವುಗಳಲ್ಲಿ—

ಗ್ರಾಮೀಣ ಶಾಖಾ ವ್ಯವಸ್ಥಾಪಕನಿಗೆ ಪುಕ್ಕಟೆಯಾಗಿ ವಸತಿ ಸೌಲಭ್ಯವನ್ನು ಒದಗಿಸಬೇಕು. ಅದರ ಬಾಡಿಗೆಯನ್ನು ಅವನ ಸಂಬಳದಲ್ಲಿ ಮುರಿಯಬಾರದು.

ಕನಿಷ್ಠ ಮೂರು ವರ್ಷಗಳವರೆಗೆ ಗ್ರಾಮಾಭಿವೃದ್ಧಿ ಸಾಲ ಹಂಚುವಲ್ಲಿ ಹೆಚ್ಚು ಯಶಸ್ವಿಯಾಗಿ ಸೇವೆ ಸಲ್ಲಿಸಿದ ವ್ಯವಸ್ಥಾಪಕನಿಗೆ ಒಂದು ವಾರ್ಷಿಕ ಸಂಬಳದ ಬಡ್ತಿ ಒದಗಿಸಬೇಕು. ಅವನಿಗೆ ಮೂರು ವರ್ಷದ ನಂತರ ಅವನು ಕೇಳಿದ ಗ್ರಾಮೀಣ ಶಾಖೆಗೆ ವರ್ಗಾಯಿಸಬೇಕು.

### ಕೋಷ್ಟಕ 3

### ಸುಸ್ತಿ ಸಾಲದ ಪ್ರಮಾಣ

| ಸಂಸ್ಥೆಗಳು | 1975–76 | 1980–81 | 1981–82 | 1982–83 | 1983–84 | 1984–85 | 1985–86 |
|---|---|---|---|---|---|---|---|
| ವಾಣಿಜ್ಯ ಬ್ಯಾಂಕುಗಳು | 200 | 727 | 893 | 1,069 | 1,351 | 1,568 | 1,744 |
| | (48) | (47) | (48) | (47) | (48) | (46) | (43) |
| ಗ್ರಾಮೀಣ ಬ್ಯಾಂಕುಗಳು | ಲ.ಇ | 54 | 89 | 158 | 242 | 322 | 413 |
| | | (48) | (50) | (48) | (50) | (52) | (51) |
| ಪ್ರಾ.ಬೇ.ಪ.ಸಹಕಾರಿ ಸಂಸ್ಥೆಗಳು | 561 | 1,376 | 1,205 | 1,308 | 157 | 1,630 | 180 |
| | (34) | (43) | (50) | (40) | (43) | (42) | (41) |
| ಭೂ ಅಭಿವೃದ್ಧಿ ಬ್ಯಾಂಕುಗಳು | 92 | 291 | 252 | 269 | 267 | 285 | 298 |
| | (34) | (46) | (40) | (44) | (36) | (40) | (39) |

1,000ಕ್ಕಿಂತ ಹೆಚ್ಚು ಖಾತೆಗಳಿರುವ ಹಾಗೂ 50 ಲಕ್ಷ ರೂ.ಗಳಿಗಿಂತ ಹೆಚ್ಚು ಸಾಲ ಹಂಚಿದ ಶಾಖೆಗಳಲ್ಲಿ ಇಬ್ಬರು ಅಧಿಕಾರಿಗಳಿರಬೇಕು.

## ಗಣಕಗಳ ಬಳಕೆ

ಗಣಕಗಳ ಬಳಕೆ ಜಿಲ್ಲಾಮಟ್ಟದಲ್ಲಿರಬೇಕು. ಆದರೆ ಗ್ರಾಮೀಣ ಶಾಖೆಗಳಲ್ಲಿ ಇವುಗಳ ಬಳಕೆಯ ಅಗತ್ಯ ಅಷ್ಟಾಗಿ ಕಂಡುಬರುವುದಿಲ್ಲ. ಆದ್ದರಿಂದ ಗಣಕ ಬಳಕೆಯನ್ನು ಜಿಲ್ಲಾಮಟ್ಟದಲ್ಲಿಡಬೇಕೆಂದು ಶಿಫಾರಸು ಮಾಡಿದೆ.

## ಸೇವಾ ಕ್ಷೇತ್ರದ ಬದಲು ಅಭಿವೃದ್ಧಿ ಯೋಜನಾ ಕ್ಷೇತ್ರ

ಈ ಸಮಿತಿಯು ಸೇವಾ ಕ್ಷೇತ್ರದ ಅಗತ್ಯವನ್ನು ಪ್ರಶಂಸಿಸಿದೆಯಾದರೂ ಈ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿಸಲು ಇದನ್ನು "ಅಭಿವೃದ್ಧಿ ಯೋಜನಾ ಕ್ಷೇತ್ರ"ವನ್ನಾಗಿ ಮಾರ್ಪಡಿಸಬೇಕು. ಅಲ್ಲದೆ ಪ್ರತಿ ಹಳ್ಳಿಯನ್ನು ವಾಣಿಜ್ಯ ಬ್ಯಾಂಕಿನ ಗ್ರಾಮೀಣ ಶಾಖೆಗೆ ಸೇರಿಸಿದರೂ ಒಂದು ತಾಲ್ಲೂಕನ್ನು ಮಾತ್ರ ಅನೇಕ ಬ್ಯಾಂಕುಗಳಿಗೆ ಸೇರಿಸದೆ ಹೆಚ್ಚು ವ್ಯವಹಾರವನ್ನು ಹೊಂದಿದ ಬ್ಯಾಂಕಿನ ಒಂದು ಶಾಖೆಗೆ ಸೇರಿಸಬೇಕು. ಇದರಿಂದ ಮೇಲ್ವಿಚಾರಣೆ ಸುಲಭವಾಗುವುದೆಂದು ಈ ಸಮಿತಿ ಅಭಿಪ್ರಾಯಪಟ್ಟಿದೆ.

## ಸಹಕಾರಿ ಸಂಘ ಹಾಗೂ ಬ್ಯಾಂಕುಗಳ ಬಗ್ಗೆ ಇದ್ದ ಶಿಫಾರಸುಗಳು

ಈ ಸಮಿತಿಯು ಪ್ರಾಥಮಿಕ ಸಹಕಾರಿ ಕೃಷಿ ಪತ್ತಿನ ಸಂಘಗಳ ಬಗ್ಗೆ, ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕುಗಳ ಬಗ್ಗೆ, ರಾಜ್ಯ ಸಹಕಾರಿ ಬ್ಯಾಂಕುಗಳ ಬಗ್ಗೆ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳ ಬಗ್ಗೆ ಅನೇಕ ಶಿಫಾರಸುಗಳನ್ನು ಮಾಡಿದೆ. ಅದರಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ಕೊಡಲಾಗಿದೆ.

## ಸಹಕಾರಿ ಸಂಘಗಳ ಆಡಳಿತದಲ್ಲಿ ಸರಕಾರದ ಹಸ್ತಕ್ಷೇಪ

ಸಹಕಾರಿ ಪತ್ತಿನ ಕ್ಷೇತ್ರದಲ್ಲಿ ಸಹಕಾರಿ ಸಂಘಗಳ ಚುನಾಯಿತ ಪ್ರತಿನಿಧಿಗಳ ಆಡಳಿತ ಸಮಿತಿಗಳನ್ನು ಸರಕಾರ ರದ್ದುಪಡಿಸುವುದು ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚಾಗಿದೆ. ಇದು ಸಹಕಾರಿ ಸಂಘಗಳ ಮೂಲ ತತ್ವಕ್ಕೆ ಆಘಾತವನ್ನುಂಟುಮಾಡಿದೆ.

ಚುನಾಯಿತ ಆಡಳಿತ ಸಮಿತಿಗಳನ್ನು ಸರಕಾರ ರದ್ದುಪಡಿಸುವುದು ಈ ಸಂಸ್ಥೆಗಳ ಬೆಳವಣಿಗೆಗೆ ಆತಂಕವಾಗಿರುವುದು. ಸರಕಾರದ ಈ ಪದ್ಧತಿಯಿಂದ ಸದಸ್ಯರು ತಮ್ಮ ಚುನಾಯಿತ ಪ್ರತಿನಿಧಿಗಳಲ್ಲಿಟ್ಟಿರುವ ನಂಬಿಕೆಗೆ ಭಂಗಬರುವಂತಾಗಿದೆ. ಆದ್ದರಿಂದ ಸರಕಾರ ಸಹಕಾರಿ ಕಾನೂನಿನ ಮೇರೆಗೆ ಇಂಥ ಚುನಾಯಿತ ಆಡಳಿತ ಸಮಿತಿಗಳನ್ನು ರದ್ದುಪಡಿಸುವುದನ್ನು ನಿಲ್ಲಿಸಬೇಕು.

ಸರಕಾರ ಅಥವಾ ಸಹಕಾರಿ ಸಂಘಗಳ ನಿಬಂಧಕರು (ರಿಜಿಸ್ಟ್ರಾರರು) ಈ ಸಂಘಗಳ ಆಂತರಿಕ ಆಡಳಿತದಲ್ಲಿ ಕೈಹಾಕಬಾರದು. ಸಹಕಾರಿ ಪತ್ತಿನ ವ್ಯವಸ್ಥೆ ಹೆಚ್ಚು ಬಲಶಾಲಿಯಾಗಿ ಬೆಳೆದು ಬರುವ ದಿಸೆಯಿಂದ ಈ ಸಂಸ್ಥೆಗಳ ಆಡಳಿತ ಸಮಿತಿಗಳನ್ನು ರದ್ದುಪಡಿಸುವ ಸರಕಾರದ ಹಾಗೂ ರಿಜಿಸ್ಟ್ರಾರ್‌ರವರ ಈ ಅಧಿಕಾರಗಳನ್ನು ತೆಗೆದುಹಾಕಬೇಕು. ಈ ಬಗ್ಗೆ ಸಹಕಾರಿ ಕಾನೂನಿನಲ್ಲಿ ಸೂಕ್ತ ತಿದ್ದುಪಡಿ ಆಗಬೇಕು.

ಸಹಕಾರಿ ಪತ್ತಿನ ಸಂಘಗಳು ಹಾಗೂ ಇತರ ಎಲ್ಲಾ ರೀತಿಯ ಸಹಕಾರಿ ಸಂಘಗಳ ಸಮಿತಿಗಳಿಂದು ರಾಜಕೀಯದಿಂದ ಕೂಡಿದ್ದು, ಸರಕಾರ ಬದಲಾದಂತೆ ಅವುಗಳೂ ಬದಲಾಗುತ್ತವೆ. ರಾಜಕೀಯ ಭವಿಷ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ರಾಜ್ಯ ಸರಕಾರಗಳು ಒಟ್ಟಾರೆ ಸಾಲ ಮನ್ನಾ ಮಾಡುವ ಬಗ್ಗೆ ಪ್ರಕಟಪಡಿಸುವ ಪ್ರವೃತ್ತಿ ಪತ್ತಿನ ವ್ಯವಸ್ಥೆಗೆ ಅಧಿಕ ಮಟ್ಟದ ಧಕ್ಕೆಯನ್ನುಂಟುಮಾಡಿದೆ. ರಾಜ್ಯ ಸರಕಾರಗಳು ಸಾಲದ ಮೇಲಿನ ಬಡ್ಡಿಯಲ್ಲಿ ರಿಯಾಯಿತಿ ತೋರಿಸುವುದರಿಂದ ಸಹಕಾರಿ ಸಂಘಗಳ ಲಾಭಕ್ಕೆ ಹಾನಿಯಾಗುವುದಾದರೆ ಅದನ್ನು ನಿಲ್ಲಿಸಬೇಕು. ಈ ಬಡ್ಡಿ ರಿಯಾಯಿತಿಗಳು ಹಣಕಾಸಿನ ಮಾರುಕಟ್ಟೆಯ ಬಡ್ಡಿ ದರಕ್ಕಿಂತ ಕಡಿಮೆ ಆಗುವುದರಿಂದ ಸಹಕಾರಿ ಸಂಘದ ಸಾಲದ ದುರುಪಯೋಗ ಆಗುವುದು.

ಸಹಕಾರಿ ಸಂಘಗಳ ಆಡಳಿತ ಸಮಿತಿಗಳನ್ನು ರದ್ದುಪಡಿಸುವುದು ಆವಶ್ಯಕವೆಂದು ಕಂಡುಬಂದರೆ ಸಮಿತಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಗಳನ್ನು ನೇಮಿಸುವುದು ಆವಶ್ಯಕವಾಗಿದ್ದರೂ, ಆ ಆಡಳಿತಾಧಿಕಾರಿಗಳ ಅವಧಿ ಆರು ತಿಂಗಳುಗಳಿಗಿಂತ ಹೆಚ್ಚಾಗಬಾರದು. ಅಲ್ಲದೆ ಪ್ರಾಥಮಿಕ ಸಹಕಾರಿ ಸಂಘಗಳ ಆಡಳಿತ ಸಮಿತಿ ರದ್ದಾದರೆ, ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಅವುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಬೇಕು.

ಸಹಕಾರಿ ಸಂಘಗಳಲ್ಲಿ ಸರಕಾರದ ಅಧಿಕಾರೀಕರಣ ಹಾಗೂ ರಾಜಕಾರಣ ಸಹಕಾರಿ ಸಂಘಗಳ ಬಲಹೀನತೆಗೆ ಬಹುಮಟ್ಟಿಗೆ ಕಾರಣವಾಗಿದ್ದು ಇದನ್ನು ತಗ್ಗಿಸದಿದ್ದರೆ ಸಹಕಾರಿ ಕ್ಷೇತ್ರ ಗಂಡಾಂತರಕ್ಕೀಡಾಗಬಹುದು.

## ಕೃಷಿ ಸಾಲ ಒದಗಿಸುವ ಸಹಕಾರಿ ಪತ್ತಿನ ಸಂಘಗಳು (ಬ್ಯಾಂಕುಗಳನ್ನು ಒಂದುಗೂಡಿಸುವ ಬಗ್ಗೆ)

ಮೂರು ಹಂತಗಳಿಂದ ಕೂಡಿದ ಕೃಷಿ ಸಹಕಾರ ಪತ್ತಿನ ರಚನೆಯು ಅತಿ ಸಮಂಜಸವೂ ಅನೇಕ ಉಪಯುಕ್ತತೆಗಳಿಂದ ಕೂಡಿದ್ದೂ ಆಗಿರುವುದರಿಂದ ಈ ವ್ಯವಸ್ಥೆಯನ್ನು ಕೈಬಿಡಲಾಗದು.

ಅಲ್ಪಾವಧಿ ಕೃಷಿ ಸಾಲ ಒದಗಿಸುವ ಸಹಕಾರಿ ಸಂಘಗಳು, ಬ್ಯಾಂಕುಗಳು ಹಾಗೂ ದೀರ್ಘಾವಧಿ ಬೇಸಾಯ ಸಾಲ ಒದಗಿಸುವ ಭೂ ಅಭಿವೃದ್ಧಿ ಬ್ಯಾಂಕುಗಳು—ಹೀಗೆ ಕೃಷಿ ಸಾಲದ ಎರಡೂ ವಲಯದ ಸಹಕಾರಿ ಸಂಸ್ಥೆಗಳಿಂದು ಅಶಕ್ತ ಸಂಸ್ಥೆಗಳಾಗಿರುವುದರಿಂದ ಅವುಗಳನ್ನಿಂದು ಒಂದುಗೂಡಿಸುವುದು ಸರಿಯಾಗಲಾರದು. ಈ ಎರಡೂ ವಲಯದ ಸಂಸ್ಥೆಗಳು ಶಕ್ತಿಯುತವಾಗುವವರೆಗೆ ಇವುಗಳನ್ನು ಹೀಗೆಯೇ ಮುಂದುವರಿಸಿಕೊಂಡು ಹೋಗಬೇಕು.

ಅಲ್ಪಾವಧಿ ಹಾಗೂ ದೀರ್ಘಾವಧಿ ಸಾಲ ಒದಗಿಸುವ ಎರಡೂ ವಲಯ ಕೃಷಿ ಸಾಲದ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಪರಸ್ಪರ ಹೊಂದಾಣಿಕೆ ಹಾಗೂ ಸಮನ್ವಯ ರೂಪಿತವಾಗಬೇಕು.

ಅತಿ ಹೆಚ್ಚು ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಬೇಸಾಯ ಸಹಕಾರಿ ಪತ್ತಿನ ಸಂಘಗಳಿಗೆ ದೀರ್ಘಾವಧಿ ಸಾಲ ಒದಗಿಸಲು ಪರವಾನಿಗೆ ಕೊಡಬೇಕು.

## ಬೇಸಾಯ ಸಾಲದ ಬಡ್ಡಿದರ

ಬೇಸಾಯ ಸಾಲ ಹಂಚುವ ಸಂಸ್ಥೆಗಳು ಯಶಸ್ವಿಯಾಗಿ, ಸಮರ್ಥವಾಗಿ ಬೆಳೆದು ಬರಬೇಕಾದರೆ ಅವುಗಳು ಹಂಚುವ ಸಾಲದ ಮೇಲೆ ಹಾಕುವ ಲಾಭಾಂಶ ಹಾಲಿ ಇದ್ದ ದರಕ್ಕಿಂತ ಇನ್ನೂ ಹೆಚ್ಚಾಗಬೇಕು. ಈ ಸಮಿತಿಯು ರಾಜ್ಯ ಸಹಕಾರಿ ಬ್ಯಾಂಕು ತನ್ನ ಸಾಲದ ಮೇಲೆ ಶೇ. 1.5ರಂತೆ ದರವನ್ನೂ, ಜಿಲ್ಲಾ ಮಧ್ಯವರ್ತಿ ಬ್ಯಾಂಕು ಶೇ. 3.5ರಂತೆ ದರವನ್ನೂ ಹಾಗೂ ಪ್ರಾಥಮಿಕ ಬೇಸಾಯ ಪತ್ತಿನ ಸಂಘಗಳು ಶೇ. 6ರಷ್ಟು ಬಡ್ಡಿ ದರವನ್ನೂ ವಿಧಿಸಬೇಕೆಂದು ಶಿಫಾರಸು ಮಾಡಿದೆ. ಆದರೆ ರೈತನಿಗೆ ಅಂತಿಮವಾಗಿ ಶೇ. 15.5ಕ್ಕಿಂತ ಹೆಚ್ಚಾಗಕೂಡದು. ಆದರೆ ಈ ಸಮಿತಿಯು ಗ್ರಾಮೀಣ ಬ್ಯಾಂಕುಗಳಿಗೆ ಶೇ. 8.65ರಷ್ಟು ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ಶೇ. 7ರಷ್ಟು ಬಡ್ಡಿ ದರ ಹೇರಲು ಶಿಫಾರಸು ಮಾಡಿದೆ. ಅದರಂತೆ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕು ಶೇ. 2 ಹಾಗೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಶೇ. 5 ಅಥವಾ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಇರದಿದ್ದರೆ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕು ಶೇ. 5.5ರಷ್ಟು ಬಡ್ಡಿದರವನ್ನು ದೀರ್ಘಾವಧಿ ಸಾಲಕ್ಕೆ ವಿಧಿಸಬೇಕೆಂದು ಶಿಫಾರಸು ಮಾಡಿದೆ.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಬಗ್ಗೆ ಶಿಫಾರಸುಗಳು

ಈ ಸಂಘಗಳ ಸ್ವಸಾಮರ್ಥ್ಯವನ್ನು ಅವುಗಳು ಪೂರ್ಣಾವಧಿ ಹಾಗೂ ಸಂಬಳ ಪಡೆಯುವ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳುವ, ಸ್ವಂತ ಕಟ್ಟಡ ಹೊಂದುವ, ತಮ್ಮ ವಾರ್ಷಿಕ ಲಾಭದಲ್ಲಿ ಕಾಯ್ದಿಟ್ಟ ನಿಧಿ, ಇತರೆ ನಿಧಿಗಳನ್ನು ತೆಗೆದಿರಿಸುವ ಹಾಗೂ ಸದಸ್ಯರಿಗೆ ಡಿವಿಡೆಂಡ್ ಹಂಚುವ ಸಾಮರ್ಥ್ಯದಿಂದ ಗುರುತಿಸಬೇಕು.

ಭಾರತದ ರಿಸರ್ವ್ ಬ್ಯಾಂಕು ಈ ಸಂಘಗಳ ಪುನರ್ ರಚನೆಗಾಗಿ ತಿಳಿಸುವ ಮಾರ್ಗದರ್ಶನಗಳನ್ನು

ನಿಖರವಾಗಿ ಅನುಸರಿಸಬೇಕು. ಹಾಗೂ ಎಲ್ಲಿ ಈ ಸಂಸ್ಥೆಗಳು ಪುನರ್ರಚನೆ ಆಗಿರುವುದಿಲ್ಲವೋ ಅಲ್ಲಿ ತ್ವರಿತವಾಗಿ ಆಗಬೇಕು.

ಈ ಸಂಘಗಳು ಬೇಗನೆ ಸ್ವಸಾಮರ್ಥ್ಯವನ್ನು ಹೊಂದುವಂತೆ ಆಗಲು ಪ್ರತಿಯೊಂದು ಸಂಘಕ್ಕೆ ಒಂದು "ಕಾರ್ಯತತ್ಪರತಾ ಯೋಜನೆ" ಕೈಗೊಳ್ಳಬೇಕು. ಈ ಸಂಘಗಳ ಸ್ವಸಾಮರ್ಥ್ಯ ಅವು ಮುಂದಿನ ವರ್ಷಗಳಲ್ಲಿ ಅಭಿವೃದ್ಧಿ ಸಾಧಿಸುವ ಸಾಮರ್ಥ್ಯವನ್ನು ಒಳಗೊಂಡಿರಬೇಕು. ಈ ಸಂಸ್ಥೆಗಳು ವ್ಯವಸಾಯೇತರ ಚಟುವಟಿಕೆಗಳಿಗಾಗಿಯೂ ಸಾಲ ಒದಗಿಸಬೇಕು. ಆದರೆ ಸುಸ್ತಿ ಸಾಲ ಆಗದಂತೆ ಎಚ್ಚರ ವಹಿಸಬೇಕು. ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಈ ಸಂಸ್ಥೆಗಳ ಕಾರ್ಯಾಚರಣೆಗಳ ಮೇಲೆ ಉಸ್ತುವಾರಿ ಹೊಂದಬೇಕು.

ಪ್ರತಿಯೊಂದು ಸಹಕಾರಿ ಸಂಘ ಪೂರ್ಣಾವಧಿಯ ವೇತನದಾರಿ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳಬೇಕು.

ಈ ಸಹಕಾರಿ ಸಂಘಗಳ ಕಾರ್ಯದರ್ಶಿಗಳನ್ನು ನೇಮಿಸಿಕೊಳ್ಳುವ ಬಗ್ಗೆ ಇರುವ ಕೇಡರ್ ಪದ್ಧತಿಯನ್ನು ಕೈಬಿಡಬೇಕು. ಸಂಘಗಳೇ ತಮ್ಮ ಕಾರ್ಯದರ್ಶಿಗಳನ್ನು ನೇಮಿಸಿಕೊಳ್ಳುವ ಸ್ವತಂತ್ರ ಅಧಿಕಾರವನ್ನು ಅವುಗಳಿಗೆ ಕೊಡಬೇಕು. ಇಲ್ಲದಿದ್ದರೆ ಈ ಸಂಘಗಳ ಕಾರ್ಯಾಚರಣೆಗಳಿಗಾಗಿ ಅವುಗಳ ನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡುವುದು ತೊಂದರೆ ಆಗುತ್ತದೆ.

ಕೆಲವೊಂದು ಅಶಕ್ತ ಸಂಘಗಳಿಗೆ ಅವುಗಳ ಕಾರ್ಯದರ್ಶಿಗಳಿಗೆ ವೇತನ ಕೊಡಲು ಹಣಕಾಸಿನ ಕೊರತೆ ಆದಾಗ, ಅಂತಹ ಕೊರತೆ ಆಗುವ ಸಂಬಳದ ಹಣವನ್ನು ಒದಗಿಸಲು ರಾಜ್ಯ ಸಹಕಾರಿ ಬ್ಯಾಂಕುಗಳು, ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಹಾಗೂ ಪ್ರಾಥಮಿಕ ಸಹಕಾರಿ ಸಂಘಗಳು ಕೂಡಿ ಒಂದು ನಿಧಿಯನ್ನು ನಿರ್ಮಿಸಬೇಕು. ಇದನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿಡಬೇಕು. ಇದಕ್ಕೆ ರಾಜ್ಯ ಹಾಗೂ ಮಧ್ಯವರ್ತಿ ಬ್ಯಾಂಕುಗಳು ಅವುಗಳಿಗೆ ಈ ಸಂಘಗಳಿಂದ ಬರಬೇಕಾದ ಒಟ್ಟು ಸಾಲದ ಶೇ. $\frac{1}{4}$ ಹಾಗೂ $\frac{1}{4}$ರಷ್ಟು ಹಣವನ್ನು ಪ್ರತಿವರ್ಷ ಜಮಾ ಮಾಡಬೇಕು. ಈ ನಿಧಿಗೆ ಈ ಸಂಘಗಳೂ ಕೆಲವೊಂದು ಹಣವನ್ನು ಜಮಾಯಿಸಬೇಕು. ಅಲ್ಲದೆ ರಾಜ್ಯ ಸರ್ಕಾರಗಳೂ ಸಹ ಕೆಲವೊಂದು ಹಣವನ್ನು ಈ ನಿಧಿಗೆ ಒದಗಿಸಬೇಕು.

ಈ ಪ್ರಾಥಮಿಕ ಸಂಘಗಳ ಕಾರ್ಯದರ್ಶಿಗಳಿಗೆ ಬಡ್ತಿಯ ಅವಕಾಶ ಹೆಚ್ಚಿಸಲು ಇಂತಹ ದೊಡ್ಡ ಪ್ರಮಾಣದ ಸಂಘಗಳಿಗೆ ಕಾರ್ಯದರ್ಶಿಗಳನ್ನು ನೇಮಿಸಿಕೊಳ್ಳುವಾಗ ಇಂಥ ಸಣ್ಣ ಸಂಘಗಳ ಕಾರ್ಯದರ್ಶಿಗಳನ್ನು ಆದ್ಯತೆಯ ಮೇರೆಗೆ ನೇಮಿಸಿಕೊಳ್ಳಬೇಕು. ಅಲ್ಲದೆ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ತಮ್ಮ ಕೆಲವೊಂದು ಸಿಬ್ಬಂದಿ ಆಯ್ಕೆ ಮಾಡಿಕೊಳ್ಳುವಾಗ ಉತ್ತಮ ಸೇವೆ ಸಲ್ಲಿಸುತ್ತಿರುವ ಈ ಸಂಘಗಳ ಕಾರ್ಯದರ್ಶಿಗಳಿಗೆ ಆದ್ಯತೆ ನೀಡಬೇಕು.

ಸಂಘದ ವ್ಯವಹಾರವನ್ನು ಅನೇಕ ರೀತಿಯಲ್ಲಿ ಹೆಚ್ಚಿಸಿಕೊಂಡು ಅದರ ವಾರ್ಷಿಕ ಲಾಭದ ಹೆಚ್ಚಳಕ್ಕೆ ಕಾರಣವಾದ ಅಂತಹ ಸಂಘಗಳ ಕಾರ್ಯದರ್ಶಿಗಳಿಗೆ ಉತ್ತೇಜನ ಕೊಡಲು ಲಾಭದಲ್ಲಿ ಕೆಲವೊಂದು ಪ್ರತಿಶತ ಹಣವನ್ನು ಪ್ರೋತ್ಸಾಹ ಧನವೆಂದು ಕೊಡಬೇಕು. ಈ ಎರಡೂ ರೀತಿಯ ಸಂಬಳದ ಹಣವನ್ನು ಕೊಡುವ ಮೊದಲು ರಾಜ್ಯ ಸಹಕಾರಿ ಬ್ಯಾಂಕುಗಳು ಸಹಕಾರಿ ಸಂಘಗಳ ನಿಬಂಧಕರೊಂದಿಗೆ ಸಮಾಲೋಚಿಸಿ ನಿರ್ಧರಿಸಬೇಕು.

ಪ್ರಾಥಮಿಕ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಗೆ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಸೂಕ್ತ ತರಬೇತಿ ವ್ಯವಸ್ಥೆ ಮಾಡಬೇಕು.

## ಠೇವಣಿ ಸಂಗ್ರಹ

ಪ್ರಾಥಮಿಕ ಬೇಸಾಯ ಪತ್ತಿನ ಸಹಕಾರಿ ಸಂಘಗಳು ಗ್ರಾಮೀಣ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಠೇವಣಿ ಸಂಗ್ರಹಿಸುವುದನ್ನು ಪ್ರೋತ್ಸಾಹಿಸಬೇಕು.

ಪ್ರತಿಯೊಂದು ಸಂಘದ ನಿವೇಶನದ ಒಳ ರಚನೆ ಬ್ಯಾಂಕಿನ ಸ್ವರೂಪವನ್ನು ಹೊಂದಬೇಕು. ಇದಕ್ಕೆ ಸರಕಾರ ಹಾಗೂ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಸಾಲ ಒದಗಿಸಬೇಕು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಪಡೆಯುವ ಠೇವಣಿಗಳಿಗೆ ಭಾರತದ ಠೇವಣಿ ವಿಮಾ ಮತ್ತು ಸಾಲ ಖಾತರಿ ನಿಗಮ ತನ್ನ ಠೇವಣಿ ವಿಮಾ ಯೋಜನೆಯನ್ನು ವಿಸ್ತರಿಸಬೇಕು. ಇದು ದೊರೆಯುವ ವರೆಗೆ ರಾಜ್ಯ ಸಹಕಾರಿ ಬ್ಯಾಂಕುಗಳು ತಮ್ಮ ರಾಜ್ಯ ಸರಕಾರದೊಡನೆ ಒಂದು ಯೋಜನೆ ಕೈಗೊಂಡು ಠೇವಣಿ ವಿಮಾ ಸವಲತ್ತನ್ನು ಇವುಗಳಿಗೆ ಒದಗಿಸಿಕೊಡಬೇಕು.

ಠೇವಣಿ ಸಂಗ್ರಹಣೆಯಲ್ಲಿ ತೊಡಗಿದ ಈ ಸಂಘಗಳು ಅವು ಸಂಗ್ರಹಿಸಿದ ಠೇವಣಿಯಲ್ಲಿ ಶೇ. 15 ರಷ್ಟನ್ನು ದ್ರವತ್ವರೂಪದಲ್ಲಿ ಅವುಗಳನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳಲ್ಲಿ ವಿಶೇಷ ಉಳಿತಾಯ ಖಾತೆಯಲ್ಲಿ ಠೇವಣಿ ಆಗಿ ಇಡಬೇಕು. ಈ ವಿಶೇಷ ಉಳಿತಾಯ ಖಾತೆಯ ಠೇವಣಿಗೆ ಆಯಾ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಇತರ ಉಳಿತಾಯ ಠೇವಣಿಗೆ ಕೊಡುವ ಬಡ್ಡಿದರಕ್ಕಿಂತ ಶೇ. 1.5ರಷ್ಟು ಹೆಚ್ಚು ಬಡ್ಡಿ ಕೊಡಬೇಕು.

ಈ ಸಂಸ್ಥೆಗಳು ಹೊಂದುವ ಒಟ್ಟು ಠೇವಣಿಯಲ್ಲಿ ಶೇ. 20ರಷ್ಟು ಹಣವನ್ನು ಹೆಚ್ಚು ಲಾಭ ಪಡೆಯಲು ಸಾಧ್ಯವಿದ್ದ ಕೃಷೀತರ ವಲಯಗಳ ಚಟುವಟಿಕೆಗಳಿಗೆ ಸಾಲ ಕೊಡಬಹುದು.

ರಾಜ್ಯ ಸಹಕಾರಿ ಬ್ಯಾಂಕುಗಳು ಹಾಗೂ ಮಧ್ಯವರ್ತಿ ಬ್ಯಾಂಕುಗಳು ಪ್ರಾಥಮಿಕ ಬೇಸಾಯ ಪತ್ತಿನ ಸಂಘಗಳಿಗೆ ಬ್ಯಾಂಕಿಂಗ್ ಕೌಂಟರ್ ತೆರೆಯಲು, ಗಿರವಿಯಾಗಿ ಇಡುವ ನಗ-ನಾಣ್ಯಗಳ ಸುಭದ್ರತೆಗಾಗಿ ಭದ್ರತಾ ಕಪಾಟು ಮುಂತಾದ ಸಾಧನ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇದಕ್ಕಾಗಿ ರಾಜ್ಯ ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಸಹಕಾರಿ ಅಭಿವೃದ್ಧಿ ನಿಧಿಯನ್ನು ತೆರೆಯಬೇಕು.

## ಇತರ ಶಿಫಾರಸುಗಳು

ಒಂದಕ್ಕಿಂತ ಹೆಚ್ಚು ಬೆಳೆಗಳನ್ನು ಬೆಳೆಯುವ ಭಾಗಗಳಲ್ಲಿರುವ ಈ ಸಂಘಗಳು ನಗದು ಸಾಲ ಒದಗಿಸಲು ಪ್ರಾರಂಭಿಸಬೇಕು.

ಯಾವುವೇ ಭಾಗದಲ್ಲಿ ರೈತರು ರಸಗೊಬ್ಬರ, ಅಧಿಕ ಇಳುವರಿ ಬೀಜ ಮುಂತಾದವುಗಳನ್ನು ಉಪಯೋಗಿಸಿ ಮಾದರಿ ಬೇಸಾಯವನ್ನು ಈಗಾಗಲೇ ಅನುಸರಿಸುತ್ತಿದ್ದರೆ ಅಂತಹ ಭಾಗದ ರೈತರಿಗೆ ವಸ್ತುವಾಚಕ ಸಾಲ ಅಂದರೆ ಗೊಬ್ಬರ, ಬೀಜ, ಕ್ರಿಮಿನಾಶಕ ಮುಂತಾದವುಗಳನ್ನು ಪಡೆಯಲು ಒತ್ತಾಯಿಸಬಾರದು.

ಮುಂಗಾರು ಸಾಲದ ನಗದು ಸಾಲದ ಹಣವನ್ನು ಕೊಡದ ಹೊರತು, ಹಿಂಗಾರು ಸಾಲದ ನಗದು ಸಾಲದ ಹಣವನ್ನು ಕೊಡಬಾರದೆಂಬ ಕಟ್ಟಳೆಯನ್ನು ಕೈಬಿಡಬೇಕು.

ಹಿಂಗಾರು ಸಾಲದ ಮರುಪಾವತಿಯ ಅವಧಿಯನ್ನು ಜೂನ್ 30ರಿಂದ ಆಗಸ್ಟ್ 31ರ ವರೆಗೆ ಬದಲಾಯಿಸಬೇಕು.

ಪ್ರತಿವರ್ಷ ಈ ಸಂಸ್ಥೆಗಳು "ಕ್ರಮಿಕ ಪತ್ತು" ತಯಾರಿಸಲು ವಿಳಂಬವಾಗುವುದರಿಂದ ಪ್ರತಿವರ್ಷ ಏನೂ ಬದಲಾವಣೆ ಇರದಿದ್ದರೆ ಮೂರು ವರ್ಷಗಳಿಗೊಮ್ಮೆ ತಯಾರಿಸಬೇಕು.

ಪ್ರಾಥಮಿಕ ಸಹಕಾರಿ ಸಂಘಗಳು ರೈತರಿಂದ ಅಸಲು ಹಾಗೂ ಬಡ್ಡಿಯನ್ನು ವಸೂಲಿ ಮಾಡಿ ಜಿಲ್ಲಾ ಕೇಂದ್ರೀಯ ಬ್ಯಾಂಕುಗಳ ಸಾಲಕ್ಕೆ ಕಟ್ಟಿದಾಗ ಜಿಲ್ಲಾ ಕೇಂದ್ರೀಯ ಬ್ಯಾಂಕು ಆ ಹಣವನ್ನು ಕೇವಲ ತನಗೆ ಬರಬೇಕಾದ ಬಡ್ಡಿಗಾಗಿ ಹಿಡಿಯದೇ ಅದನ್ನು ಅನುಕ್ರಮವಾಗಿ ಅಸಲು ಹಾಗೂ ಬಡ್ಡಿಯಾಗಿ ಜಮಾ ಹಿಡಿಯಬೇಕು.

ಮೇಲಿನ ಸಂಸ್ಥೆಗಳು ಕೆಳಗಿನ ಸಂಸ್ಥೆಗಳ ಅಭಿವೃದ್ಧಿಯ ದೃಷ್ಟಿಯಿಂದ ಮಾರ್ಗಸೂಚಿಗಳನ್ನು ಹೊರಡಿಸುವ ಅಧಿಕಾರ ಹೊಂದಿರಬೇಕು. ಪ್ರಾಥಮಿಕ ಸಂಸ್ಥೆಗಳು ಅವುಗಳನ್ನು ಅನುಸರಿಸುವುದು ಅವುಗಳ ಕರ್ತವ್ಯ.

## ಜಿಲ್ಲಾ ಮಧ್ಯವರ್ತಿ ಹಾಗೂ ರಾಜ್ಯ ಸಹಕಾರಿ ಬ್ಯಾಂಕುಗಳ ಬಗ್ಗೆ

ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳಿಂದ ಪ್ರಾಥಮಿಕ ಸಂಘಗಳು ತರುವ ಸಾಲಕ್ಕೆ ಸಾಲ ಹಾಗೂ ಷೇರು ಬಂಡವಾಳದ ಸಂಯೋಜನೆ ಶೇ. 5ರಷ್ಟು ಮಾತ್ರ ಆಗಿರಬೇಕು. ಆದರೆ ನಗದು ಸಾಲಗಳಿಗೆ ಈಗಿದ್ದ ಮಿತಿಯನ್ನು ಶೇ. 2.5ರಿಂದ ಶೇ. 1ಕ್ಕೆ ತಗ್ಗಿಸಬೇಕು.

ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಮೇಲಿಂದ ಮೇಲೆ ಪ್ರಾಥಮಿಕ ಸಹಕಾರಿ ಸಂಘಗಳೊಡನೆ ಭೇಟಿ ನಡೆಸಿ, ಪರಸ್ಪರ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಅಭಿವೃದ್ಧಿ ಕಾರ್ಯಯೋಜನೆಗಳನ್ನು ಅನುಷ್ಠಾನಕ್ಕೆ ತರಲು ವಿಚಾರ ವಿನಿಮಯ ಮಾಡಬೇಕು.

ರಾಜ್ಯ ಸರಕಾರಗಳು ಪ್ರಾಥಮಿಕ ಸಹಕಾರಿ

ಸಂಘಗಳಿಂದ ಆಡಿಟ್ ಶುಲ್ಕವನ್ನು ಪಡೆಯ ಬಾರದು.

ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳು ಅವು ಪಡೆದ ಠೇವಣಿಯಲ್ಲಿ ಶೇ. 20ಕ್ಕೆ ಹೆಚ್ಚಿರದಷ್ಟು ಹಣ ವನ್ನು ಸದಸ್ಯೇತರಿಗೆ ಸಾಲವಾಗಿ ಒದಗಿಸಬಹುದು. ಆದರೆ ಅವರನ್ನು ನಾಮಮಾತ್ರ ಅಥವಾ ಸಹ ಸದಸ್ಯ ರೆಂದು ಮಾಡಿಕೊಳ್ಳಬೇಕು. ಅವರಿಗೆ ಮತ ಚಲಾಯಿಸಲು ಅಧಿಕಾರ ಇರಬಾರದು.

ರಾಜ್ಯ ಸಹಕಾರಿ ಬ್ಯಾಂಕು ಸ್ವಸಾಮರ್ಥ್ಯವನ್ನು ಹೊಂದದ ಬ್ಯಾಂಕುಗಳನ್ನು ಬಲಪಡಿಸಲು ಒಂದು ನಿರ್ದಿಷ್ಟ ಕಾಲಮಿತಿಯ ಯೋಜನೆಯನ್ನು ಹಾಕಿಕೊಂಡು ಅವುಗಳನ್ನು ಬಲಪಡಿಸುವ ಕಾರ್ಯಕ್ರಮ ಕೈಗೊಳ್ಳಬೇಕು.

ರಾಜ್ಯ ಸಹಕಾರಿ ಬ್ಯಾಂಕು ತನ್ನ ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳ ಹಿತದೃಷ್ಟಿಯಿಂದ ಹಣಕಾಸಿನ ವಿನಿಯೋಗದ ವ್ಯವಸ್ಥಾಪನೆಯಲ್ಲಿ ಪರಿಣತಿಯನ್ನು ಹೊಂದಬೇಕು.

## ದೀರ್ಘಾವಧಿ ಸಾಲದ ಸಂಸ್ಥೆಗಳ ಬಗ್ಗೆ

ಅಲ್ಪಾವಧಿ ಹಾಗೂ ಮಧ್ಯಮಾವಧಿ ಬೇಸಾಯ ಸಾಲ ಹಂಚುವ ಸಹಕಾರಿ ಪತ್ತಿನ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಸಮನ್ವಯ ಹಾಗೂ ಸಹಕಾರ ಮೂಡಬೇಕು.

ಸಾಂಸ್ಥಿಕ-ಬಲವರ್ಧನೆಯ ಯೋಜನೆಗಳಿಗೆ ಒಳಪಟ್ಟ ಪ್ರಾಥಮಿಕ ಹಾಗೂ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ರಾಜ್ಯ ಸರಕಾರ ಷೇರು ಬಂಡವಾಳವನ್ನು ಒದಗಿಸಬೇಕು. ನಬಾರ್ಡ್ ರಾಜ್ಯ ಸರಕಾರಗಳಿಗೆ ಷೇರು ಬಂಡವಾಳದ ಸಾಲ ಒದಗಿಸುವ ಬಗ್ಗೆ ಇದ್ದ ಕಟ್ಟಳೆಗಳಲ್ಲಿ ಸಡಿಲಿಕೆ ತೋರಿಸಬೇಕು.

ಸಾರ್ವಜನಿಕ ವಲಯದ ಬ್ಯಾಂಕು ಹಾಗೂ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳಿಗೆ ದೊರೆಯುವಂತೆ, ಈ ಬ್ಯಾಂಕುಗಳು ಜನರಿಂದ ಪಡೆಯುವ ದೀರ್ಘಾವಧಿ ಸಾಲಗಳ ಮೇಲಿನ ಸುಂಕದಲ್ಲಿ ರಿಯಾಯಿತಿ ದೊರೆಯಬೇಕು.

ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು ತಮ್ಮ ಸಾಲದ ನೀತಿಯಲ್ಲಿ ವೈವಿಧ್ಯವನ್ನು ಹೊಂದಿ ಒಣ ಬೇಸಾಯ, ಗೃಹನಿರ್ಮಾಣ ಮುಂತಾದವುಗಳಿಗೆ ಸಾಲ ಹಂಚಬೇಕು.

ನಬಾರ್ಡ್ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಮಧ್ಯಂತರ ಸಾಲ ಒದಗಿಸಬೇಕು.

## ಇತರ ಶಿಫಾರಸುಗಳು

ಸಹಕಾರಿ ಸಂಘಗಳ ನಿಬಂಧಕರಿಗಿದ್ದ ಕೆಲವೊಂದು ಅಧಿಕಾರಗಳನ್ನು ಮೇಲ್ಮಟ್ಟದ ಸಹಕಾರಿ ಸಂಘಗಳು ಕೆಳಮಟ್ಟದ ಸಹಕಾರಿ ಸಂಘಗಳ ಬಗ್ಗೆ ಹೊಂದಬೇಕು.

ಮೇಲ್ಮಟ್ಟದ ಸಹಕಾರಿ ಸಂಘಗಳು ಆವಶ್ಯಕವೆಂದು ಕಂಡುಬಂದರೆ ಕೆಳಮಟ್ಟದ ಸಹಕಾರಿ ಸಂಘಗಳ ಮಹಾಸಭೆಯನ್ನು ಕರೆಯಬಹುದು.

ಕೆಳಗಿನ ಕೋಷ್ಟಕದಿಂದ ತಿಳಿಯುವುದೇನೆಂದರೆ, 1999-2000ನೇ ಇಸವಿಯಲ್ಲಿ ಕೃಷಿ ಹಾಗೂ ಕೃಷಿ ಪೋಷಿತ ಚಟುವಟಿಕೆಗಳಿಗಾಗಿ ಗ್ರಾಮೀಣ ಸಾಲದ ಬೇಡಿಕೆಯು ಒಟ್ಟು 1,10,873 ಕೋಟಿ ರೂ.ಗಳಿಗೆ ಮುಟ್ಟಬಹುದೆಂದು ಈ ಸಮಿತಿ ಅಂದಾಜು ಮಾಡಿದ್ದು ಈ ಬೇಡಿಕೆಯಲ್ಲಿ ಸಹಕಾರಿ ಸಂಸ್ಥೆಗಳು ಹಾಗೂ ವಾಣಿಜ್ಯ ಬ್ಯಾಂಕುಗಳು ಕೂಡಿ, ಒಟ್ಟು 89,447 ಕೋಟಿ ರೂ.ಗಳಷ್ಟು ಸಾಲ ಒದಗಿಸಬಹುದೆಂದೂ ಅಭಿಪ್ರಾಯಪಟ್ಟಿದೆ. ಅಂದರೆ ಈ ಅವಧಿಯಲ್ಲಿ ಒಟ್ಟು 21,426 ಕೋಟಿ ರೂ.ಗಳ ಕೊರತೆ ಆಗಬಹುದೆಂದು ಈ ಸಮಿತಿ ಅಂದಾಜು ಮಾಡಿದೆ. ಇದರಿಂದ ವಾಣಿಜ್ಯ ಹಾಗೂ ಸಹಕಾರಿ ಸಂಘಗಳು ತಮ್ಮ ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಳ್ಳಬೇಕಾದ ಜವಾಬ್ದಾರಿಯು ತಿಳಿದು ಬರುತ್ತದೆ. ಆದ್ದರಿಂದ ಸಹಕಾರಿ ಸಂಘಗಳು ಹಾಗೂ ಬ್ಯಾಂಕುಗಳು ಠೇವಣಿ ಸಂಗ್ರಹಣೆಯಲ್ಲಿ ಇನ್ನೂ ಅತಿ ಹೆಚ್ಚಿನ ಪಾತ್ರ ವಹಿಸಬೇಕಾಗಿದೆ. ●

### ಕೋಷ್ಟಕ 4

### ಕೃಷಿ ಹಾಗೂ ಕೃಷಿ ಪೋಷಿತ ಉದ್ದಿಮೆಗಳಿಗೆ ಬೇಕಾದ ಸಾಲ ಹಾಗೂ ದೊರೆಯಬಹುದಾದ ಸಾಲ

ಕೋಟಿ ರೂ.ಗಳಲ್ಲಿ

| ವಿವರ | 1989–90 | 1994–95 | 1999–2000 |
|---|---|---|---|
| **ಸಾಲದ ಬೇಡಿಕೆ** | | | |
| 1984–85 ಧಾರಣೆಗಳ ಮೇರೆಗೆ | 21,587 | 35,187 | 53,332 |
| ಪ್ರತಿವರ್ಷ ಸಾಮಗ್ರಿಗಳಿಗೆ ಶೇ. 5ರಷ್ಟು ಧಾರಣೆ ಹೆಚ್ಚುವರಿ ಪ್ರಮಾಣದ ಮೇರೆಗೆ | 27,551 | 57,316 | 1,10,873 |
| **ದೊರೆಯಬಹುದಾದ ಸಂಪನ್ಮೂಲಗಳು** | | | |
| ವಾಣಿಜ್ಯ ಬ್ಯಾಂಕುಗಳು | 19.948 | 34,237 | 57,033 |
| ಸಹಕಾರಿ ಸಂಘಗಳು | 8,746 | 17,592 | 32,411 |
| ಒಟ್ಟು | 28,694 | 51,829 | 89,44 4 |
| **ಹೆಚ್ಚುವರಿ (+) ಕೊರತೆ (—)** | | | |
| ಹೆಚ್ಚುವರಿ | + 1,143 | — 5,487 | — 21,429 |

## ವಿಳಾಸ ಬದಲಾವಣೆ

'ಬ್ಯಾಂಕಿಂಗ್ ಪ್ರಪಂಚ'ದ ಚಂದಾದಾರರು ತಮ್ಮ ವಿಳಾಸದಲ್ಲಿ ಆಗುವ ಯಾವುದೇ ಬದಲಾವಣೆಯನ್ನು ಕೂಡಲೇ ದಯವಿಟ್ಟು ತಿಳಿಸಬೇಕು.

ಪ್ರಧಾನ ಕಾರ್ಯದರ್ಶಿ
ಸಮನ್ವಯ ಸಮಿತಿ
ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು
ಭಾರತೀಯ ಸ್ಟೇಟ್ ಬ್ಯಾಂಕ್
ಬೆಂಗಳೂರು ನಗರ ಶಾಖೆ
೨೨, ಜಯಚಾಮರಾಜೇಂದ್ರ ರಸ್ತೆ
ಬೆಂಗಳೂರು ೫೬೦ ೦೦೨

# ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ


**ರವೀಂದ್ರ ಬಾಳೀಹಳ್ಳಿ**

**ಭಾರತೀಯ ಸ್ಟೇಟ್ ಬ್ಯಾಂಕ್**
**ಬೆಂಗಳೂರು ನಗರ ಶಾಖೆ**


ಭಾರತದಲ್ಲಿ ಬ್ಯಾಂಕುಗಳು ಕಂಪ್ಯೂಟರ್ ಯುಗ ದತ್ತಧಾವಿಸುತ್ತಿರುವಾಗ, ಬ್ಯಾಂಕುಗಳಲ್ಲಿನ ಮಾನವ ಸಂಪನ್ಮೂಲದ ಬಗ್ಗೆ, ಮೇಲಾಗಿ ಈ ಸಂಪನ್ಮೂಲದ ಅಭಿವೃದ್ಧಿಯ ಕುರಿತಾಗಿ ಚರ್ಚಿಸುವುದು ಅದೆಷ್ಟು ಸಮಂಜಸ ? ಈ ರೀತಿಯ ಅಸಂಗತ ಪ್ರಶ್ನೆಗಳು ಅನೇಕರ ಮನದಲ್ಲಿ ಮೂಡಿಬರುತ್ತಿರುವಾಗ, ಮಾನವ ಸಂಪನ್ಮೂಲದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುವುದು ಬ್ಯಾಂಕುಗಳ ಅಭಿವೃದ್ಧಿಯ ಬಗೆಗೆ ಗಮನ ಹರಿಸುವವರ ಮೂಲಭೂತ ಕರ್ತವ್ಯವಾಗಿದೆ—ಅಷ್ಟೇ ಅಲ್ಲ, ಜವಾಬ್ದಾರಿಯುತ ಹೊಣೆಯೂ ಆಗಿದೆ ಅಂದರೆ ಅತಿಶಯೋಕ್ತಿ ಆಗಲಾರದು.

'ಮಾನವ ಸಂಪನ್ಮೂಲ ಅಭಿವೃದ್ಧಿ'—ಅಂದರೆ ಏನು ? "ಮಾನವ ಸಂಪನ್ಮೂಲ ಅಭಿವೃದ್ಧಿಯು ಒಂದು ನಿರಂತರ ಕ್ರಿಯೆ. ಪ್ರತಿಯೊಬ್ಬ ವ್ಯಕ್ತಿಗೆ ಚಾಲನೆ ಹಾಗೂ ಗುರಿ ನೀಡಲು ನೆರವಾಗುತ್ತ ಆತನನ್ನು ಒಂದು ಪರಿಣಾಮಕಾರಿ ತಂಡದ ಸದಸ್ಯನನ್ನಾಗಿ ಮಾಡಲು ಅನವರತ ಪ್ರಯತ್ನಿಸುತ್ತದೆ. ಈ ಕ್ರಿಯೆಯಿಂದ ಆತನ ಸಾಮರ್ಥ್ಯಕ್ಕೆ ಒತ್ತು ಕೊಟ್ಟು ಬ್ಯಾಂಕಿನ ಗುರಿಗಳನ್ನು ಸಾಧಿಸುವುದರ ಜೊತೆಗೆ ವೈಯಕ್ತಿಕವಾಗಿ ತೃಪ್ತಿ ಪಡೆಯಲು ಪೂರಕವಾಗುತ್ತದೆ. ಭಾರತೀಯ ಸ್ಟೇಟ್ ಬ್ಯಾಂಕ್ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಈ ರೀತಿ ವ್ಯಾಖ್ಯಾನಿಸಿದೆ.

ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿಯು ಗುರಿ ಸಾಧಿಸಬೇಕಾದರೆ, ಈ ಸಂಪನ್ಮೂಲವನ್ನು ಸರಿಯಾದ ಹಾಗೂ ಅತ್ಯಂತ ಅನುಕೂಲವಾದ ರೀತಿಯಲ್ಲಿ ಬಳಸುತ್ತಾ, ಅದಕ್ಕೆ ಅವಶ್ಯಕವಾದ ಕೆಲಸದ ಬಗ್ಗೆ ಯುಕ್ತ ಅರಿವು, ಮಾಹಿತಿ, ಹಾಗೂ ಕುಶಲತೆಯ ಬೆಳವಣಿಗೆ—ಇವು ತುಂಬಾ ಮುಖ್ಯ. ಈ ವಿಷಯದಲ್ಲಿ ಬೇಕಾದ ಗಮನ ನೀಡುವುದು ಹಿರಿಯ ಅಧಿಕಾರಿಗಳ ಆದ್ಯಕರ್ತವ್ಯ. ಕೆಲಸಗಾರರ ತರಬೇತಿಯ ಬಗ್ಗೆ ಸಮಯಕ್ಕೆ ಅನುಸಾರವಾಗಿ, ಅವರ ಆವಶ್ಯಕತೆಗೆ ಅನುಗುಣವಾಗಿ ಗಮನ ನೀಡುವುದರಿಂದ ಕೆಲಸಗಾರರ ವ್ಯಕ್ತಿತ್ವದ ಬೆಳವಣಿಗೆ ಆಗುವದರ ಜತೆಗೆ ಬ್ಯಾಂಕ್ ಬೆಳವಣಿಗೆಯೂ ಆಗುವುದು ಖಂಡಿತ. "ವ್ಯಕ್ತಿ ಬೆಳೆದಾಗ ಸಂಸ್ಥೆ ಬೆಳೆಯುತ್ತದೆ."

ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ ಏಕೆ ಅವಶ್ಯ ? ಬ್ಯಾಂಕುಗಳಲ್ಲಿ ಕಂಪ್ಯೂಟರ್‌ಗಳು ಬಂದರೂ ಅವುಗಳನ್ನು ನಿಯಂತ್ರಿಸಲು ಮಾನವ ಬೇಕು. ಕೆಲಸಗಾರರ ವೈಯಕ್ತಿಕ ಅನುಕೂಲಗಳಿಗಾಗಿ ಬ್ಯಾಂಕು ರಜಾ ದಿನದ ಮನೆಗಳು ರಿಯಾಯಿತಿ ಪ್ರವಾಸ, ಮಕ್ಕಳಿಗೆ ವಿದ್ಯಾರ್ಥಿವೇತನ ಈ ರೀತಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಆದರೆ ಬ್ಯಾಂಕುಗಳ ಕೆಲಸಗಾರರಲ್ಲಿ ಪರಸ್ಪರ ಮಾನವ ಸಂಬಂಧ ಅದೆಷ್ಟು ಉದಾಸೀನತೆಯಿಂದ ಕೂಡಿದೆ ಎಂದರೆ, ಈ ಸಂಬಂಧದ ಆವಶ್ಯಕತೆಯೇ ಇಲ್ಲವೇನೋ ಅನಿಸುವಷ್ಟು. 'ಹಾಗಾದರೆ ನಾನು ಕೆಲಸ ಮಾಡುತ್ತಿರುವುದು ಕೇವಲ ಲೆಡ್ಜರ್, ಪುಸ್ತಕ, ಪೆನ್ನುಗಳ ಜತೆ ಮಾತ್ರವೇ ?' ಬ್ಯಾಂಕಿನ ಕೌಂಟರ್‌ಗಳಲ್ಲಿ, ಲೆಡ್ಜರ್‌ಗಳಲ್ಲಿ, ಟೇಬಲ್, ಕುರ್ಚಿಗಳಲ್ಲಿ, ಟೋಕನ್ನುಗಳಲ್ಲಿ, ನೋಟಿನ ಕಟ್ಟುಗಳಲ್ಲಿ, ಎಲ್ಲಿಯೋ ಈ ಬ್ಯಾಂಕ್ ನೌಕರ ಕಳೆದು ಹೋಗಿದ್ದಾನೆ. ಗ್ರಾಹಕರಿಗೆ ಈತ ಒಬ್ಬ ಸಂವೇದನಾಶೂನ್ಯ, ಭಾವನಾರಹಿತ ಹಾಗೂ ತಲೆ ಕೆಳಗೆಹಾಕಿ ಕೆಲಸದಲ್ಲಿ ನಿರತನಾಗಿರುವ ನಿರ್ಜೀವ ವಸ್ತು ಎಂದು ಅನಿಸಿರಲೂಬಹುದು. ಈತ ತನ್ನ ದೈನಂದಿನ ಕೆಲಸಗಳಲ್ಲಿ ಅದೆಷ್ಟು ಮುಳುಗಿ ಹೋಗಿರುತ್ತಾನೆಂದರೆ, ಗ್ರಾಹಕರಿಗೆ ತಮ್ಮನ್ನು ಪ್ರಜ್ಞಾಪೂರ್ವಕವಾಗಿ ಅಲಕ್ಷಿಸುತ್ತಾನೆ ಅನ್ನುವ ಭಾವನೆ ಬಂದಿರಲೂ ಸಾಕು. ಹೆಚ್ಚು ಕೆಲಸದ ಒತ್ತಡ, ಗ್ರಾಹಕರ ಮಿತಿಮೀರಿದ ನಿರೀಕ್ಷೆ. ಹಿರಿಯ ಅಧಿಕಾರಿಗಳ ಹೆಚ್ಚಿನ ಅಪೇಕ್ಷೆ—ಇವೆಲ್ಲ ಒತ್ತಡಗಳಿಂದ ಕುಸಿದು ಹೋಗಿರುವ ಬ್ಯಾಂಕ್ ನೌಕರನನ್ನು 'ಸಂಪನ್ಮೂಲ' ಎಂದು ಪರಿಗಣಿಸಿ ಆತನ ವ್ಯಕ್ತಿತ್ವದ 'ಅಭಿವೃದ್ಧಿ'ಗಾಗಿ ಪ್ರಯತ್ನಿಸುವುದು ಅತೀ ಅವಶ್ಯ. ಆತನಲ್ಲಿರುವ 'ನನಗೆ ಸಂಬಂಧವಿಲ್ಲ' ಅನ್ನುವ ಉಪೇಕ್ಷೆಯ ಭಾವನೆಯನ್ನು ಬೇರು ಸಹಿತ ಕಿತ್ತುಹಾಕುವುದು ಬ್ಯಾಂಕ್ ನೌಕರರ ಅಭಿವೃದ್ಧಿಯೆಡೆಗೆ ಇಡುವ ಮೊದಲ ದಾಪು ಹೆಜ್ಜೆ ಆಗುತ್ತದೆ.

ಬ್ಯಾಂಕುಗಳಲ್ಲಿ ಮಾನವ ಸಂಬಂಧ ಅಂದರೆ—ಒಬ್ಬ ನೌಕರನ ಹಾಗೂ ಆಡಳಿತ ವರ್ಗವನ್ನು ಪ್ರತಿನಿಧಿಸುವ ಅಧಿಕಾರಿಯ ನಡುವಿನ ನೇರ ಸಂಬಂಧ ಎಂದು ವ್ಯಾಖ್ಯಾನಿಸಬಹುದು. ಬ್ಯಾಂಕುಗಳಲ್ಲಿ ಈ ಸಂಬಂಧ ನಿರ್ಧಾರವಾಗುವುದು ಹೆಚ್ಚಾಗಿ ಹುದ್ದೆಗಳಿಂದ ಈ ಒಂದು ವ್ಯವಸ್ಥೆಯಲ್ಲಿ 'ಮಾನವ ಸಂಬಂಧ'ವನ್ನು ಅರಿಯುವಾಗ ಅದು ಎಷ್ಟು 'ಮಾನವೀಯತೆ'ಯಿಂದ ಕೂಡಿದೆ ಎಂಬುದನ್ನು ನಾವು ಪರಿಶೀಲಿಸಬೇಕು. ಈ ಮಾನವ ಸಂಬಂಧದ ಉದ್ದೇಶ—ಪರಸ್ಪರರ ಭಾವನೆಗಳು, ಆವಶ್ಯಕತೆಗಳು, ಸಾಮರ್ಥ್ಯ ದೌರ್ಬಲ್ಯಗಳು, ಆಶೆ ಆಕಾಂಕ್ಷೆಗಳು—ಇವುಗಳನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನ. ಇದರಲ್ಲಿ ಅಡಗಿರುವ ಮುಖ್ಯ ಉದ್ದೇಶ, ಕೆಲಸಗಾರರಲ್ಲಿ ವಿಶ್ವಾಸ ಹುಟ್ಟಿಸಿ, ಪೋಷಿಸಿ, ಬೆಳೆಸುವುದು, ಅಷ್ಟೇ ಅಲ್ಲ ಆತ ಬ್ಯಾಂಕಿಗೆ 'ಬೇಕಾದ ವ್ಯಕ್ತಿ' ಎನ್ನುವ ಪ್ರಜ್ಞೆಯನ್ನು ಅವರಲ್ಲಿ ಜಾಗರೂಕವಾಗಿರಿಸುವುದು ಕೆಲಸಗಾರರಲ್ಲಿ ತಾನು ಬ್ಯಾಂಕಿಗೆ ಬೇಕಾದ ವ್ಯಕ್ತಿ ಎನ್ನುವ ಭಾವನೆ ಬಂದಾಗ 'ಬ್ಯಾಂಕ್ ಕೆಲಸ ನನ್ನ ಕೆಲಸ' ಎಂಬ ತಾದಾತ್ಮ್ಯ ಮೂಡಿಬರುತ್ತದೆ. ಆಗ ಆತ ಬ್ಯಾಂಕ್ ಕೆಲಸದಲ್ಲಿ ತೋರುವ ಶ್ರದ್ಧೆ, ಆಸಕ್ತಿ, ಕೆಲಸದಲ್ಲಿ ಲವಲವಿಕೆಯನ್ನು ಮೂಡಿಸುತ್ತದೆ. ಕೆಲಸಗಾರ ಬ್ಯಾಂಕ್ ಶಾಖೆಯ ತಂಡದ ಒಬ್ಬ ಉತ್ತಮ ಸದಸ್ಯನಾಗಿ ಮಾರ್ಪಾಟಾಗುತ್ತಾನೆ. ಈ ರೀತಿ ಮಾನವ ಸಂಪನ್ಮೂಲದ ಗುಣಮಟ್ಟವನ್ನು ಏರಿಸುವುದರಿಂದ ಒಂದು ತಂಡವು ಉತ್ತಮ ಪರಿಣಾಮ ನೀಡಲು ಸಾಧ್ಯ.

ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ ಹೇಗೆ ಸಾಧ್ಯ ?

ಈಗ ಅನೇಕ ಬ್ಯಾಂಕುಗಳಲ್ಲಿ 'ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ' ಎಂದು ವಿಶೇಷ ವಿಭಾಗಗಳನ್ನು ತೆರೆದಿರುವುದು, ಬ್ಯಾಂಕುಗಳು ಈ ವಿಷಯದ ಬಗ್ಗೆ ತೋರುತ್ತಿರುವ ಆಸಕ್ತಿ ಹಾಗೂ ಕಳಕಳಿಯ ಪುರಾವೆ. ಬ್ಯಾಂಕುಗಳಲ್ಲಿ ಮಾನವ ಸಂಬಂಧ ಪರಿಣಾಮಕಾರಿ ಆಗಬೇಕಾದರೆ ಅದಕ್ಕಾಗಿ ಆಡಳಿತ ವರ್ಗ ಹಾಗೂ ಕೆಲಸಗಾರರು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಬ್ಯಾಂಕುಗಳಲ್ಲಿ ನೌಕರರ ಸಾಮರ್ಥ್ಯಗಳನ್ನು ಗುರುತಿಸಿ ಪುರಸ್ಕರಿಸುವ ಯೋಜನೆಗಳಿರಬೇಕು. ಬ್ಯಾಂಕ್‌ಗೆ ತನ್ನ ಸಿಬ್ಬಂದಿಯಲ್ಲಿ ಇರುವ ಕಳಕಳಿಯ ದ್ಯೋತಕವಾಗಿ ಅವರ ಸುಸ್ಥಿತಿಗೋಸ್ಕರ ವಿವಿಧ ಸೇವೆಗಳನ್ನು ಹಮ್ಮಿಕೊಳ್ಳಬೇಕು. ಇದರಿಂದ ಬ್ಯಾಂಕ್ ನೌಕರ ತನ್ನ ಸಾಮರ್ಥ್ಯ ಮೀರಿ ತನ್ನನ್ನು ಬ್ಯಾಂಕಿಗೆ ಅರ್ಪಿಸಿಕೊಳ್ಳಬಲ್ಲ ಬ್ಯಾಂಕುಗಳಲ್ಲಿ ಪದೋನ್ನತಿಯ ಅವಕಾಶಗಳು ಸಮರ್ಪಕವಾಗಿರಬೇಕು. ಇದರಿಂದ ಬ್ಯಾಂಕ್ ಶಾಖೆಗಳ ಆಡಳಿತ ನಿರ್ವಹಣೆಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯುವ ಅಭಿಲಾಷೆಯಿಂದ, ಬ್ಯಾಂಕ್ ನೌಕರ ಹೆಚ್ಚು ಶ್ರದ್ಧೆಯಿಂದ ಕೆಲಸ ಮಾಡಲು ಆತ್ಮಪ್ರೇರೇಪಣೆಗೊಳ್ಳುತ್ತಾನೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಅಂದರೆ ಕೇವಲ ಅದಕ್ಕಾಗಿ ಒಂದು ವಿಶೇಷವಾದ ಆಡಳಿತ ವಿಭಾಗ, ಬೃಹತ್ ಯೋಜನೆಗಳು ಹಾಗೂ ಮಿತಿ ಇರದ ಹಣಕಾಸಿನ ಸಹಾಯ—ಇವಿಷ್ಟೇ ಅಲ್ಲ. ಆಡಳಿತ ಶಕ್ತಿ, ಹಣ ಶಕ್ತಿ ಹಾಗೂ 'ಶೀಲ ಶಕ್ತಿ'ಯ ಸಮ್ಮಿಲನವಾದಾಗ ಮಾತ್ರ ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಾಧ್ಯ. ಅದರಲ್ಲೂ ವಿಶೇಷವಾಗಿ 'ಶೀಲಶಕ್ತಿ'—ಅಂದರೆ, ನಡತೆ, ಪರಸ್ಪರ ವಿಶ್ವಾಸ, ಕಳಕಳಿ, ಅನುಭೂತಿ ಶಕ್ತಿ, ಪ್ರಾಮಾಣಿಕ ಪ್ರಯತ್ನ—ಇವುಗಳಿಂದ ಬ್ಯಾಂಕುಗಳಲ್ಲಿ ಪವಾಡಗಳನ್ನೇ ಸಾಧಿಸಬಹುದು !

# ಸ್ವಿಸ್ ಬ್ಯಾಂಕುಗಳ ಸೌಲಭ್ಯಗಳು

**ಕಬ್ಬಿನಾಲೆ ವಸಂತ ಭಾರದ್ವಾಜ್**
**ಸ್ಟೇಟ್ ಬ್ಯಾಂಕ್ ಆಫ್ ಮೈಸೂರು**
**ಮುಖ್ಯ ಶಾಖೆ, ಹಾಸನ 573 201**

ಆಸ್ಟ್ರೇಲಿಯ ಎಂದಾಗ ಕಾಂಗರೂಗಳ ನೆನಪಾದಂತೆಯೇ ಸ್ವಿಟ್ಜರ್ಲೆಂಡ್ ಎಂದಾಗ ಬ್ಯಾಂಕುಗಳ ನೆನಪಾಗುತ್ತದೆ. ಸ್ವಿಸ್ ಬ್ಯಾಂಕುಗಳು ತಮ್ಮ ರಹಸ್ಯ ಖಾತೆಗಳ ಮೂಲಕ ಕುಬೇರನ ಖಜಾನೆಗಳೇ ಆಗಿವೆ. ಅಲ್ಲಿನ ರಾಷ್ಟ್ರೀಯ ಸಂಪನ್ಮೂಲಕ್ಕೆ ಈ ಬ್ಯಾಂಕುಗಳೇ ಮುಖ್ಯ ಜೀವಧಾತು. ವಿಶ್ವದ ಯಾವುದೇ ಮೂಲೆಯ ಮಿಲಿಯಾಧಿಪತಿಯೂ ಇಲ್ಲಿನ ಬ್ಯಾಂಕುಗಳಲ್ಲಿ ಖಾತೆ ಆರಂಭಿಸಬಹುದು. ಖಾತೆದಾರನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿರದೇ ಇದ್ದ ಪಕ್ಷದಲ್ಲಿ ಯಾವ ದೇಶದ ಸರಕಾರಕ್ಕೂ ಅಂತಹ ವ್ಯಕ್ತಿಯ ಖಾತೆಯಲ್ಲಿ ಎಷ್ಟು ಹಣವಿದೆಯೆಂದು ಸ್ವಿಸ್ ಬ್ಯಾಂಕುಗಳು ತಿಳಿಸಬೇಕಾಗಿಲ್ಲ. ಈ ಗೌಪ್ಯಪಾಲನೆಯ ತೀವ್ರ ನಿಷ್ಠೆಯಿಂದಾಗಿಯೇ ಸ್ವಿಸ್ ಬ್ಯಾಂಕ್‌ಗಳ ಬಂಡವಾಳ ಅಪರಿಮಿತವಾಗಿ ಬೆಳೆದಿದೆ, "ಬ್ಯಾಂಕುಗಳಿಗೆ ಹಣದ ಜಮಾವಣೆಯಾಗುವುದು ಮುಖ್ಯವೇ ವಿನಾ, ಆ ಹಣ ಎಲ್ಲಿಂದ ಬಂತು ? ಹೇಗೆ ಬಂತು ? ಎಂಬುದಲ್ಲ" ಎನ್ನುವುದೇ ಸ್ವಿಸ್ ಬ್ಯಾಂಕುಗಳ ಪ್ರಮುಖ ಧೋರಣೆ. ಸ್ವಿಸ್ ಬ್ಯಾಂಕುಗಳ ಯಶಸ್ಸಿನ ಗುಟ್ಟಿರುವುದೇ ಈ ಧೋರಣೆಯ ಅನುಷ್ಠಾನದಲ್ಲಿ.

ಸ್ವಿಸ್ ಬ್ಯಾಂಕುಗಳಲ್ಲಿ ತೆರೆಯಲಾದ ಖಾತೆಗಳಿಗೆ ಒಂದು ವಿಶಿಷ್ಟ ಸಂಖ್ಯೆ ಅಥವಾ ಸಂಕೇತ ಕೊಡಲಾಗುತ್ತದೆ. ಪ್ರತಿ ಖಾತೆಗೂ LOTUS, SECRET, GUN, PEN ಎಂದೋ. 12345, 98765, 420 ಎಂದೋ ಹೆಸರಿಸಲಾಗುತ್ತದೆ. ಒಂದು ಖಾತೆಗೆ ನೀಡಲಾದ ಸಂಕೇತವನ್ನು ಮತ್ತೊಂದು ಖಾತೆಗೆ ಕೊಡಲಾಗುವುದಿಲ್ಲ. ಖಾತೆದಾರನ ನಿಜವಾದ ಹೆಸರಾಗಲಿ, ವಿಳಾಸವಾಗಲಿ ಅಲ್ಲಿ ದಾಖಲಾಗುವುದಿಲ್ಲ. ಅದೂ ಅಲ್ಲದೆ ಖಾತೆದಾರನೊಬ್ಬನ ಸಂಕೇತ ಸಂಖ್ಯೆ ಯಾವುದೆಂದು ಸ್ವಿಸ್ ಬ್ಯಾಂಕಿನ ಒಬ್ಬಿಬ್ಬರು ಅಧಿಕಾರಿಗಳು ಮಾತ್ರ ತಿಳಿದಿರುತ್ತಾರೆ. ಅವರು ವರ್ಗಾವಣೆ ಹೊಂದಿದಾಗ ಅಥವಾ ನಿವೃತ್ತರಾದಾಗ ಈ ರಹಸ್ಯ ಸಂಕೇತವನ್ನು ಮತ್ತೊಬ್ಬರಿಗೆ ತಿಳಿಸಲಾಗುತ್ತದೆ. ಹಾಗಾಗಿ, ಬ್ಯಾಂಕಿನ ಇತರ ಅಧಿಕಾರಿಗಳಿಗೇ ಈ ಸಂಕೇತಗಳು ಯಾರಿಗೆ ಸಂಬಂಧಿಸಿದವುಗಳೆಂದು ತಿಳಿದಿಲ್ಲವಾದ್ದರಿಂದ ಗೌಪ್ಯತೆಯನ್ನು ತುಂಬಾ ಕಟ್ಟುನಿಟ್ಟಾಗಿ ಪಾಲಿಸಲು ಸಾಧ್ಯವಾಗುತ್ತದೆ. ಆದರೆ ಇತ್ತೀಚಿನ ಹೊಸ ಕಾನೂನಿನಂತೆ ಅನಾಮಧೇಯ ಖಾತೆಹೊಂದಿರುವ ವ್ಯಕ್ತಿಗಳು ತಮ್ಮ ಪರಿಚಯವನ್ನು 1992ರ ಸೆಪ್ಟೆಂಬರ್ ಒಳಗೆ ತಿಳಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅಂತಹ ಖಾತೆಗಳನ್ನು ರದ್ದುಗೊಳಿಸಲಾಗುವುದೆಂದು ಸ್ವಿಸ್ ಬ್ಯಾಂಕಿಂಗ್ ಫೆಡರೇಶನ್ ಎಚ್ಚರಿಕೆ ನೀಡಿದೆ. ಕೆಲವೊಮ್ಮೆ ಠೇವಣಿದಾರರು ಮೃತಪಟ್ಟಾಗ ಆ ಠೇವಣಿಯ ಹಣ ಗಂಗೆಯಲ್ಲಿ ಬಿದ್ದ ಬಂಗಾರದಂತೆ ಆ ಬ್ಯಾಂಕಿಗೇ ಸಿಗುತ್ತದೆ. ಹೀಗೆ ಒಂದೆಡೆ ಮೃತ ಠೇವಣಿದಾರರ ಹಣಕ್ಕೆ ಬ್ಯಾಂಕುಗಳೇ ಉತ್ತರಾಧಿಕಾರಿಗಳಾದರೆ, ಮತ್ತೊಂದೆಡೆ ವಿಶ್ವದ ಭಾರೀ ಮಿಲಿಯಾಧಿಪತಿಗಳ ಠೇವಣಿಯನ್ನು ಯಾವುದೇ ವಿಚಾರಣೆಗಳಿಲ್ಲದೆ ಸ್ವೀಕರಿಸುವ ಏಕೈಕ ಬ್ಯಾಂಕಿಂಗ್ ಪರಿಕಲ್ಪನೆಯಿರುವುದರಿಂದ, ಸ್ವಿಸ್ ಬ್ಯಾಂಕುಗಳ ಸಂಪನ್ಮೂಲ ಅತ್ಯಧಿಕವಾಗಿದೆ. ಆದರೆ ಈ ಅಗಾಧ ಸಂಪನ್ಮೂಲವನ್ನು ಅತ್ಯಾಧುನಿಕ ರೀತಿಯಲ್ಲಿ ಗ್ರಾಹಕಸೇವೆಗೇ ಬಳಸುತ್ತಿರುವುದಕ್ಕಾಗಿ ಸ್ವಿಸ್ ಬ್ಯಾಂಕ್‌ಗಳನ್ನು ನಾವು ಅಭಿನಂದಿಸಲೇಬೇಕಾಗುತ್ತದೆ.

ಸ್ವಿಟ್ಜರ್ಲೆಂಡಿನ ಪ್ರಮುಖ ನಾಲ್ಕು ಬ್ಯಾಂಕುಗಳೆಂದರೆ–1 ಸ್ವಿಸ್ ಬ್ಯಾಂಕ್‌ಕಾರ್ಪೊರೇಶನ್, 2ಸ್ವಿಸ್ ಕ್ರೆಡಿಟ್ ಬ್ಯಾಂಕ್, 3 ಕ್ಯಾಂಟೋನಲ್ ಬ್ಯಾಂಕ್, 4 ಯೂನಿಯನ್ ಬ್ಯಾಂಕ್ ಆಫ್ ಸ್ವಿಟ್ಜರ್ಲೆಂಡ್.

ಇವುಗಳಲ್ಲಿ ಯೂನಿಯನ್ ಬ್ಯಾಂಕ್ ಆಫ್ ಸ್ವಿಟ್ಜರ್ಲೆಂಡ್ 1986ರಲ್ಲೇ ಪೂರ್ಣ ವಿದ್ಯುನ್ಮಾನ ವಿಧಾನಗಳನ್ನು ಬಳಕೆಗೆ ತಂದ ಪ್ರಪಂಚದ ಮೊತ್ತ ಮೊದಲ ಬ್ಯಾಂಕು. ಈ ಬ್ಯಾಂಕುಗಳ ಕಟ್ಟಡವನ್ನು ಪೂರ್ಣವಾಗಿ ಅಗ್ನಿನಿರೋಧಕ ಸಾಮಗ್ರಿಗಳಿಂದಲೇ ನಿರ್ಮಿಸಲಾಗಿದ್ದು ದರೋಡೆ ವಂಚನೆಗಳನ್ನು ಹತ್ತಿಕ್ಕಲು ಸಾಕಷ್ಟು ಮುಂಜಾಗ್ರತಾಕ್ರಮಗಳನ್ನು ಕೈಗೊಳ್ಳಲಾಗಿದೆ. ಸ್ವಿಸ್ ಬ್ಯಾಂಕುಗಳ ಕಟ್ಟಡದ ಬಳಿ ಬಂದರೆ, ಮುಖ್ಯದ್ವಾರ ತನ್ನಿಂದ ತಾನೇ ತೆರೆದುಕೊಳ್ಳುತ್ತದೆ. ಆನಂತರ ಗುಂಡುನಿರೋಧಕ ಬಾಗಿಲು ನಮ್ಮನ್ನು ಎದುರುಗೊಳ್ಳುತ್ತದೆ. ಆ ಬಾಗಿಲು ತೆರೆಯಬೇಕಾದರೆ ನಮ್ಮ ಬ್ಯಾಂಕ್ ಕಾರ್ಡನ್ನು ಹತ್ತಿರದ ಯಂತ್ರಕ್ಕೆ ತೋರಿಸಬೇಕು. ಸಂಕೇತ ಸಂಖ್ಯೆಯನ್ನು ನೋಡಿ ಆ ಯಂತ್ರ 'ಆಲ್‌ರೈಟ್' ಎಂದ ಮೇಲೆಯೇ ಬ್ಯಾಂಕಿನೊಳಗೆ ಪ್ರವೇಶಿಸಲು ಸಾಧ್ಯ. ಒಳಗೆ ಹೋದ ತತ್‌ಕ್ಷಣ, ಸ್ವಿಸ್ ಬ್ಯಾಂಕ್‌ಗಳ ವಿದ್ಯುನ್ಮಾನ ವಿಧಾನಗಳ ವಿಸ್ತೃತ ವಿವರಣೆ ನೀಡುವ ಯಂತ್ರವಿದೆ. ಅದಕ್ಕೆ ಅಳವಡಿಸಲಾದ ವೀಡಿಯೋ ಟೆಕ್ಸ್ಟ್ (Video Text) ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ಪ್ರಾತ್ಯಕ್ಷಿಕ ಮಾಹಿತಿಗಳನ್ನು ನೀಡುತ್ತದೆ. ಈ ಮಾಹಿತಿಗಳನ್ನು ಪಡೆದು ಭೂಗರ್ಭ ಪ್ರವೇಶ ಮಾಡಿದಂತೆ ಮುಂದೆ ಹೆಜ್ಜೆಯಿಡುತ್ತಾ ಹೋದರೆ ಒಂದೊಂದೇ ವಿಸ್ಮಯಗಳು ನಮಗೆ ಎದುರಾಗುತ್ತವೆ. ಸ್ವಿಸ್ ಬ್ಯಾಂಕುಗಳ ಆಧುನಿಕ ತಂತ್ರಜ್ಞಾನ ಹೊತ್ತ ಸೌಲಭ್ಯಗಳು ಒಂದೊಂದಾಗಿ ನಮಗೆ ಅಚ್ಚರಿ ಉಂಟುಮಾಡುತ್ತವೆ.

**ಕೊಂಟೋಮ್ಯಾಟ್:** ಈ ವಿಭಾಗದಲ್ಲಿ ಹಣವನ್ನು ಜಮಾವಣೆ ಮಾಡುವ ಹಾಗೂ ಹಿಂಪಡೆಯುವ ಕೆಲಸ ನಡೆಯುತ್ತದೆ. ಅತ್ಯಾಧುನಿಕ ಟೆಲ್ಲರ್ ಸೌಲಭ್ಯದಿಂದ ಕೆಲವೇ ಕ್ಷಣಗಳಲ್ಲಿ ನೋಟುಗಳ ವಿನಿಮಯ, ನಾಣ್ಯಗಳ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಇಲ್ಲಿಂದಲೇ ಬೇರೆ ಶಾಖೆಗಳ ವ್ಯವಹಾರಗಳನ್ನು ನಡೆಸಬಹುದು.

**ಚೇಂಜೋಯ್ಯಾಟ್:** ಈ ಸೌಲಭ್ಯವನ್ನೊದಗಿಸುವ ಯಂತ್ರದಿಂದ ಜರ್ಮನ್ ಮಾರ್ಕ್, ಸ್ಟರ್ಲಿಂಗ್ ಪೌಂಡ್, ಇಟಾಲಿಯನ್ ಲಿರಾ, ಅಮೆರಿಕನ್ ಡಾಲರ್, ಫ್ರೆಂಚ್‌ಮಾರ್ಕ್‌ಗಳಿಗೆ ಪ್ರತಿಯಾಗಿ ಸ್ವಿಸ್ ಫ್ರಾಂಕ್‌ಗಳನ್ನು ಪಡೆಯಬಹುದು. ಅಥವಾ ಸ್ವಿಸ್‌ಫ್ರಾಂಕ್‌ಗಳನ್ನು ಕೊಟ್ಟು ವಿದೇಶೀ ಚಲಾರ್ಥಗಳನ್ನು ಪಡೆಯಬಹುದು. ಈ ವಿದ್ಯುನ್ಮಾನಯಂತ್ರ ಸ್ವಿಸ್ ಬ್ಯಾಂಕ್‌ಗಳ ವಿನೂತನ ತಾಂತ್ರಿಕತೆಗೇ ಒಂದು ರನ್ನಗನ್ನಡಿ. ಕ್ಷಣಗಳನ್ನು ಎಣಿಸುವ ಮೊದಲೇ ಚಲಾರ್ಥಗಳು ಬದಲಾವಣೆಗೊಳ್ಳುವುದನ್ನು ನೋಡಿದರೆ, ನಾವು ಇಂದ್ರಜಾಲ ಪ್ರದರ್ಶನದ ವೀಕ್ಷಕರೋ ಎಂಬ ಭ್ರಮೆಯುಂಟಾಗುತ್ತದೆ.

**ಗೋಲ್ಡ್ ಮ್ಯಾಟ್:** ಚೇಂಜೋಯ್ಯಾಟ್‌ನಲ್ಲಿ ಚಲಾರ್ಥ ಬದಲಾವಣೆಯಾದರೆ, ಇಲ್ಲಿ ಚಿನ್ನದ ಬಿಸ್ಕತ್ತುಗಳನ್ನೇ ಪಡೆಯಬಹುದು.ನಿರ್ದಿಷ್ಟ ಸ್ವಿಸ್ ಫ್ರಾಂಕ್‌ಗಳಿಗೆ ಬದಲಾಗಿ, ಬೇಕಾದ ಐದು ರೂಪಗಳಲ್ಲಿ ಚಿನ್ನವನ್ನು ಪಡೆಯಬಹುದು. ಇದು ಪ್ರತಿದಿನದ ಮಾರುಕಟ್ಟೆಯ ಚಿನ್ನದ ಬೆಲೆಗೆ ಅನುಗುಣವಾಗಿಯೇ ಇರುತ್ತದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

**ಟ್ರಾವೆಲ್ ಮ್ಯಾಟ್:** ವಿದೇಶೀ ಪ್ರವಾಸಿಗರಿಗಾಗಿ ಈ ಸೌಲಭ್ಯ. ನಿರ್ದಿಷ್ಟ ಮೊತ್ತದ ಪ್ರವಾಸದ ಚೆಕ್ಕುಗಳನ್ನು ನೀಡುವ ಈ ಯಂತ್ರ ನಗದು ಮತ್ತು ವರ್ಗಾವಣೆಗಳೆರಡರಲ್ಲೂ ಮುತ್ಸದ್ದಿ, ನಗದು ನೀಡುವ ಬದಲು ಖಾತೆಯ ಸಂಕೇತ ತಿಳಿಸಿದರೆ, ಆ ಮೊತ್ತವನ್ನು ಖಾತೆಗೆ ಖುಣಿಕೆ ಹಾಕಿ, ಪ್ರವಾಸ ಚೆಕ್ಕುಗಳನ್ನು ಸೂಚಿಸಿದ ಚಲಾರ್ಥದಲ್ಲಿ ನೀಡಿ ಹಸಿರು ದೀಪ ತೋರಿಸುತ್ತದೆ.

**ಟೆಲಿಬ್ಯಾಂಕಿಂಗ್ ವ್ಯವಸ್ಥೆ:** ಪಕ್ಕದಲ್ಲೇ ಇರುವ ಕೊಠಡಿಯಲ್ಲಿ ದೂರವಾಣಿ ಸೌಲಭ್ಯವಿದೆ. ವಿಶ್ವದ ಯಾವ ರಾಷ್ಟ್ರದ ನಾಣ್ಯಹಾಕಿದರೂ ಈ ಅದ್ಭುತ ದೂರವಾಣಿ ಯಂತ್ರ ಕಾರ್ಯತತ್ಪರವಾಗುತ್ತದೆ, ದೂರದ ಊರಿನಲ್ಲಿರುವ ಅದೇ ಬ್ಯಾಂಕಿನ

ಶಾಖೆಗಳೊಂದಿಗೆ ಹಾಗೂ ಇತರ ಬ್ಯಾಂಕುಗಳ ಶಾಖೆಗಳೊಂದಿಗೂ ವ್ಯವಹರಿಸಬಹುದು. ಪ್ರಸಕ್ತ ವಿದೇಶಿ ವಿನಿಮಯ ದರ ಪಾವತಿ ವರ್ಗಾವಣೆಗಳ ದತ್ತಾಂಶಗಳನ್ನು ಇದರಿಂದ ತಿಳಿದುಕೊಳ್ಳಬಹುದು. ಟೆಲಿಟೆಕ್ಸ್ಟ್ ಮೂಲಕ ಹವಾಮಾನ ವರದಿ, ಕ್ರೀಡೆಗಳು, ವಾರ್ತೆ, ವಿಮಾನ–ರೈಲುಗಳ ವೇಳಾ ಪಟ್ಟಿ ಮುಂತಾದ ಸೌಲಭ್ಯಗಳನ್ನು ಪಡೆಯಬಹುದು. ವಿಶ್ವದ ವಿವಿಧ ಷೇರು ಮಾರುಕಟ್ಟೆಗಳು ದತ್ತಾಂಶಗಳನ್ನೊದಗಿಸುವ ಸ್ವಾಕ್-ಇನ್-ಫೋ ಸೌಲಭ್ಯದಿಂದ ಷೇರುಗಳ ಕೊಂಡುಕೊಳ್ಳುವಿಕೆ ಕೂಡಾ ಸಾಧ್ಯ.

**ಸೇಫ್ ಮ್ಯಾಟ್:** ಸ್ವಿಸ್‌ಬ್ಯಾಂಕ್‌ಗಳ ಮತ್ತೊಂದು ವಿಸ್ಮಯ ಈ ಸ್ವಯಂಚಾಲಿತ ಭದ್ರಕಪಾಟುಗಳು. ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲೂ ತೆರೆದೇ ಇರುವ ಈ ವ್ಯವಸ್ಥೆಯಿಂದಾಗಿ, ಬೇಕೆನಿಸಿದಾಗ ಖಾತೆದಾರ ಈ ಸೌಲಭ್ಯದ ಸದುಪಯೋಗ ಪಡೆಯಬಹುದು. ಸೇಫ್‌ಮ್ಯಾಟ್ ಯಂತ್ರಕ್ಕೆ ಬ್ಯಾಂಕ್ ಕಾರ್ಡ್‌ತೋರಿಸಿದ ತತ್‌ಕ್ಷಣವೇ ಆ ಯಂತ್ರದ ಕಿಟಿಕಿ ತೆರೆಯುತ್ತದೆ. ಅಲ್ಲಿಯ ಕಾರ್ಡ್‌ನಲ್ಲಿ ಬ್ಯಾಂಕ್ ಖಾತೆಯ ಸಂಕೇತ ಸಂಖ್ಯೆಯನ್ನು ಪಂಚ್ ಮಾಡಿದ ಕೂಡಲೇ ಗ್ರಾಹಕನ ಭದ್ರಕಪಾಟು ತನ್ನಿಂದ ತಾನೇ ತೆರೆದುಕೊಳ್ಳುತ್ತದೆ. ಎಂಥ ಅದ್ಭುತ ಮಾಯಾ ಜಾಲ !

**ಇತರ ಸೌಲಭ್ಯಗಳು :** ಸ್ವಿಸ್ ಬ್ಯಾಂಕಿಗೆ ಬರುವ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸಿದರೆ, ಗ್ರಾಹಕನನ್ನು ಕರೆದುಕೊಂಡು ಹೋಗಲು ವಿಮಾನ ನಿಲ್ದಾಣಕ್ಕೆ ಬ್ಯಾಂಕಿನ ಕಾರು ಬರುತ್ತದೆ! ಬ್ಯಾಂಕ್ ಶಾಖೆ ದೂರವಿದ್ದರೆ ಹೆಲಿಕಾಪ್ಟರನ್ನೇ ಕಳುಹಿಸಲಾಗುತ್ತದೆ. ಹೊಸ ಕಾರ್ ಕೊಂಡುಕೊಳ್ಳಬೇಕಾದರೆ ಆ ಮಾದರಿಯನ್ನಷ್ಟೇ ತಿಳಿಸಿದರೆ ಸಾಕು. ಕೆಲವೇ ಗಂಟೆಗಳಲ್ಲಿ ಅದನ್ನು ಪೂರೈಸುವಷ್ಟು ಸೇವಾನಿಷ್ಠೆ ಈ ಸ್ವಿಸ್ ಬ್ಯಾಂಕ್‌ಗಳಿಗೆ. ಬ್ಯಾಂಕ್‌ನ ಒಳಗೆ ಕುಳಿತುಕೊಂಡೇ ತಿರುಗಲು ವಿದ್ಯುನ್ಮಾನ ಕುರ್ಚಿಗಳು ! ವಾತಾನುಕೂಲ ಭವನದೊಳಗೆ ಉಚಿತ ಪಾನೀಯಗಳು! ಎಷ್ಟೊಂದು ಸೌಲಭ್ಯ! ಎಷ್ಟೊಂದು ಸೌಕರ್ಯ !!

ಯಾವ ಸರಕಾರವೂ ಇಲ್ಲಿನ ಖಾತೆದಾರರನ್ನು ಏನು ಮಾಡಲೂ ಸಾಧ್ಯವಾಗದೇ ಇರುವುದರಿಂದ ಸ್ವಿಸ್ ಬ್ಯಾಂಕ್‌ಗಳಲ್ಲಿ ಅನೇಕ ರಾಜಕಾರಣಿಗಳು, ವಂಚಕ ಶಿಖಾಮಣಿಗಳು ಖಾತೆ ಹೊಂದಿದ್ದಾರೆ. ಫಿಲಿಪೀನ್ಸ್‌ನ ಪದಭ್ರಷ್ಟ ಅಧ್ಯಕ್ಷರಿಂದ ಹಿಡಿದು ಹಾಲಿವುಡ್ ತಾರೆಯರವರೆಗೆ ಅನೇಕ ಕೋಟ್ಯಧಿಪತಿಗಳನ್ನು ಗ್ರಾಹಕರನ್ನಾಗಿ ಪಡೆದ ಈ ಸ್ವಿಸ್‌ಬ್ಯಾಂಕ್‌ಗಳಲ್ಲಿ ಶೇಕಡಾ ಆರರಷ್ಟು ಖಾತೆಗಳು ಭಾರತೀಯರದ್ದು! ಸಾಕ್ಷಾತ್ ಲಕ್ಷ್ಮಿಯೇ ಕಾಲೆಡವಿ ಬಿದ್ದ, ಲೆಕ್ಕಕ್ಕೆ ಸಿಗದ ಕುಬೇರನ ಖಜಾನೆಗಳೆಂಬ ಕುಖ್ಯಾತಿ ಪಡೆದರೂ, ಈ ಬ್ಯಾಂಕುಗಳು ಒದಗಿಸುವ ಸುಸಜ್ಜಿತ ಗ್ರಾಹಕ ಸೇವೆ ವಿಶ್ವದ ಬ್ಯಾಂಕಿಂಗ್ ವ್ಯವಸ್ಥೆಗೇ ಒಂದು ಅನುಕರಣೀಯ ಮಾದರಿ. ●

# ಬ್ಯಾಂಕಿಂಗ್ ಕ್ಷೇತ್ರ: ಹೊಸ ಸಮಸ್ಯೆಗಳು


**ಕೆ. ಎನ್. ಮಹಾಬಲ**
ಅಧಿಕೃತ ಭಾಷೆಗಳ ವಿಭಾಗ
ಭಾರತೀಯ ಸ್ಟೇಟ್ ಬ್ಯಾಂಕ್
ಸ್ಥಳೀಯ ಪ್ರಧಾನ ಕಛೇರಿ
ಬೆಂಗಳೂರು


ಬ್ಯಾಂಕುಗಳ ಮೂಲಭೂತ ಕರ್ತವ್ಯವೆಂದರೆ ಉಳ್ಳವರಿಂದ ಠೇವಣಿ ಸ್ವೀಕಾರ ಮತ್ತು ಹಾಗೆ ಸ್ವೀಕರಿಸಿದ ಠೇವಣಿಗಳನ್ನು ಅಗತ್ಯವುಳ್ಳವರಿಗೆ ಸಾಲವಾಗಿ ನೀಡುವುದು—ಇದು ಸರ್ ಜಾನ್ ಪೆಜೆಟ್‌ನ ಕಾಲದಿಂದಲೂ ವಿದಿತವಾಗಿರುವ ಅಂಶವಾಗಿದೆ. ಆದರೆ ಈ ಶತಮಾನದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಅಭೂತಪೂರ್ವ ಬದಲಾವಣೆಗಳನ್ನು ಕಂಡಿದೆ. ಕೆಲವು ಬದಲಾವಣೆಗಳಂತೂ ಬ್ಯಾಂಕಿಂಗ್ ವ್ಯವಸ್ಥೆಗೇ ಮಾರಕವಾದವಂಥವು. ಅವುಗಳಲ್ಲಿ ಒಂದು ಮಧ್ಯಸ್ಥಗಾರಿಕೆ ಚ್ಯುತಿ. (Disintermediation) ಇತ್ತೀಚಿನ ಕೆಲವು ಬೆಳವಣಿಗೆಗಳು ಈ ವಾದವನ್ನು ಎತ್ತಿ ಹಿಡಿಯುತ್ತವೆ.

## ಬ್ಯಾಂಕ್ ಠೇವಣಿ ಏರಿಕೆ ಪ್ರಮಾಣದಲ್ಲಿ ಕುಸಿತ

1990–91ರ ವರ್ಷದಲ್ಲಿ ಬ್ಯಾಂಕ್ ಠೇವಣಿಗಳಲ್ಲಿ 27,500 ಕೋಟಿ ರೂ. ಹೆಚ್ಚಳವಾಗಬಹುದೆಂದು ರಿಸರ್ವ್ ಬ್ಯಾಂಕ್ ಅಂದಾಜು ಮಾಡಿತ್ತು. ಆದರೆ ವಾಸ್ತವವಾಗಿ ಈ ಬೆಳವಣಿಗೆಯು 24,230 ಕೋಟಿ ರೂ ಇತ್ತು. ಉಳಿತಾಯದಾರರು ಮತ್ತು ವಿನಿಯೋಜಕರು ತಮ್ಮ ಹಣಕ್ಕೆ ಬ್ಯಾಂಕ್‌ಗಿಂದ ಬೇರೆಡೆಯಲ್ಲೇ ಹೆಚ್ಚು ಆದಾಯ ಪಡೆಯಬಲ್ಲವರಾಗಿದ್ದು ಬ್ಯಾಂಕ್ ಠೇವಣಿ ಏರಿಕೆ ಪ್ರಮಾಣ ಈಗ ಕುಸಿದಿದೆ.

## ಸಾಲ ನೀಡಿಕೆಗೆ ಕುತ್ತು

ಸಾಲ ನೀಡಿಕೆಯನ್ನು ಬ್ಯಾಂಕ್‌ನ ಮೂಲಭೂತ ಕರ್ತವ್ಯಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಆದರೆ ಕಂಪನಿಗಳು ಸಾರ್ವಜನಿಕ ಠೇವಣಿಯನ್ನು ನೇರವಾಗಿ ಸಂಗ್ರಹಿಸುವ ಮೂಲಕ ಬ್ಯಾಂಕರನ ಮಧ್ಯಸ್ಥಗಾರಿಕೆಯೇ ಅನಗತ್ಯವೆನ್ನಿಸುವಂತೆ ಮಾಡಿವೆ. ಕಂಪನಿಗಳು ಪಡೆಯಬಲ್ಲ ಇಂಥ ಠೇವಣಿಗಳಿಗೆ ಗರಿಷ್ಠ ಮಿತಿಯಿದೆಯೆಂಬ ಮಾತು ನಿಜವಿರಬಹುದು. ಆದರೆ ಬ್ಯಾಂಕುಗಳು ಸಾಲಗಳ ಮೇಲೆ ಗರಿಷ್ಠ ಬಡ್ಡಿದರ ವಿಧಿಸಬಲ್ಲ ಕ್ಷೇತ್ರವೆಂದರೆ ಕಂಪನಿಗಳು ಮಾತ್ರ. ಕಂಪನಿಗಳೇ ನೇರವಾಗಿ ಸಾರ್ವಜನಿಕರಿಂದ ಸಂಪನ್ಮೂಲ ಸಂಗ್ರಹಿಸಿ, ಬ್ಯಾಂಕ್‌ನ ಮುಖ್ಯ ವರಮಾನ ಮೂಲಕ್ಕೇ ಕೊಡಲಿಪೆಟ್ಟು ಹಾಕಿದೆ.

## ಹೆಚ್ಚು ಬಡ್ಡಿಯ ಆಸೆ

ಹೆಚ್ಚು ವರಮಾನದ ಆಸೆಯಿಂದ ಸದ್ಯದ ಬ್ಯಾಂಕ್ ಠೇವಣಿದಾರರು ಕೂಡ ಎರಡು ಅಥವಾ ಮೂರು ವರ್ಷದ ಅವಧಿಗಳ ಠೇವಣಿಗಳತ್ತ ಗಮನ ಹರಿಸುತ್ತಿದ್ದಾರೆ. ಇದರಿಂದಾಗಿ ಬ್ಯಾಂಕುಗಳ ಸರಾಸರಿ ಸಂಪನ್ಮೂಲ ಸಂಗ್ರಹಣ ವೆಚ್ಚ ಏರುತ್ತಿದೆ ಮತ್ತು ಲಾಭಪ್ರದತೆ ಕುಂಠಿತಗೊಳ್ಳುತ್ತಿದೆ. ವಿಶೇಷವಾಗಿ ಹೆಚ್ಚುವರಿ ಠೇವಣಿಯ ಶೇ 25ರಷ್ಟನ್ನು ರಿಸರ್ವ್ ಬ್ಯಾಂಕ್ ಮೀಸಲುಗಳ ರೂಪದಲ್ಲಿ ತಡೆಹಿಡಿಯುತ್ತಿರುವುದರಿಂದ ಲಾಭಪ್ರದತೆಯ ಮೇಲೆ ತೀವ್ರವಾದ ಪರಿಣಾಮವುಂಟಾಗಿದೆ.

## ಅನಾರೋಗ್ಯಕರ ಪ್ರವೃತ್ತಿ

ಮತ್ತೊಂದು ಅನಾರೋಗ್ಯಕರ ಪ್ರವೃತ್ತಿಯೂ ಈಗೀಗ ಹೆಡೆಯೆತ್ತುತ್ತಿದೆಯೆಂದು ಬ್ಯಾಂಕ್ ವಲಯಗಳಲ್ಲಿ ಒಪ್ಪಿಕೊಳ್ಳಲಾಗುತ್ತಿದೆ. ಅದೆಂದರೆ ಹಲವಾರು ಬ್ಯಾಂಕುಗಳು ಭಾರಿ ಮೊತ್ತದ ಠೇವಣಿಗಳನ್ನು ಇಡುವ ಗ್ರಾಹಕರಿಗೆ ಕಮಿಷನ್ ನೀಡುತ್ತಿದೆ ಎನ್ನುವುದು. ಇಂಥ ಕಮಿಷನನ್ನು ಒಂದು ಕೋಟಿ ರೂ ಮೀರಿದ ಎರಡು ಅಥವಾ ಹೆಚ್ಚು ಅವಧಿಯ ಠೇವಣಿಗಳಿಗೆ ಶೇ 5ರ ವರೆಗೂ ನೀಡಲಾಗುತ್ತಿದೆಯಂತೆ. ಹಾಗೆ ಕಮಿಷನ್ ನೀಡಲು ರಿಸರ್ವ್ ಬ್ಯಾಂಕ್ ನಿರ್ಬಂಧವಿದ್ದರೂ, ಈ ವ್ಯವಹಾರ ಹೇಗೋ ನಡೆಯುತ್ತಿದೆ. ಚಾಲ್ತಿ ಖಾತೆಯ ಠೇವಣಿಗಳ ಮೇಲೆ ಇನ್ನೂ ಹೆಚ್ಚು ಅಂದರೆ ಶೇ. 6ರ ವರೆಗೂ ಕಮಿಷನ್ ನೀಡಲಾಗುತ್ತಿದೆಯೆನ್ನಲಾಗಿದೆ. ಇಂಥ ಠೇವಣಿಗಳನ್ನು ಕರೆ ಹಣ ಮಾರುಕಟ್ಟೆಯಲ್ಲಿ ಸಾಲವಾಗಿ ನೀಡಲು ಬಳಸಲಾಗುವುದು.

ಮತ್ತೊಂದು ಠೇವಣಿ ಸಂಗ್ರಹ ಉಪಾಯವೂ ಇತ್ತೀಚೆಗೆ ವರದಿಯಾಗಿದೆ, 'ರಫ್ತು ಸಿದ್ಧತಾ ಉದರಿ'ಯಾಗಿ 180 ದಿನಗಳ ಸಾಲ ನೀಡಲು ರಿಸರ್ವ್ ಬ್ಯಾಂಕ್ ಅನುಮತಿ ನೀಡಿರುವುದು ಸರಿಯಷ್ಟೆ. ಅಂಥ ಸಾಲ ಪಡೆಯಲು, ಸಾಲದ ಅಗತ್ಯ ಇಲ್ಲದ ರಫ್ತುಗ್ರಾಹಕರನ್ನು ಪ್ರಚೋದಿಸಿ, ಆ ಹಣವನ್ನು

[19ನೇ ಪುಟ ನೋಡಿ

# ಮಾರುಕಟ್ಟೆ ಅರ್ಥವ್ಯವಸ್ಥೆಯ ಹಾದಿಯಲ್ಲಿ ಸಮಾಜವಾದಿ ಬ್ಯಾಂಕಿಂಗ್ ವ್ಯವಸ್ಥೆ

ಮೂಲ :

**ರೂಪರ್ಟ್ ಬ್ಲಾಟ್‌ಮ್ಯಾನ್**

ಅನುವಾದ :

**ಸಿ. ಎನ್. ಸರ್ವಮಂಗಳ**

**ಎಚ್. ಕೆ. ಅನಸೂಯಾದೇವಿ**

ಕನ್ನಡ ವಿಭಾಗ
ಮೈಸೂರು ಬ್ಯಾಂಕು
ಪ್ರಧಾನ ಕಛೇರಿ, ಬೆಂಗಳೂರು 9

ಮಾರುಕಟ್ಟೆ ಅರ್ಥವ್ಯವಸ್ಥೆಯತ್ತ ಬದಲಾವಣೆಯನ್ನು ರೂಪಿಸುತ್ತಿರುವ ಎಲ್ಲ ಪೂರ್ವ ಯೂರೋಪಿನ ದೇಶಗಳು ಒಂದು ಬೃಹತ್ತಾದ ಸಾಮಾನ್ಯ ಸಮಸ್ಯೆಯನ್ನು ಹೊಂದಿವೆ: ಖಾಸಗಿ ಉದ್ಯಮ ತತ್ವಗಳ ಆಧಾರದ ಮೇಲೆ ಬ್ಯಾಂಕಿಂಗ್ ಉದ್ಯಮವೊಂದನ್ನು ಸ್ಥಾಪಿಸುವುದು ಹೇಗೆ? ಇದರ ಕಷ್ಟಗಳನ್ನು ಗ್ರಹಿಸಬೇಕಾದರೆ, ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಹಣ ನಿರ್ವಹಿಸಿದ ಪಾತ್ರವನ್ನು ಗ್ರಹಿಸಬೇಕು. ಎಂದರೆ ವಾಸ್ತವವಾಗಿ ಇದು ಬರೀ ಸೊನ್ನೆ.

ಸೇವೆಗಳು ಹೆಚ್ಚುವರಿ ಮೌಲ್ಯವನ್ನು ಸೃಷ್ಟಿಸುವುದಿಲ್ಲ; ಸ್ವಾಯತ್ತ ಬ್ಯಾಂಕಿಂಗ್ ಅಥವಾ ಹಣಕಾಸು ವಲಯವೆಂಬುದಿಲ್ಲ ಮತ್ತು ಆರ್ಥಿಕ ಕಾರ್ಯಭಾರಗಳು 'ರಾಷ್ಟ್ರೀಯ ಯೋಜನೆ'ಯ ಅದ್ಯ ಹಕ್ಕಿಗೆ ಬದ್ಧವಾಗಿರುತ್ತವೆ ಎಂಬುದಾಗಿ ಮಾರ್ಕ್ಸ್‌ವಾದಿ ತತ್ವ ಭಾವಿಸುತ್ತದೆ. ಸರಳ ರೀತಿಯಲ್ಲಿ ಹೇಳುವುದಾದರೆ ಕೇಂದ್ರ ಆಯೋಜಕರು ಉತ್ಪಾದನ ಗುರಿಗಳನ್ನು ನಿಗದಿಪಡಿಸುವುದಷ್ಟೇ ಅಲ್ಲ, ನಿವ್ವಳ ಸರಕು ಉತ್ಪನ್ನ (ಸಮಾಜವಾದಿ ಸ್ಥೂಲ ರಾಷ್ಟ್ರೀಯ ಉತ್ಪನ್ನ)ವನ್ನು ಸರ್ಕಾರಿ ಬಜೆಟ್‌ಗೆ ಸರಿದೂಗುವಂತೆ ಬಳಕೆ, ವಿನಿಯೋಜನೆ ಮತ್ತು ಉಳಿತಾಯಗಳ ಪೈಕಿ ಹೇಗೆ ಹಂಚಿಕೆ ಮಾಡಬೇಕೆಂಬುದನ್ನು ನಿರ್ಧರಿಸುತ್ತಾರೆ.

ಹಣದ ವಿನೀತ ಸ್ಥಾನದಿಂದ ನಿರೀಕ್ಷಿಸಬಹುದಾದಂತೆ ಸಮಾಜವಾದಿ ಬ್ಯಾಂಕಿಂಗ್ ವ್ಯವಸ್ಥೆಗಳು ಪ್ರಾರಂಭಿಕಾವಸ್ಥೆಯವಾಗಿ ತೋರುತ್ತವೆ. ಕೇಂದ್ರೀಯ ಬ್ಯಾಂಕು ಅಖಂಡವಾದ ಒಂದು "ರಾಜ್ಯ ಬ್ಯಾಂಕ್" ಆಗಿದ್ದು ಅದು ವಾಣಿಜ್ಯ ಬ್ಯಾಂಕಾಗಿಯೂ ದ್ವಿಪಾತ್ರ ವಹಿಸುತ್ತದೆ. ವಾಣಿಜ್ಯ ಭಾಗವನ್ನು ಸಾಮಾನ್ಯವಾಗಿ ಕುಟುಂಬಗಳಿಗೆ ಮತ್ತು ಉದ್ಯಮಗಳಿಗೆ ಎಂದು ಪ್ರತ್ಯೇಕ ಸಂಸ್ಥೆಗಳಾಗಿ ವಿಭಜಿಸಲಾಗಿದೆ. ಈ ವಿಭಜನೆಯಲ್ಲಿ ಸರ್ಕಾರದ ಉಳಿತಾಯ ಬ್ಯಾಂಕುಗಳು ಕುಟುಂಬಗಳ ಉಳಿತಾಯಗಳನ್ನು ನೋಡಿಕೊಂಡರೆ, ಸಾಲ ನೀಡುವ ಮತ್ತು ವಿನಿಯೋಜನಾ ಬ್ಯಾಂಕುಗಳಿಗೆ ಪ್ರವೇಶಾವಕಾಶ ಉದ್ಯಮ ವಲಯಕ್ಕೆ ಮಾತ್ರ ಇರುತ್ತದೆ. ಸಾಮಾನ್ಯವಾಗಿ ದೇಶದ ವಿದೇಶೀ ವಿನಿಮಯ ಗಳಿಕೆಗಳನ್ನು ನಿರ್ವಹಿಸುವ ವಿದೇಶೀ ವ್ಯವಹಾರ ಬ್ಯಾಂಕು ಮತ್ತು ಕೃಷಿಗಾಗಿ ವಿವಿಧ ಉದರಿ ಬ್ಯಾಂಕುಗಳನ್ನು, ಕೆಲವು ವಿಶೇಷ ರೀತಿಯ ಸಂಸ್ಥೆಗಳನ್ನು ಕಾಣಬಹುದು. ಈ ಎಲ್ಲ ಸಂಸ್ಥೆಗಳೂ ಅವಶ್ಯವಾಗಿ ರಾಜ್ಯ ಬ್ಯಾಂಕಿನ ವಿಸ್ತರಣಗಳೇ ಆಗಿದ್ದು, ಉಳಿತಾಯ ಮತ್ತು ವ್ಯಾಪಾರ ವಿನಿಯೋಜನೆಗಳ ನಡುವಿನ ಮಧ್ಯಸ್ಥಗಾರಿಕೆಯಲ್ಲಿ ಅವುಗಳಿಗೆ ಯಾವುದೇ ಸ್ವತಂತ್ರ ಕಾರ್ಯಭಾರವಿಲ್ಲ. ಸಮಾಜವಾದಿ ಮಾದರಿಯಲ್ಲಿ, ಆ ನಿರ್ಣಾಯಕ ಪಾತ್ರವನ್ನು ಸರ್ಕಾರದ ಬಜೆಟ್ ನಿರ್ವಹಿಸುತ್ತದೆ.

## ಬ್ಯಾಂಕಿಂಗ್ ಸುಧಾರಣಾ ಪ್ರಗತಿಯಲ್ಲಿ ವೈವಿಧ್ಯ

ಆರ್ಥಿಕ ಯೋಜನಾ ಪ್ರಕ್ರಿಯೆಗೆ ಮಾರುಕಟ್ಟೆ ಅಂಶಗಳನ್ನು ಸೇರಿಸುವ ಪೂರ್ವ ಯೂರೋಪ್ ದೇಶಗಳ ಪ್ರಯತ್ನದಲ್ಲಿ ಹಂಗೆರಿ ಬಹಳ ದಿನಗಳಿಂದ ಮುಂಚೂಣಿಯಲ್ಲಿದೆ. 1968ನ್ನು ಅನುಸರಿಸಿ ಮಾಡಿದ (ಆರೆಮನಸ್ಸಿನ) ಸುಧಾರಣಾ ಕ್ರಮಗಳ ಸರಣಿ "ಏಕಬ್ಯಾಂಕಿಂಗ್" ಮತ್ತು ಆಡಳಿತಾತ್ಮಕ ಕಟ್ಟಳೆಯಿಂದ ಉದರಿ ಹಂಚಿಕೆಯನ್ನು ಒಳಗೊಂಡ ಸಮಾಜವಾದಿ ವ್ಯವಸ್ಥೆಯನ್ನು ನಿರ್ಣಾಯಕವಾಗಿ ಬದಲಾಯಿಸಲಿಲ್ಲ. ವಾಸ್ತವವಾಗಿ, 1987ರಲ್ಲಿ ಸಮಾಜವಾದಿ ಮಾದರಿಯು ಹೆಚ್ಚಿನ ಪಾಶ್ಚಾತ್ಯ ಧೋರಣೆಯೊಂದಿಗೆ ಎರಡುಸ್ತರದ ಬ್ಯಾಂಕಿಂಗ್‌ಗೆ–ಒಂದು ಕಡೆ ಕೇಂದ್ರೀಯ ಬ್ಯಾಂಕು, ಮತ್ತೊಂದು ಕಡೆ ಪ್ರತ್ಯೇಕ ವಾಣಿಜ್ಯ ಬ್ಯಾಂಕುಗಳ ವ್ಯವಸ್ಥೆಗೆ— ಎಡೆಮಾಡಿಕೊಟ್ಟಾಗ ಮಾತ್ರ ಈ ಬದಲಾವಣೆ ಮುನ್ನುಗ್ಗಿ ಬಂತು. ಆ ವರ್ಷ ಮುಗಿಯುವುದರೊಳಗಾಗಿ ಬಲ್ಗೇರಿಯಾ ಇಂತಹುದೇ ಕ್ರಮ ಕೈಗೊಂಡಿತು. ಪೋಲೆಂಡ್ ಮತ್ತು ಜೆಕೊಸ್ಲೊವಾಕಿಯಾ ಜನವರಿ 1990ರಲ್ಲಿ ಆವಶ್ಯಕವಾದ ಶಾಸನವನ್ನು ಅಧಿನಿಯಮಿಸಿದವು ಮತ್ತು ಅಂದಿನ

* ಮೂಲ : *Prospectus* 6/1990 December/January.

## ಬ್ಯಾಂಕಿಂಗ್ ಕ್ಷೇತ್ರ: ಹೊಸ ಸಮಸ್ಯೆಗಳು

18ನೇ ಪುಟದಿಂದ]

ಅಲ್ಪಾವಧಿ ಠೇವಣಿಯಾಗಿ ಇರಿಸಿಕೊಳ್ಳಲಾಗುತ್ತಿದೆಯಂತೆ. ಠೇವಣಿಯನ್ನು ಆಕರ್ಷಿಸುವ ಬ್ಯಾಂಕ್‌ನ ಬತ್ತಳಿಕೆ ಎಷ್ಟು ಬರಿದಾಗಿದೆ ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ. ಒಟ್ಟಾರೆ ಮಧ್ಯಸ್ತಗಾರಿಕೆ ಚ್ಯುತಿಯ ಅಡ್ಡಪರಿಣಾಮಗಳು ಹಲವಾರು :

1 ಅದು ಠೇವಣಿದಾರರನ್ನು ಹೆಚ್ಚು ವರಮಾನ/ಬಡ್ಡಿ ಸಾಮ್ರಾಜ್ಯಕ್ಕೆ ಎಳೆತಂದಿದೆ. ಹಲವಾರು ಆಕರ್ಷಕ ಯೋಜನೆಗಳೇ ಇಂದು ಅವನ ಮುಂದಿವೆ.

2 ಕಂಪನಿ ಸಾಲಗಾರರು ನೇರವಾಗಿ ಠೇವಣಿದಾರರ/ವಿನಿಯೋಜಕರ ಸಂಪರ್ಕ ಸಾಧಿಸಿದ್ದು, ಹಲವರು ಉಪಯುಕ್ತ ಯೋಜನೆಗಳಿಂದ ಅವರ ಉಳಿತಾಯ ಸೆಳೆದುಕೊಂಡಿದ್ದಾರೆ. ತತ್ಫಲವಾಗಿ ಬ್ಯಾಂಕ್‌ನ ವರಮಾನ ಕುಸಿದಿದೆ.

3 ಠೇವಣಿ ಸಂಗ್ರಹ ವೆಚ್ಚದಲ್ಲಿ ಏರಿಕೆಯಾಗಿದೆ. ಇದರ ಜತೆಗೆ ನಗದು ಮೀಸಲು, ದ್ರವತ್ವ ಅನುಪಾತ ಮುಂತಾದ ಕಡ್ಡಾಯ ಹೊರೆ ನಿಭಾಯಿಸಲು ದಂಡಶುಲ್ಕ ಅಥವಾ ಕರೆ ಹಣ ಮಾರುಕಟ್ಟೆಯಲ್ಲಿ ದುಬಾರಿ ಬಡ್ಡಿ ಸಾಲ ಇಂಥ ವಿಷವೃತ್ತದಲ್ಲಿ ಹಲವಾರು ಬ್ಯಾಂಕುಗಳು ಕೊಂಡಿವೆ.

ಐತಿಹಾಸಿಕವಾದ ಹಾಗೂ ಬೃಹತ್ತಾದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಈ ಸ್ಥಿತಿಯಿಂದ ಪಾರುಮಾಡಲು ಪ್ರಾಧಿಕಾರಿಗಳು ಮರುಚಿಂತನೆ ನಡೆಸುವುದು ಅಗತ್ಯವಾಗಿದೆ.

●

ಜಿಡಿಆರ್ (ಪೂರ್ವ ಜರ್ಮನಿ) ಜುಲೈನಲ್ಲಿ ಇದನ್ನು ಅನುಸರಿಸಿತು.

ಅಂದಿನ ಸರ್ಕಾರಿ ಬ್ಯಾಂಕ್ ಮತ್ತು ಹಣಕಾಸು ಮಂತ್ರಾಲಯಗಳ ಔಪಚಾರಿಕ ಪ್ರತ್ಯೇಕತೆ ನೈಜವಾದ ಸುಧಾರಣೆ ಉಂಟುಮಾಡುವುದಿಲ್ಲ ಎಂಬುದನ್ನು ಬಲ್ಗೇರಿಯಾದ ಉದಾಹರಣೆ ತೋರಿಸುತ್ತದೆ. ಬಲ್ಗೇರಿಯಾದ ವಿಷಯದಲ್ಲಿ ಹಿಂದೆ ಇದ್ದ ಅವಲಂಬನೆಯ ಸ್ಥಿತಿಯನ್ನು ಅಗತ್ಯವಾಗಿ ಉಳಿಸಿಕೊಳ್ಳಲಾಗಿದೆ. ರಾಷ್ಟ್ರೀಯ ಬ್ಯಾಂಕು ಮತ್ತು ವಿದೇಶೀ ವ್ಯವಹಾರ ಬ್ಯಾಂಕು ಈಗಲೂ ಮಾರುಕಟ್ಟೆಯಲ್ಲಿ ಮೇಲುಗೈ ಹೊಂದಿದೆ ಮತ್ತು ಸಾಲ ನೀಡಿಕೆಗೆ ಸಂಬಂಧಿಸಿದಂತೆ ಸರ್ಕಾರದ ಯೋಜನಾ ಗುರಿಗಳನ್ನು ಬೆಂಬಲಿಸಬೇಕಾಗಿದೆ. ನಾವು ಅರ್ಥೈಸುವ ರೀತಿಯ ಸ್ವಾಯತ್ತ ಕೇಂದ್ರೀಯ ಬ್ಯಾಂಕು ಅಲ್ಲಿಲ್ಲ. ಈಗ ಹೊಸದಾಗಿ ಸೃಷ್ಟಿಸಲಾದ ವಾಣಿಜ್ಯ ಬ್ಯಾಂಕುಗಳ ಮಹತ್ವ ಮಾರುಕಟ್ಟೆಯಲ್ಲಿ ಅತ್ಯಲ್ಪವಾಗಿದ್ದರೂ ಅವುಗಳು ಸ್ವತಂತ್ರವೆಂದು ತೋರುತ್ತದೆ.

ಯಾವುದೇ ಸಂದರ್ಭದಲ್ಲಿ ಸಮಾಜವಾದಿ ಅರ್ಥವ್ಯವಸ್ಥೆಯಿಂದ ಮಾರುಕಟ್ಟೆ ವ್ಯವಸ್ಥೆಗೆ ಪರಿವರ್ತನೆಗೊಳ್ಳುವ ಹಾದಿಯಲ್ಲಿ ಸಮಸ್ಯೆಗಳು ಇದ್ದೇ ಇರುತ್ತವೆ. ಪೂರ್ವ ಯುರೋಪಿಯನ್ ಅರ್ಥವ್ಯವಸ್ಥೆಗಳು ಸಂರಚನಾತ್ಮಕ ಮಾರುಕಟ್ಟೆ ಅನುಸ್ಥಾಪಿತ ಸುಧಾರಣೆಗಳನ್ನು ಜಾರಿಗೆ ತರುವುದಲ್ಲದೆ, ಏಕಕಾಲದಲ್ಲಿ ಆಳವಾಗಿ ಬೇರೂರಿರುವ ತಮ್ಮ ಸ್ಥೂಲ ಆರ್ಥಿಕ ವಿರೂಪಗಳನ್ನು ಸರಿಪಡಿಸುವಂತಹ ಸ್ಥಿರೀಕರಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾದ ಅಗತ್ಯವೂ ಇರುವುದರಿಂದ ಹೊಂದಾಣಿಕೆಯ ಸಮಸ್ಯೆಗಳು ಇನ್ನೂ ಹೆಚ್ಚಾಗಿರುತ್ತವೆ. ಈ ಎಲ್ಲ ಪ್ರತ್ಯೇಕ ಸುಧಾರಣೆಗಳ ನಿರ್ಣಾಯಕ ಪಥಗಳ ಹೆಚ್ಚಿನ ಮಟ್ಟದ ಸಮನ್ವಯವಿರಬೇಕು ಮತ್ತು ಸಂರಚನಾತ್ಮಕ ಸುಧಾರಣೆಗಳ ಹಾದಿಯಲ್ಲಿರುವ ಅಡೆತಡೆಗಳೇ ಗಣನೀಯವಾಗಿವೆ.

1988 ಮತ್ತು 1989ರಲ್ಲಿ ಅಂತರರಾಷ್ಟ್ರೀಯ ಹಣ ನಿಧಿಯ ಸ್ಥಿರೀಕರಣ ಕಾರ್ಯಕ್ರಮದೊಂದಿಗಿನ ಹಂಗೇರಿಯ ಅನುಭವ ಈ ಸಮಸ್ಯೆಗಳು ಎಷ್ಟು ಪರಸ್ಪರಾವಲಂಬಿಗಳೆಂಬುದನ್ನು ತೋರಿಸುತ್ತದೆ. ಹಂಗೇರಿಯ ರಾಷ್ಟ್ರೀಯ ಬ್ಯಾಂಕು ನಿರ್ಬಂಧಕ ಹಣಕಾಸು ನೀತಿಗಳನ್ನು ವಿಧಿಸಿದಾಗ ಅನೇಕ ಕಂಪನಿಗಳು ತಮ್ಮ ಪಾವತಿಗಳನ್ನು ಮಾಡುವಲ್ಲಿ ಬಹಳ ಹಿಂದೆ ಬಿದ್ದವು. ಪಾವತಿಯಾಗದ ಋಣಗಳ ಇಂತಹ ಜಮಾವಣೆಯನ್ನು ಕಾನೂನು ಮೂಲಕ ನಿಷೇಧಿಸಿದ್ದರೂ, ಮುಖ್ಯ ಸರಬರಾಜುದಾರರು ಅಥವಾ ಒಳಗುತ್ತಿಗೆದಾರರೊಂದಿಗಿನ ಸಂಬಂಧಗಳಿಗೆ ಕುತ್ತಾಗುತ್ತದೆಂಬ ಕಾರಣದಿಂದ, ಕೆಲವೇ ಕೆಲವು ಘಟಕಗಳಿಗೆ ತಮ್ಮ ಹಿಂದಿನ ಪ್ರಾಪ್ಯಗಳನ್ನು ವಸೂಲಿ ಮಾಡಿಕೊಳ್ಳಲು ಸಾಧ್ಯವಾಯಿತು. ಇದರಿಂದಾಗಿ ಅನೇಕ ಕಂಪನಿಗಳು ಪಾವತಿ ಲೋಪಗಳನ್ನು ತಾಳಿಕೊಂಡವು. ಇದು ಅಂತರ ಕಂಪನಿ ಉದರಿ ಮಾರುಕಟ್ಟೆಗೆ ಎಡೆಮಾಡಿಕೊಟ್ಟದು ಕೇಂದ್ರೀಯ ಬ್ಯಾಂಕಿನ ಸ್ಥಿರೀಕರಣ ಪ್ರಯತ್ನಗಳನ್ನು ನಿಷ್ಫಲಗೊಳಿಸಿತು. ಅಲ್ಲದೆ ಅನ್ವಯಿಸಬೇಕಾದ ಕಾನೂನುಗಳನ್ನು ಅನ್ವಯಿಸಲಿಲ್ಲ. ಈ ಬಾರಿ ಏಕಸ್ವಾಮ್ಯ ಮಾರುಕಟ್ಟೆ ಸಂರಚನೆಯೇ ತಪ್ಪಿತಸ್ಥ. ನೈಜ ಸ್ಪರ್ಧಾತ್ಮಕ ಪರಿಸರವೊಂದರಲ್ಲಿ ಉದರಿಯ ಕೊರತೆ ಲಾಭದಾಯಕವಲ್ಲದ ಉದ್ಯಮಗಳು ಕುಸಿಯಲು ಕಾರಣವಾಗುತ್ತಿತ್ತು. ಇತರ ಮಾಜಿ-ಸಮಾಜವಾದಿ ದೇಶಗಳಲ್ಲಿ ಈ ರೀತಿಯ ಮಾದರಿಗಳನ್ನು ಕಾಣಬಹುದು ಮತ್ತು ಹಂಗೇರಿಯ ಸಂದರ್ಭದಂತೆಯೇ ಇಲ್ಲಿಯೂ ಮೂಲಭೂತ ದೋಷವೆಂದರೆ ಏಕಸ್ವಾಮ್ಯ ಮಾರುಕಟ್ಟೆ ಸಂರಚನೆಗಳನ್ನು ಉಳಿಸಿಕೊಂಡಿರುವುದೇ ಆಗಿದೆ.

## ಪೂರ್ವಾರ್ಜಿತ ವಹಿವಾಟುಗಳ ಬಲೆಯಲ್ಲಿ

ಏಕಸ್ವಾಮ್ಯ ಮಾರುಕಟ್ಟೆ ಸಂರಚನೆಗಳ ಮುಂದುವರಿಕೆಯಿಂದ ಹಿಂದಿನಿಂದ ಬಳುವಳಿಯಾಗಿ ಬಂದಿರುವ ಸಮಸ್ಯಾತ್ಮಕ ಸಾಲಗಳಿಂದ ಮತ್ತು ಒಂದು ಮಾರುಕಟ್ಟೆ ವಾಸ್ತವವಾಗಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಬಗ್ಗೆ ವ್ಯವಸ್ಥಾಪನ ವರ್ಗ ಮತ್ತು ಪ್ರಾಧಿಕಾರಿಗಳು ಇಬ್ಬರಿಗೂ ಇರುವ ಅರಿವಿನ ಕೊರತೆ, ಇವುಗಳಿಂದ ದಕ್ಷ ಮತ್ತು ಸಮರ್ಥ ವಾಣಿಜ್ಯಕ ಬ್ಯಾಂಕುಗಳ ಅಭಿವೃದ್ಧಿಗೆ ಅಡಚಣೆಯುಂಟಾಗಿದೆ.

ಪೂರ್ವ ಯುರೋಪಿನಲ್ಲಿ ಬ್ಯಾಂಕ್ ಸುಧಾರಣೆಗಳಿಗೆ ತೊಡಕಾಗಿರುವ ಪ್ರಮುಖ ತೊಂದರೆಯೆಂದರೆ ಬಹುಶಃ ರಾಜ್ಯ ಒಡೆತನದ ಹೊಸ ವಾಣಿಜ್ಯ ಬ್ಯಾಂಕುಗಳ ಪುಸ್ತಕಗಳಲ್ಲಿರುವ ಪೂರ್ವಾರ್ಜಿತ ಸಮಸ್ಯಾತ್ಮಕ ಸಾಲಗಳು. ಹಳೆಯ ರಾಜ್ಯ ಬ್ಯಾಂಕುಗಳ ಮೊದಲಿನ ಶಾಖೆಗಳು ಮತ್ತು ವಿಶೇಷ ಪರಿಣತಿ ಹೊಂದಿರುವ ಸಂಸ್ಥೆಗಳು ರಾಜ್ಯ ವಾಣಿಜ್ಯಕ ಬ್ಯಾಂಕುಗಳ ರೂಪದಲ್ಲಿ ಠೇವಣಿಗಳ ಮತ್ತು ಸಾಲಗಳ ಹೆಚ್ಚಿನ ಪಾಲನ್ನು ಹೊಂದಿವೆ. ಸಮಸ್ಯಾತ್ಮಕ ಸಾಲಗಳು ಮತ್ತು ಈ ಬ್ಯಾಂಕುಗಳ ಬಂಡವಾಳದ ಅನುಪಾತ ಎಷ್ಟು ಅಧಿಕವಾಗಿದೆಯೆಂದರೆ ಅವುಗಳ ನಿವ್ವಳ ಸಾಮರ್ಥ್ಯ ನಕಾರಾತ್ಮಕವಾಗಿದೆ ಎಂದು ಅಂದಾಜುಗಳು ಸೂಚಿಸುತ್ತವೆ. ಈ ಸಮಸ್ಯಾತ್ಮಕ ಸಾಲಗಳ ಹೊರೆಯನ್ನು ಇಳಿಸದ ಹೊರತು ಈ ವಾಣಿಜ್ಯಕ ಬ್ಯಾಂಕುಗಳು ಮಾರುಕಟ್ಟೆ ತತ್ತ್ವಗಳ ಸೂಕ್ತ ಮಾರ್ಗದರ್ಶನದಂತೆ ವರ್ತಿಸಲು ಸಾಧ್ಯವೇ ಇಲ್ಲ. ಇದಕ್ಕೆ ತದ್ವಿರುದ್ಧವಾಗಿ ಅವರದೇ ಆಯವ್ಯಯ ಪಟ್ಟಿಯಲ್ಲಿರುವ ಅಸ್ಥಿರತೆಯಿಂದ ತಿಳಿಯುವುದೇನೆಂದರೆ ಹೊಸ ವಹಿವಾಟಿನ ಮೂಲಕ ನಷ್ಟಸಂಭಾವ್ಯತೆಗೆ ಒಡ್ಡಲಾದ ಬಂಡವಾಳ ಅವರದಲ್ಲವೇ ಅಲ್ಲ. ಆದಕಾರಣ ಅವುಗಳನ್ನು ಸರ್ಕಾರದ ನಿಧಿಗಳಿಗೆ ವಿಧಿಸಬೇಕಾಗುತ್ತದೆ. ಇದರಿಂದ ಅವರು ಹಳೆಯ ವ್ಯವಸ್ಥೆಯಲ್ಲಿ ಹೇಗಿದ್ದರೋ ಅದೇ ರೀತಿ ರಾಜ್ಯ ನಿರ್ವಹಣೆಯ ಅಂಗವಾಗಿ ಮಾತ್ರ ಉಳಿಯುತ್ತಾರೆ.

ದಿವಾಳಿತನದ ಕಾನೂನನ್ನು ನಿರ್ವಹಣಾ ಕಾರ್ಯಗಳಲ್ಲಿ ತೊಡಗಿಸಲು ಇನ್ನೂ ಅದೇ ರೀತಿಯ ಅನಾಸಕ್ತಿ ತೋರಲಾಗುತ್ತಿದೆ. ಸುಧಾರಕರು ಕೂಡ ಹಂಗೇರಿಯಲ್ಲಿ 1987ರ ತನಕ ದಿವಾಳಿತನದ ಕಾನೂನನ್ನು ಜಾರಿಗೆ ತರಲಿಲ್ಲವೆಂಬುದನ್ನು ಮತ್ತು ಆ ಕಾನೂನನ್ನು ತೀವ್ರವಾಗಿ ಅನುಷ್ಠಾನಗೊಳಿಸಬೇಕೆಂಬುದನ್ನು ಗಮನಿಸಿದ್ದಾರೆ. ದಿವಾಳಿತನದ ವ್ಯವಹರಣೆಯಿಂದ ಉಚ್ಚ ಸಾಮಾಜಿಕ ವೆಚ್ಚಗಳು ಲಾಭದಾಯಕವಲ್ಲದ ಉದ್ದಿಮೆಗಳನ್ನು ಇನ್ನಷ್ಟು ಕ್ಷೀಣಗೊಳಿಸುತ್ತವೆಂದು ಪೂರ್ವ ಯುರೋಪಿನ ಎಲ್ಲ ಸರ್ಕಾರಗಳೂ ಹಿಂಜರಿದಿವೆ. ಇದೇನೋ ಸ್ಪಷ್ಟವಾಗಿ ಅರ್ಥವಾಗಬಲ್ಲದು. ಆದರೆ ಪುನರ್ ಸಂಘಟನೆಗೆ ಅಡ್ಡಗಟ್ಟೆ ಹಾಕುವುದು ಅರ್ಥವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತದೆ ಮತ್ತು ಬ್ಯಾಂಕಿಂಗ್ ಉದ್ದಿಮೆಯ ಕಾಲವಿರೋಧಾತ್ಮಕ ರೂಪರೇಷೆಗಳು ಚಿರಸ್ಮರಣೀಯವಾಗಲು ಸಹಾಯಕವಾಗುತ್ತದೆ.

ಇದಲ್ಲದೆ ಸಮಾಜವಾದಿ ಲೆಕ್ಕಬರಹ ಒಂದು ಗೊತ್ತಾದ ಕಂಪನಿಯ ಉದರಿ ನಿಲುವಿನ ಸ್ವತಂತ್ರ ಮತ್ತು ವಾಸ್ತವಿಕ ವಿಶ್ಲೇಷಣೆ ನಡೆಸುವುದನ್ನು ಅಸಾಧ್ಯವಾಗಿಸುತ್ತದೆ. ಒಂದು ಕಂಪನಿಯ ಲಾಭಪ್ರದತೆ ಮತ್ತು ತುಲನಾತ್ಮಕತೆಯನ್ನು ಕೇವಲ ಹಳೆಯ ಅಂಕಿ-ಅಂಶಗಳಿಂದ ಸುಮ್ಮನೆ ಊಹಿಸಲಾಗುವುದಿಲ್ಲ. ಆದ್ದರಿಂದ ಕಂಪನಿಗಳು ತಮ್ಮ ಸ್ವಂತ ವೆಚ್ಚ ಮತ್ತು ಕಂದಾಯ ಸ್ಥಿತಿಗತಿಗಳನ್ನು ನಿರ್ಧರಿಸುವ ಮುನ್ನ ಪಾಶ್ಚಾತ್ಯ ಆಯವ್ಯಯ ಪಟ್ಟಿ ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳಿಗೆ ತೀವ್ರತರ ಪರಿವರ್ತನೆ ಅತ್ಯಗತ್ಯವಾಗಿದೆ. ಇದು ವಾಣಿಜ್ಯಕ ಬ್ಯಾಂಕುಗಳ ಸ್ವತಂತ್ರ ಉದರಿ ನಿರ್ಣಯಗಳಿಗೆ ವಿಶ್ವಾಸಾರ್ಹವಾದ ಬುನಾದಿಯನ್ನು ನೀಡಬಲ್ಲದು.

ವಿವಿಧ ಸುಧಾರಣೆಗಳು ಹೇಗೆ ಬೇರ್ಪಡಿಸಲಾಗದವು ಎಂಬುದನ್ನು ಮೇಲಿನ ಪರಿಶೀಲನೆಗಳು ಸ್ಪಷ್ಟಪಡಿಸುತ್ತವೆ. ಬ್ಯಾಂಕ್ ಸುಧಾರಣೆಯು ಹಿಂದಿನ ರಾಜ್ಯ ಉದ್ದಿಮೆಗಳ ಪುನರ್ ಸಂರಚನೆಯೊಂದಿಗೆ ನಿಕಟ ಸಂಬಂಧ ಹೊಂದಿರುವುದು ಮಾತ್ರವಲ್ಲದೆ ಆಸ್ತಿ ಹಕ್ಕುಗಳ ಅಸಮರ್ಪಕ ಬೆಳವಣಿಗೆಯಿಂದ, ಬೆಲೆ ಏರುಪೇರುಗಳಿಂದ ಮತ್ತು ಮುಕ್ತ ಮಾರುಕಟ್ಟೆಗಳಿಗೆ ಬದಲಾವಣೆಗೊಳ್ಳುವಾಗ ಸಮಾಜವಾದಿ ಅರ್ಥವ್ಯವಸ್ಥೆಯ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆಯಿಂದಲೂ ಬಳಲುತ್ತಿದೆ. ಒಂದು ಕ್ಷೇತ್ರದ ಬೆಳವಣಿಗೆ ಇನ್ನೊಂದು ಕ್ಷೇತ್ರದ ಬೆಳವಣಿಗೆ

ಯನ್ನು ಅವಲಂಬಿಸಿರುತ್ತದೆ. ಸಮಸ್ಯೆಗಳ ಜಟಿಲತೆ ಕೆಲವು ವೇಳೆ ನಿರುತ್ತೇಜಕವಾಗಿರಬಹುದು. ಆದರೆ ಕಾಲವಿಳಂಬ ಮಾಡುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂಬುದನ್ನು ಅನುಭವ ನಮಗೆ ತೋರಿಸಿಕೊಟ್ಟಿದೆ. ಕೇಂದ್ರೀಕೃತ ಯೋಜನಾ ಅರ್ಥವ್ಯವಸ್ಥೆಯು ಮಾರುಕಟ್ಟೆ ಅರ್ಥವ್ಯವಸ್ಥೆಗೆ ಕ್ರಮೇಣ ಪರಿವರ್ತನೆ ಹೊಂದುವುದು ಸಾಧ್ಯವೇ ಇಲ್ಲ ಎಂಬ ಅನಿವಾರ್ಯ ನಿರ್ಣಯಕ್ಕೆ ಬರಬೇಕಾಗುತ್ತದೆ.

ಅದೇ ಸಮಯದಲ್ಲಿ, ಸಮಾಜವಾದಿ ಅರ್ಥವ್ಯವಸ್ಥೆಯಿಂದ ಮಾರುಕಟ್ಟೆ ಅರ್ಥವ್ಯವಸ್ಥೆಗೆ ಆಗುತ್ತಿರುವ ಪರಿವರ್ತನೆಯೊಂದಿಗೆ ಬೆಸೆದುಕೊಂಡಿರುವ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ವಿಸ್ತಾರವಾದ ಪರಿಣಾಮವುಂಟುಮಾಡುವುದರಿಂದ ಯಾರೂಶೀಘ್ರ ಫಲಿತಾಂಶಗಳನ್ನು ನಿರೀಕ್ಷಿಸುವಂತಿಲ್ಲ. ಇದು ಒಂದು ದೀರ್ಘಾವಧಿ ಪ್ರಕ್ರಿಯೆಯಾಗಿದು ಹಿಂದಿನ ಪೂರ್ವಜರ್ಮನಿಯ ವಿಶೇಷ ಸಂದರ್ಭದಲ್ಲಿ ಕೂಡ ಅನೇಕ ವರ್ಷಗಳವರೆಗೆ ನಡೆಯುತ್ತದೆ.

## ಬ್ಯಾಂಕ್ ಸುಧಾರಣೆಗೆ ಮುಂದಿನ ಆದ್ಯತೆಗಳು

ಯಾವುದೇ ಹಣಕಾಸು ವ್ಯವಸ್ಥೆಯ ಕಾರ್ಯನಿರ್ವಹಣೆಗೆ ಇರಬೇಕಾದ ಮೂಲಭೂತ ಪೂರ್ವನಿಬಂಧನೆಗಳೆಂದರೆ ಸ್ಥಿರ ಆರ್ಥಿಕ ನೀತಿಯ ಪರಿಮಾಣಗಳು ಮತ್ತು ಒಂದೆಡೆಯಲ್ಲಿ ಹಣಕಾಸು ವಲಯ ಹಾಗೂ ಇನ್ನೊಂದೆಡೆಯಲ್ಲಿ ವ್ಯವಹಾರಗಳು, ಗ್ರಾಹಕರು ಮತ್ತು ನಿಯಂತ್ರಕರು ಇವುಗಳ ನಡುವಿನ ವಿಶ್ವಾಸಾರ್ಹವಾದ ಸಂಬಂಧಗಳು. ಸರ್ಕಾರಗಳು ಆತ್ಮವಿಶ್ವಾಸವನ್ನು ಬಲಪಡಿಸುವಂತಹ ಕ್ರಮಗಳನ್ನು ಕೈಗೊಂಡರೆ ಮಾತ್ರ ಮಾರ್ಕ್ಸ್‌ವಾದಿ ಅರ್ಥವ್ಯವಸ್ಥೆಯಿಂದ ಮಾರುಕಟ್ಟೆ ಅರ್ಥವ್ಯವಸ್ಥೆಗೆ ಒಂದು ಅರ್ಥವತ್ತಾದ ಪರಿವರ್ತನೆಯನ್ನು ತರಲು ಸಾಧ್ಯ. ಪೂರ್ವ ಯೂರೋಪಿಯನ್ ಅರ್ಥವ್ಯವಸ್ಥೆಗಳ ಸಂದರ್ಭದಲ್ಲಿ ಸ್ಪಷ್ಟ ಆದ್ಯತೆಗಳನ್ನು ನಿರ್ಮಿಸಿ ಅನುಷ್ಠಾನಗೊಳಿಸಿದರೆ ಮಾತ್ರ ಇದು ಸಾಧ್ಯ. ಹಂಗೆರಿ ಮತ್ತು ಪೋಲೆಂಡ್‌ಗಳು ಈ ವಿಷಯದಲ್ಲಿ ಈಗಾಗಲೇ ಪ್ರಯೋಗಗಳನ್ನು ನಡೆಸಿವೆ. ಈಗ ಪ್ರಸ್ತುತಪಡಿಸಿರುವ ಸನ್ನಿವೇಶದ ವಿಶ್ಲೇಷಣೆಯಿಂದ ಬ್ಯಾಂಕಿಂಗ್ ವಲಯಕ್ಕೆ ಈ ಮುಂದೆ ತಿಳಿಸಿರುವ ಸುಧಾರಣಾ ಆದ್ಯತೆಗಳು ಸಾಧಿತವಾಗಿವೆ.

1 ಸಾಧ್ಯವಾದೆಡೆಯಲ್ಲೆಲ್ಲಾ ಇಂದಿನ ಚಟುವಟಿಕೆಗಳನ್ನು ಹಿಂದಿನಿಂದ ಬಂದ ಸಂಪ್ರದಾಯಗಳಿಂದ ಬೇರೆಯಾಗಿಯೇ ಇಡಬೇಕು. ಯಶಸ್ವೀ ಪುನರ್‌ಸಂರಚನೆಗೆ ಇರುವ ಸಿದ್ಧಸೂತ್ರಗಳಲ್ಲಿ ಇದೂ ಒಂದು. ಇವೆಲ್ಲಕ್ಕಿಂತ ಹೆಚ್ಚಾಗಿ ತೊಡಕಿನ ಹಳೆಯ ಸಾಲಗಳು ಮತ್ತು ಹೊಸ ಉದರಿ ವ್ಯವಹಾರಗಳ ನಡುವೆ ಸ್ಪಷ್ಟವಾದ ಭೇದವಿರಲೇಬೇಕು. ಬಾಕಿ ಉಳಿದಿರುವ, ಸರಕಾರಿ ಉದ್ದಿಮೆಗಳಿಂದ ಸಂಗ್ರಹಿಸಲಸಾಧ್ಯವಾದ ಸಾಲಗಳನ್ನು ವಿಶೇಷ ಸಾರ್ವಜನಿಕ ನಿಧಿಗೆ ಸಂಚಯಿಸಬೇಕು. ಮತ್ತು ಅವುಗಳ ಪರಿಮಿತಿಯನ್ನು ಸ್ಪಷ್ಟವಾಗಿ ತಿಳಿಸಬೇಕು. ಅನಂತರ ಸರ್ಕಾರ ಈ ಹಳೆಯ ಸಾಲಗಳ ಹೊರೆಯನ್ನು ಹೇಗೆ ವಿಭಾಗಿಸಬೇಕು ಎಂಬುದನ್ನು ನಿರ್ಧರಿಸಬೇಕು. ಇದು ಸರ್ಕಾರಿ ಜವಾಬ್ದಾರಿ. ದೇಶೀಯ ಅಥವಾ ವಿದೇಶೀ ಖಾಸಗೀ ವಲಯದ ಹೂಡಿಕೆದಾರರು ಈ ಋಣದ ಭಾರವನ್ನು ಹೊರುವರೆಂದು ನಿರೀಕ್ಷಿಸುವುದು ಭ್ರಮೆಯೇ ಸರಿ.

2 ವಾಣಿಜ್ಯಕ ಬ್ಯಾಂಕುಗಳ ಆಯವ್ಯಯ ಪಟ್ಟಿಯು ಒಂದು ರೂಪಕ್ಕೆ ಒಳಪಟ್ಟ ಮೇಲೆ ಸರ್ಕಾರಿ ಉದ್ದಿಮೆಗಳು ಸಹ ವಾಸ್ತವ ಬೆಲೆಯನ್ನು ಕೊಡಬೇಕು ಮತ್ತು ನೇರಮಾರ್ಗದಲ್ಲಿ ನಡೆಯಬೇಕು ಅಥವಾ ಮುಚ್ಚಬೇಕು. ಎರಡೂ ಮುಖಗಳ ಮುನ್ನಡೆಯನ್ನು ಎಚ್ಚರಿಕೆಯಿಂದ ಹೊಂದಾಣಿಕೆ ಮಾಡಬೇಕು. ಸರ್ಕಾರಿ ಅಭಿಕರಣದಿಂದ ಸಂಸ್ಥೆಯ ಅಸ್ತಿತ್ವಕ್ಕೆ ಪರಿವರ್ತನೆ ಶೀಘ್ರವಾಗಿ ಆಗಬೇಕಾದರೆ ರಾಜ್ಯದ ಸಹಭಾಗಿತ್ವವಿಲ್ಲದೆ ಪುನರ್‌ಸಂಘಟನೆ ಸಾಧ್ಯವೇ ಇಲ್ಲ.

3 ವಿವಿಧ ಉದ್ಯಮಗಳ ಪುನರ್‌ಸಂರಚನೆಯ ಜೊತೆಜೊತೆಗೇ ಖಾಸಗೀಕರಣವೂ ನಡೆಯಬೇಕು. ಹಿಂದಿನ ಪೂರ್ವಜರ್ಮನಿಯಲ್ಲಿ ಖಾಸಗೀಕರಣ ನಡೆದಾಗ ಅರ್ಥವ್ಯವಸ್ಥೆಯ ಪುನರ್ ಸಂರಚನೆ ಮತ್ತು ಖಾಸಗೀಕರಣ ಎರಡನ್ನೂ ಪ್ರಸ್ತುತ ಒಟ್ಟಾಗಿಯೇ ಬೃಹತ್ ಪ್ರಮಾಣದಲ್ಲಿ ಯೋಜಿಸಲಾಗಿತ್ತು. ಆದಾಗ್ಯೂ ಅದಕ್ಕೆ ಸ್ವಲ್ಪ ಕಾಲ ಹಿಡಿಯುತ್ತದೆ. ಅದರಲ್ಲೂ ವಿಶೇಷವಾಗಿ ಜರ್ಮನಿಯಷ್ಟು ಶೀಘ್ರವಾಗಿ ದಾಪುಗಾಲು ಹಾಕಿ ಮುನ್ನಡೆಯಲು ಸಾಧ್ಯವಾಗದಂತಹ ದೇಶಗಳಲ್ಲಿ. ಆದ್ದರಿಂದ ಇದೇ ದಿಕ್ಕಿನಲ್ಲಿರುವ ಇತರ ಎಲ್ಲ ಕ್ರಮಗಳು ಕೂಡ ಮುಖ್ಯವಾದವು.

4 ಬ್ಯಾಂಕುಗಳು ತಮ್ಮ ಸ್ಪರ್ಧಾತ್ಮಕ ಮತ್ತು ವ್ಯವಸ್ಥಾಪಕ ಕುಶಲತೆಯನ್ನು ಬಲಪಡಿಸಿಕೊಳ್ಳುವುದು ಅಗತ್ಯವಾಗಿದೆ. ಈ ಮೊದಲು ಬಂಡವಾಳದ ಕೊರತೆ ಮುಖ್ಯ ಸಮಸ್ಯೆಯಾಗಿರಲಿಲ್ಲ. ಆದರೆ ಅವುಗಳ ಅಸಮರ್ಪಕ ಹಂಚಿಕೆ ಸಮಸ್ಯೆಯಾಗಿತ್ತು. ವಿದೇಶಿ ಬ್ಯಾಂಕುಗಳಿಗೆ ಪೂರ್ವ ಮಾರುಕಟ್ಟೆಗಳನ್ನು ಆರಂಭಿಸುವುದು ಈ ಪರಿಹಾರಾತ್ಮಕ ಕ್ರಮಗಳಲ್ಲಿ ಸೇರಬೇಕು.

ಏಕಸ್ವಾಮ್ಯ ಮಾರುಕಟ್ಟೆ ಸಂರಚನೆಯನ್ನು ಹೊರದೂಡಲು ಮಾಡುತ್ತಿರುವ ಪ್ರಯತ್ನಗಳಿಗೆ ಮತ್ತು ಹೊರದೇಶಗಳಿಂದ ಇನ್ನೂ ಹೆಚ್ಚಿನ ಕೌಶಲವನ್ನು ತರಲು ಇದು ಬೆಂಬಲ ನೀಡುತ್ತದೆ. ಪ್ರಾಚ್ಯ ಮತ್ತು ಪಾಶ್ಚಾತ್ಯ ಬ್ಯಾಂಕಿಂಗ್ ವೃತ್ತಿನಿರತರಿಗೆ ವಿನಿಮಯ ಕಾರ್ಯಕ್ರಮಗಳ ಮೂಲಕ ಬಿಟ್ಟುಕೊಟ್ಟಿದ್ದ ತಂತ್ರಜ್ಞಾನವನ್ನು ಪುನಃ ಸಮೀಕರಿಸಲು ಇರುವ ಬೇಡಿಕೆ ಲಾಭದಾಯಕವಾಗಬಹುದಾಗಿದೆ.

ಈ ವಿಷಯದಲ್ಲಿ ಪೋಲೆಂಡ್ ಒಂದು ಉದಾಹರಣೆಯಾಗಬಲ್ಲುದು. ಕಾರ್ಯವಿಧಾನವನ್ನು ಹೇಗೆ ಸುಧಾರಿಸಬೇಕೆಂಬುದರ ಬಗ್ಗೆ ತಮಗಿರುವ ಜ್ಞಾನವನ್ನು ಒದಗಿಸಬೇಕೆಂದು ಪರದೇಶಗಳಲ್ಲಿರುವ ಪೋಲಿಷ್ ಸಮುದಾಯದ ಅನೇಕ ಸದಸ್ಯರುಗಳನ್ನು ಉತ್ತೇಜಿಸಲಾಗುತ್ತಿದೆ. ಅಷ್ಟೇ ಅಲ್ಲದೆ ಅನೇಕ ವಿದೇಶೀ ಪರಿಣತರನ್ನು ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗುತ್ತಿದೆ. ಪೋಲೆಂಡ್ ರಾಷ್ಟ್ರೀಯ ಬ್ಯಾಂಕು ಯುಕೆ, ಜರ್ಮನಿ, ಫ್ರಾನ್ಸ್, ಡೆನ್‌ಮಾರ್ಕ್ ಮತ್ತು ನೆದರ್‌ಲ್ಯಾಂಡ್ಸ್‌ನ ಸೆಂಟ್ರಲ್ ಬ್ಯಾಂಕುಗಳ ವಿಶೇಷ ತಜ್ಞರೊಂದಿಗೆ ಅಂತರರಾಷ್ಟ್ರೀಯ ಹಣ ನಿಧಿಯ ನೆರವಿನಿಂದ ಕೆಲಸ ಮಾಡುತ್ತಿದೆ. ಮತ್ತೆ ಪೂರ್ವ ಜರ್ಮನಿ ಒಂದು ವಿಶೇಷ ಸಂದರ್ಭವನ್ನು ಪ್ರತಿನಿಧಿಸುತ್ತದೆ. ಪಶ್ಚಿಮ ಜರ್ಮನಿಯ ಬ್ಯಾಂಕುಗಳು ಮತ್ತು ಉಳಿತಾಯ ಬ್ಯಾಂಕುಗಳು "ಪ್ರಾಚ್ಯ" ಮತ್ತು "ಪಾಶ್ಚಾತ್ಯ" ಸಿಬ್ಬಂದಿಯನ್ನು ಮತ್ತು ಪೂರ್ವದಲ್ಲಿ ಅವರ ಶಾಖೆಗಳ ಹಾಗೂ ಸಂಸ್ಥೆಗಳ ನಿರ್ವಹಣೆಯನ್ನು ಸಮನ್ವಯಗೊಳಿಸುವಲ್ಲಿ ಗಣನೀಯ ಪ್ರಮಾಣದ ಸಾಧನೆಯನ್ನು ಮಾಡಿವೆ.

5 ಬ್ಯಾಂಕ್ ಸುಧಾರಣೆಯ ಗುರಿಗಳ ದೃಷ್ಟಿಯಿಂದ, ಪೂರ್ವ ಯೂರೋಪ್ ದೇಶಗಳಲ್ಲಿ ಬ್ಯಾಂಕ್ ನಿಯಂತ್ರಣಕ್ಕಾಗಿ ಪರಿಣಾಮಕಾರಿ ವ್ಯವಸ್ಥೆಯೊಂದನ್ನು ಸೃಷ್ಟಿಸುವ ಮತ್ತು ಸಂಘಟಿಸುವ ಅತ್ಯಂತ ಕಷ್ಟಕರ ಕೆಲಸ ದಿನಗಳೆದಂತೆ ಹೆಚ್ಚು ತುರ್ತಿನ ಅಗತ್ಯವಾಗಿ ಪರಿಣಮಿಸುತ್ತಿದೆ. ಯಾವ ವಿಧವಾದ ಅನುಕೂಲತೆಗಳೂ ಇಲ್ಲದೆ, ವಾಣಿಜ್ಯ ಬ್ಯಾಂಕುಗಳನ್ನು ಕಟ್ಟುತ್ತಿರುವಾಗ, ದ್ರವತ್ವ ಮತ್ತು ಶೋಧನ ಸಾಮರ್ಥ್ಯದ ಕಠಿಣ ನಿಯಂತ್ರಣಗಳು ವಿಶೇಷವಾದ ಪ್ರಾಮುಖ್ಯ ಪಡೆಯುತ್ತವೆ. ಏಕೆಂದರೆ ಇಂತಹ ಆರಂಭಿಕ ಹಂತದಲ್ಲಿ ಬ್ಯಾಂಕು ಕುಸಿಯುವ ಸಂಭವ ಹೆಚ್ಚಾಗಿರುತ್ತದೆ. ಬ್ಯಾಂಕಿನ ವೈಫಲ್ಯದಿಂದಾಗಿ, ಮಾರುಕಟ್ಟೆ ಅರ್ಥವ್ಯವಸ್ಥೆಯ ಹಾದಿಯಲ್ಲಿ ರಚಿಸಲಾದ ವಾಣಿಜ್ಯ ಬ್ಯಾಂಕಿಂಗ್‌ವ್ಯವಸ್ಥೆಯಲ್ಲಿ, ಸಾರ್ವಜನಿಕರಲ್ಲಿ ಇನ್ನೂ ಮೂಡುತ್ತಿರುವ ನಂಬಿಕೆಯನ್ನು ನಾಶಮಾಡಬಹುದು. ಆರ್ಥಿಕ ಮತ್ತು ಹಣಕಾಸು ಸಂಘದ ಒಡಂಬಡಿಕೆಯೊಂದಿಗೆ 1ನೇ ಜುಲೈ 1990ರಿಂದ ಪಶ್ಚಿಮ ಜರ್ಮನಿಯ ಹಣಕಾಸು ಮತ್ತು ಉದರಿ ವಿನಿಮಯಗಳನ್ನು ಇಡಿಯಾಗಿ ವಿಸ್ತರಿಸುವ ಮೂಲಕ ಮತ್ತೊಮ್ಮೆ ಪೂರ್ವ ಜರ್ಮನಿ ಈ ಕ್ಷೇತ್ರದಲ್ಲೂ ಮುನ್ನಡೆ ಸಾಧಿಸಿತು. ●

---

# ಬ್ಯಾಂಕಿಂಗ್ ಸುದ್ದಿಸಾರ

## ಮಹಾಬಲ

### ಭಾರತೀಯ ಸ್ಟೇಟ್ ಬ್ಯಾಂಕ್ ದಾಖಲೆ

ಭಾರತೀಯ ಸ್ಟೇಟ್ ಬ್ಯಾಂಕ್ ಕಳೆದ ಹಣಕಾಸು ವರ್ಷದಲ್ಲಿ 107 ಕೋಟಿ ರೂಪಾಯಿಗಳ ಲಾಭ ಗಳಿಸಿದೆ. ಠೇವಣಿಗಳು 49,936 ಕೋಟಿ ರೂಪಾಯಿಗಳ ಗಡಿ ದಾಟಿದ್ದರೆ, ಮುಂಗಡಗಳು 40,438 ಕೋಟಿ ರೂಪಾಯಿ ಮಟ್ಟ ತಲುಪಿವೆ.

### ಅಮೆರಿಕಾ ವಾಣಿಜ್ಯ ಬ್ಯಾಂಕು ಬಿಕ್ಕಟ್ಟಿನಲ್ಲಿ

ಅಮೆರಿಕಾ ಸಂ. ಸಂಸ್ಥಾನದ ವಾಣಿಜ್ಯ ಬ್ಯಾಂಕುಗಳು ತೊಂದರೆಗೆ ಸಿಲುಕಿಕೊಂಡಿವೆ. ಫೆಡರಲ್ ಡಿಪಾಸಿಟ್ ಇನ್‌ಷ್ಯೂರೆನ್ಸ್ ಕಾರ್ಪೋರೇಷನ್‌ನ ಆಸ್ತಿಗಳು ಈ ವರ್ಷಾಂತ್ಯದೊಳಗೆ 7 ಬಿಲಿಯನ್ ಡಾಲರ್‌ನಿಂದ 1.1 ಬಿಲಿಯನ್‌ಡಾಲರ್‌ಗಳಿಗೆ ಇಳಿಯಬಹುದೆಂದು ಅಂದಾಜು ಮಾಡಲಾಗಿದೆ. ಪೂರ್ವ ಕರಾವಳಿಯ ಹಲವು ದೊಡ್ಡ ಬ್ಯಾಂಕುಗಳು ನೀಡಿದ್ದ ಸ್ಥಿರಾಸ್ತಿ ಸಾಲಗಳ ವೈಫಲ್ಯ ಈ ಬಿಕ್ಕಟ್ಟಿಗೆ ಪ್ರಮುಖ ಕಾರಣವೆನ್ನಲಾಗಿದೆ. ದಿವಾಳಿಯಾದ ಬ್ಯಾಂಕುಗಳ ಸಂಖ್ಯೆಗಿಂತ, ದಿವಾಳಿಯಾದ ಬ್ಯಾಂಕುಗಳ ಗಾತ್ರವೇ ಆತಂಕಕಾರಿಯೆನ್ನಲಾಗಿದೆ. ಈ ಬಿಕ್ಕಟ್ಟಿನಿಂದ ಸುಮಾರು 140ರಿಂದ 200 ಬಿಲಿಯನ್ ಡಾಲರ್ ನಷ್ಟವಾಗುವ ನಿರೀಕ್ಷೆಯಿದೆ.

### ಆರೋಗ್ಯ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನ ನೆರವು

ಆರೋಗ್ಯ ಸಂಬಂಧಿ ಕಾರ್ಯಕ್ರಮಗಳಿಗೆ ವಿಶ್ವ ಬ್ಯಾಂಕ್ ಸುಮಾರು ರೂ 100 ಕೋಟಿ ಮೊತ್ತದ, ರಿಯಾಯಿತಿ ಬಡ್ಡಿ ದರದ ಸಾಲ ನೀಡಲಿದೆ. ಅಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿ ಮೂಲಕ ನೀಡಲಾಗುವ ಈ ಸಾಲವನ್ನು 50 ವರುಷಗಳಲ್ಲಿ, ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಮರುಪಾವತಿ ಮಾಡಬಹುದಾಗಿದೆ. ದೇಶದ ಸಾಮಾಜಿಕವಾಗಿ/ಆರ್ಥಿಕವಾಗಿ ಹಿಂದುಳಿದ ಕ್ಷೇತ್ರಗಳಲ್ಲಿ ಆರೋಗ್ಯದ ಮೂಲಸೌಕರ್ಯ ಒದಗಿಸಲು ಈ ಸಾಲದ ಬಹುಭಾಗವನ್ನು ಉಪಯೋಗಿಸಲಾಗುವುದು. ಸಮುದಾಯ ಆರೋಗ್ಯ ಕೇಂದ್ರದ ಸ್ಥಾಪನೆ, ಮಲೇರಿಯಾ, ಕುಷ್ಠ, ಕ್ಷಯರೋಗ ಹಾಗೂ ಅಂಧತ್ವ ನಿವಾರಣೆಗಳಿಗೆ ಈ ನೆರವು ಹಣವನ್ನು ಉಪಯೋಗಿಸಲಾಗುವುದು.

### ಚಿನ್ನದ ಆಧಾರದ ಮೇಲೆ ಸಾಲ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾವು 25 ಟನ್ ಚಿನ್ನದ ಆಧಾರದಮೇಲೆ 200 ಬಿಲಿಯನ್ ಡಾಲರ್ ಸಾಲ ಪಡೆಯಲು ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಆಫ್ ಜಪಾನ್‌ಗಳೊಡನೆ ಒಪ್ಪಂದ ಮಾಡಿಕೊಂಡಿದೆ. ಸಾಲದ ಅವಧಿ ಒಂದು ತಿಂಗಳಾಗಿದ್ದು, ಇದಕ್ಕೆ ಲಂಡನ್ ಅಂತರ ಬ್ಯಾಂಕ್ ನೀಡಿಕೆ ದರ(LIBOR)ಕ್ಕಿಂತ ಸ್ವಲ್ಪ ಹೆಚ್ಚು ಬಡ್ಡಿ ದರ ವಿಧಿಸಲಾಗುವುದು. ಈ ಸಾಲವನ್ನು ಹೆಚ್ಚಿನ ಬಡ್ಡಿ ಹೊರೆಯಿಲ್ಲದೆ ನವೀಕರಿಸಬಹುದು.

### ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವು

ಏಷ್ಯಾ ಅಭಿವೃದ್ಧಿ ಬ್ಯಾಂಕು, ಅಂತರರಾಷ್ಟ್ರೀಯ ಸಮಗ್ರ ಪರ್ವತ ಅಭಿವೃದ್ಧಿ ಕೇಂದ್ರಕ್ಕೆ 6 ಲಕ್ಷ ಡಾಲರ್‌ಗಳ ಅನುದಾನ ನೀಡಿದೆ. ಭಾರತ, ಪಾಕಿಸ್ತಾನ, ಚೀನಾ ಹಾಗೂ ನೇಪಾಳಗಳಲ್ಲಿ ಹಿಂದೂಕುಷ್ ಪರ್ವತ ಸಾಲಿನಲ್ಲಿ ಕೃಷಿ ಅಭಿವೃದ್ಧಿಪಡಿಸಲು ಈ ನೆರವು ಬಳಸಲಾಗುವುದು.

### ಉದರಿ ಪ್ರತ್ಯಯ: ಭಾರತಕ್ಕೆ ಕುಂದು

ಅಮೆರಿಕಾದ ಉದರಿ ದರ್ಜೆ ನೀಡಿಕೆ ಸಂಸ್ಥೆಯಾದ ಮೂಡೀಸ್ ಇನ್‌ವೆಸ್ಟರ್ ಸರ್ವಿಸಸ್, ಭಾರತದ ವಿನಿಯೋಜನ ದರ್ಜೆಯನ್ನು ವಿನಿಯೋಜನವಲ್ಲದ ಅಥವಾ ಸಟ್ಟಾ (Speculative) ದರ್ಜೆಗೆ ಇಳಿಸಿದೆ. ಭಾರತವು ಏಜೆನ್ಸಿಯ ನಿರೀಕ್ಷೆಗೆ ತಲುಪದಿದ್ದುದೇ ಇದಕ್ಕೆ ಕಾರಣವೆನ್ನಲಾಗಿದೆ. ದೀರ್ಘಾವಧಿ ಸಾಲದ ವಿಷಯದಲ್ಲಿ Baa3 ದರ್ಜೆಯಿಂದ Ba2 ದರ್ಜೆಗೂ ಅಲ್ಪಾವಧಿ ಸಾಲಕ್ಕಾಗಿ Prime 3ರಿಂದ Not Primeಗೂ ಇಳಿಸಲಾಗಿದೆ.

ಮತ್ತೊಂದು ಉದರಿ ಪ್ರತ್ಯಯ ಸಂಸ್ಥೆಯಾದ ಸ್ಟಾಂಡರ್ಡ್ ಅಂಡ್ ಪೂರ್, ರಾಜೀವ್ ಗಾಂಧಿಯವರ ಹತ್ಯೆಯ ದಿನಾಂಕದಿಂದ, ಭಾರತದ ದೀರ್ಘಾವಧಿ ಸಾಲ ದರ್ಜೆಯನ್ನು BBBನಿಂದ BB+ಗೆ ಇಳಿಸಿದೆ.

### ವಿಶ್ವದ 1000 ಉನ್ನತ ಬ್ಯಾಂಕುಗಳಲ್ಲಿ, ಭಾರತದ 8 ಬ್ಯಾಂಕುಗಳು

ಒಂದು ರಾಜ್ಯ ಸಹಕಾರಿ ಬ್ಯಾಂಕ್ ಸೇರಿದಂತೆ, ಭಾರತದ ಎಂಟು ಬ್ಯಾಂಕುಗಳು, ವಿಶ್ವದ 1000 ಉನ್ನತ ಬ್ಯಾಂಕುಗಳ ಪೈಕಿ ಸ್ಥಾನ ಪಡೆದಿವೆ. ಲಂಡನ್‌ನಲ್ಲಿರುವ 'ಬ್ಯಾಂಕರ್' ಪತ್ರಿಕೆ ಸಿದ್ಧಪಡಿಸಿದ ಸುದ್ದಿಯಂತೆ ಭಾರತದ ಬ್ಯಾಂಕುಗಳ ಸ್ಥಾನಮಾನ ಈ ರೀತಿ ಇದೆ:

| ಬ್ಯಾಂಕ್ | ಸ್ಥಾನ | ಬಂಡವಾಳ (ದ.ಲ. ಡಾಲರು) |
|---|---|---|
| ಭಾರತೀಯ ಸ್ಟೇಟ್ ಬ್ಯಾಂಕ್ | 333 | 595 |
| ಕೆನರಾ ಬ್ಯಾಂಕ್ | 532 | 312 |
| ಬ್ಯಾಂಕ್ ಆಫ್ ಇಂಡಿಯಾ | 594 | 261 |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | 856 | 143 |
| ಬ್ಯಾಂಕ್ ಆಫ್ ಬರೋಡಾ | 905 | 126 |
| ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ | 880 | 135 |
| ಭಾರತದ ಕೈಗಾರಿಕಾಭಿವೃದ್ಧಿ ಬ್ಯಾಂಕ್ | 206 | 1008 |
| ಭಾರತದ ರಫ್ತಾಮದು ಬ್ಯಾಂಕ್ | 715 | 192 |

## ಬಡ್ಡಿ ದರ ಏರಿಕೆ

ಜುಲೈ 4, 1991ರಿಂದ ಅನ್ವಯವಾಗುವಂತೆ ರಿಸರ್ವ್ ಬ್ಯಾಂಕ್ ಬ್ಯಾಂಕು ದರವನ್ನು ಶೇ 10ರಿಂದ 11ಕ್ಕೆ ಏರಿಸಿದೆ. ಇದೇ ಸಮಯದಲ್ಲಿ ಅನುಸೂಚಿತ ವಾಣಿಜ್ಯ ಬ್ಯಾಂಕ್‌ಗಳ ಠೇವಣಿ ಹಾಗೂ ಸಾಲಗಳ ಮೇಲಿನ ಬಡ್ಡಿದರಗಳನ್ನು ಶೇ. 1ರಷ್ಟು ಹೆಚ್ಚಿಸಲಾಗಿದೆ.

| | ಹಳೆ ಬಡ್ಡಿ ದರ | ಹೊಸ ಬಡ್ಡಿ ದರ |
|---|---|---|
| 46 ದಿನಗಳಿಗೆ ಮೀರಿದ ಮತ್ತು ಒಂದು ವರ್ಷಕ್ಕೆ ಕಡಿಮೆ ಅವಧಿ | ಶೇ 8 | ಶೇ 9 |
| 1 ವರ್ಷಕ್ಕೂ ಹೆಚ್ಚು, ಮತ್ತು ಎರಡು ವರ್ಷಕ್ಕೆ ಕಡಿಮೆ ಅವಧಿ | ಶೇ 9 | ಶೇ 10 |
| 2ರಿಂದ 3 ವರ್ಷ | ಶೇ 10 | ಶೇ 11 |
| 3 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟು | ಶೇ 12 | ಶೇ 13 |

ಹೆಚ್ಚಿಸಿದ ಬಡ್ಡಿ ದರಗಳು ಹೊಸದಾದ ಹಾಗೂ ನವೀಕರಿಸಲಾಗುವ ಠೇವಣಿಗಳಿಗೆ ಅನ್ವಯವಾಗುತ್ತದೆ.

ಎರಡು ಲಕ್ಷ ಮೀರಿದ ದುಡಿಯುವ ಬಂಡವಾಳ ಸಾಲದ ಮೇಲಿನ ಗರಿಷ್ಠ ಬಡ್ಡಿ ದರವನ್ನು ಶೇ 17ರಿಂದ ಶೇ 18.5ಕ್ಕೆ ಏರಿಸಲಾಗಿದೆ. ಮೀಯಾದಿ ಕಾರದ ಮರುಹಣಕಾಸು ಸೌಲಭ್ಯದ ಬಡ್ಡಿ ದರ ಶೇ 17ಕ್ಕೆ ಏರಿಸಲಾಗಿದೆ. ●

## ರೂಪಾಯಿ ಅಪಮೌಲ್ಯ

ರಿಸರ್ವ್ ಬ್ಯಾಂಕ್ 3–7–91ರಂದು, ಎರಡು ಹಂತದ ಕಾರ್ಯಾಚರಣೆಯಲ್ಲಿ ರೂಪಾಯಿಯ ಮೌಲ್ಯವನ್ನು ವಿಶ್ವದ ಪ್ರಮುಖ ಕರೆನ್ಸಿಗಳ ಎದುರು, ಅಧೋಮೂಲ್ಯನಗೊಳಿಸಿದೆ. ಜೂನ್ 28, 1991ರ ದರಗಳ ಆಧಾರದಲ್ಲಿ, ಮೌಲ್ಯಗಳ ಪುನರ್ವಿಮರ್ಶೆ ಮಾಡಿದೆ.

| ಕರೆನ್ಸಿ | ಶೇಕಡಾ ಅಪಮೌಲ್ಯ |
|---|---|
| ಅಮೆರಿಕಾ ಡಾಲರ್ | 18.74% |
| ಪೌಂಡ್ ಸ್ಟರ್ಲಿಂಗ್ | 17.38% |
| ಡಾಯಿಷ್ ಮಾರ್ಕ್ | 17.21% |
| ಜಪಾನಿಯೆನ್ | 18.25% |

ಈ ಕ್ರಮದಿಂದ ರಫ್ತಿಗೆ ಉತ್ತೇಜನ ಲಭಿಸಿ, ವಾಸ್ತವವಾದ ಆಮದು ಬದಲಿಗೆ ಅವಕಾಶ ಮಾಡಿಕೊಟ್ಟು, ವಿದೇಶ ಬಂಡವಾಳ ಹರಿವಿಗೆ ಅನುಕೂಲವಾಗುವುದೆಂದು ನಿರೀಕ್ಷಿಸಲಾಗಿದೆ. ●

---

# 'ಬ್ಯಾಂಕಿಂಗ್ ಪ್ರಪಂಚ'ದ ಆಜೀವ ಚಂದಾದಾರರು

(ಮಾರ್ಚ್ 1991ರ ಸಂಚಿಕೆಯಿಂದ ಮುಂದುವರಿದುದು)

ಶ್ರೀ/ಶ್ರೀಮತಿ

೮೮೪ ಎಫ್. ಅಸಾದುಲ್ಲ ಬೇಗ್
೮೮೫ ಪಿ. ಗಣೇಶ ಶೆಣೈ
೮೮೬ ಡಾ. ಸಿ. ಕೆ. ರೇಣುಕಾರ್ಯ
೮೮೭ ಪ್ರಕಾಶ್ ಮಂಗದುಮ್ಮ
೮೮೮ ಲಕ್ಷ್ಮಣ ಪ. ಭಂಡಾರಕಾರ್
೮೮೯ ಉದಯಕುಮಾರ ದಾನಿ
೮೯೦ ಮೀಣಾಕುಮಾರಿ
೮೯೧ ವಿ. ರಾಮಲಿಂಗ
೮೯೨ ಕೆ. ವೆಂಕಟೇಶ ಕಾಮತ್
೮೯೩ ದೇವರಾಜ
೮೯೪ ರಾಮಮೂರ್ತಿ
೮೯೫ ವಾಸುದೇವ ಎಂ. ರಾವ್
೮೯೬ ವೆಂಕಟೇಶ್
೮೯೭ ಎನ್. ಶ್ರೀಧರ್
೮೯೮ ಎ. ರವೀ
೮೯೯ ಎನ್. ಎನ್. ಪಾರ್ವತೀಕರ್
೯೦೦ ನೂ. ವಿ. ಕಲಾ, ವಿಜ್ಞಾನ ಮತ್ತು ಡಾ. ಪಾಂಡುರಂಗ ಪತ್ಕಿ ವಾಣಿಜ್ಯ ಮಹಾವಿದ್ಯಾಲಯ
ಕಲಬುರ್ಗಿ–೫೮೫ ೧೦೩
೯೦೧ ಕಾವೇರಿ ಕಾಲೇಜು, ಗೋಣಿಕೊಪ್ಪಲು–೫೭೧ ೨೧೩
೯೦೨ ಸಿಬ್ಬಂದಿ ತರಬೇತಿ ಕೇಂದ್ರ
**ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್**
ಕಲಬುರ್ಗಿ–೫೮೫ ೧೦೧
೯೦೩ ತುಮಕೂರು ಜಿಲ್ಲಾ ಕೇಂದ್ರ
**ಸಹಕಾರಿ ಬ್ಯಾಂಕು**
ತುಮಕೂರು–೫೭೨ ೧೦೧
೯೦೪ **ಮೈಸೂರು ಬ್ಯಾಂಕು**
ಕೂಡ್ಲಗಿ ಶಾಖೆ–೫೮೩ ೧೩೫
೯೦೫ **ಮೈಸೂರು ಬ್ಯಾಂಕು**
ಚಾಮರಾಜನಗರ–೫೭೧ ೩೧೩
೯೦೬ **ಮೈಸೂರು ಬ್ಯಾಂಕು**
ಮಾರ್ಕೆಟ್ ಶಾಖೆ, ಮೈಸೂರು–೫೭೦ ೦೦೧
೯೦೭ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ತುಮಕೂರು–೫೭೨ ೦೦೧
೯೦೮ ಮಹಾರಾಣಿ ಕಲಾ ಕಾಲೇಜು
ಬೆಂಗಳೂರು–೫೬೦ ೦೦೯
೯೦೯ ಆರ್. ಸಿ. ವಾಣಿಜ್ಯ ಕಾಲೇಜು
ಬೆಂಗಳೂರು–೫೬೦ ೦೦೧
೯೧೦ ಎಸ್. ಬಿ. ಎಂಟರ್‌ಪ್ರೈಸಸ್
ಬೆಂಗಳೂರು–೫೬೦ ೦೧೦

R. N. 36702/83



PRINTED BY G. H. KRISHNAMURTHY, MYSORE PRINTING AND PUBLISHING HOUSE., CLOCK TOWER SQUARE, MYSORE-1